ರಂಜನೆ ಬೋಧನೆ ಪ್ರಚೋದನೆ

ಗೌರಿ

ಲಂಕೇಶ್

ಆಗಸ್ಟ್ 14, 2013 ಪುಟ 20 ರೂ. 14/-

ಸಂದರ್ಶನ
'ಅದಿಮ' ರಾಮಯ್ಯ



ಸಂಗೀತ ನಿರ್ದೇಶಕ ಭರತ್



ಐಟಿ ದಾಳಿಯ ಅಸಲಿ ಕಥೆ ಭಾಗ-2



ಸುನೀಲ್‌ಕುಮಾರ್ ದೇಸಾಯಿ
'ತಂದಾನ' ವಿವಾದ


ಮಠದ ಹೆಸರಲ್ಲಿ ಶೇಖರನ ಲ್ಯಾಂಡ್ ಡೀಲ್‌ಗಳು




ನಾಲ್ಕು ಪೆಟ್ಟಿಗೆ ಚಿನ್ನ, ಕಪಾಟು ತುಂಬ ಅಗ್ರಿಮೆಂಟ್,
ಮೊಬೈಲ್‌ನಲ್ಲಿ ಅಪ್ಸರೆಯರು!



ಮಗನಿಗಾಗಿ
ಮ್ಯಾಗಿ ಮಳ್ಳಾಟ



ಬಾಲಸುಬ್ರಮಣ್ಯಂ ವಿರುದ್ಧ
ಹಕ್ಕು ಚ್ಯುತಿ ಯಾಕೆ?



ಒಕ್ಕಲಿಗ ನಾಯಕರಿಗೆ ಐದು ಪ್ರಶ್ನೆಗಳು





ಬಲೆಗೆ ಬಿದ್ದ ಪಾಯ್ಸನ್ ರಾಮ

ಮಂಡ್ಯ
ಸರ್ಕಾರಿ ನೌಕರರಿಗೆ ಮಂಚೇಗೌಡನ ಸೈಟು ವಂಚನೆ



ಎಲೆಕ್ಷನ್ ಬೋರೋ... ಬೋರು...!



ಸಂಪಾದಕ

• ಪಾರ್ವತೀಶ
bparvateesha@gmail.com

ಬಿಡಿ ಚಿತ್ರಗಳು

ನಮ್ಮ ಗೌರವಾನ್ವಿತ ಶಾಸಕರ ಗೌರವಕ್ಕೆ ಹಕ್ಕುಗಳಿಗೆ ಧಕ್ಕೆ ಮಾಡಿರುವ ಈ ಬಾಲಸುಬ್ರಹ್ಮಣ್ಯಂ ಯಾರು?

ಈತ ಒಬ್ಬ ಐಎಎಸ್ ಅಧಿಕಾರಿಯಾಗಿದ್ದವರು ಎಂಬುದೇನೊ ಸರಿ? ಆದರೆ ಎಂತಹ ಅಧಿಕಾರಿಯಾಗಿದ್ದರು! ತಮಗಿದ್ದ ಅಧಿಕಾರವನ್ನು ಯಾರಿಗಾಗಿ ಬಳಸಿದರು? ದುಡ್ಡು ಕಾಸು ಏನಾದರೂ ಚೆನ್ನಾಗಿ ಮಾಡಿಕೊಂಡರಾ ಅಂತೆಲ್ಲಾ ನೋಡಬೇಕು. ತಾನೆ?

ನಿಮಗೆ ಸಿನಿಮಾ ನಿರ್ದೇಶಕ ಎಂ.ಎಸ್. ಸತ್ಯು ಗೊತ್ತಿರಬೇಕಲ್ಲ?

ಈ ಸತ್ಯು 1981ರಲ್ಲಿ 'ಬರ' ಎನ್ನುವ ಕನ್ನಡ ಸಿನಿಮಾ ನಿರ್ಮಿಸಿ, ನಿರ್ದೇಶಿಸಿದ್ದರು. ಅನಂತ್‌ನಾಗ್ ಆ ಚಿತ್ರದ ನಾಯಕ.

ಅವರೊಮ್ಮೆ ತಮ್ಮ ಆ ಅನುಭವವನ್ನು ಸಾಹಿತಿ ಯು.ಆರ್ ಅನಂತಮೂರ್ತಿಯವರೊಂದಿಗೆ ಹೇಳಿದಾಗ ಅದೇ ಆಮೇಲೆ 'ಬರ' ಕತೆಯಾಯಿತು. ನಂತರ ಅನಂತಮೂರ್ತಿ ಎಂ.ಎಸ್.ಸತ್ಯುಗೆ ಹೇಳಿ 'ಬರ' ಸಿನಿಮಾ ಆಗಿ ಪ್ರಶಸ್ತಿ ಪಡೆಯಿತು. ಜನರ ಮನಸ್ಸನ್ನೂ ಕಲಕಿತ್ತು.

ಅತ್ಯುನ್ನತ ಹುದ್ದೆಯಲ್ಲಿದ್ದಾಗಲೂ ನಾಡಿನ ಬಡವರ, ಜನಸಾಮಾನ್ಯರ ಕಷ್ಟಗಳಿಗೆ ಸ್ಪಂದಿಸುವ ಗುಣವಿದ್ದ ಬಾಲಸುಬ್ರಮಣ್ಯಂ ತಮಿಳುನಾಡು ಮೂಲದ ಶ್ರೀಮಂತ ಕುಟುಂಬದ ಹಿನ್ನೆಲೆಯಿಂದ ಬಂದವರು. ಅವರ ಅಜ್ಜ ಒಂದು ಕಾಲದಲ್ಲಿ ಬರ್ಮಾದಲ್ಲಿದ್ದು ವ್ಯಾಪಾರ ವಹಿವಾಟು ನಡೆಸಿಕೊಂಡು ಚೆನ್ನಾಗಿದ್ದವರು. ಆದರೆ ಬರ್ಮಾದಲ್ಲೊಮ್ಮೆ ಭಾರತೀಯರ ವಿರುದ್ಧ ದಂಗೆ ಆರಂಭವಾದಾಗ ಅವರ ಕುಟುಂಬ ತಮ್ಮದೆಲ್ಲವನ್ನೂ ಅಲ್ಲೇ ಬಿಟ್ಟು ಕಾಲ್ನಡಿಗೆಯಲ್ಲಿ ಇಂಡಿಯಾಗೆ

ಬನ್ನಿ, ಈ 'ದ್ರೋಹಿ' ಬಾಲಸುಬ್ರಮಣ್ಯಂ ಬಗ್ಗೆ ತಿಳಿಯೋಣ!

ಕರ್ನಾಟಕದ ಶಾಸನಸಭೆಯಲ್ಲಿ ಇದೇ ಮೊದಲ ಬಾರಿಗೆ ನಮ್ಮ ಚುನಾಯಿತ ಜನಪ್ರತಿನಿಧಿಗಳೆಲ್ಲ ಪಕ್ಷಭೇದ ಮರೆತು ಒಂದು ನಿರ್ಣಯಕ್ಕೆ ಬೆಂಬಲ ಸೂಚಿಸಿದ್ದಾರೆ.

ಅದು ವಿ. ಬಾಲಸುಬ್ರಮಣ್ಯಂ ವಿರುದ್ಧ ವಿಚಾರಣೆಗಾಗಿ ಹಕ್ಕುಚ್ಯುತಿ ಸಮಿತಿಗೆ ಪ್ರಕರಣವನ್ನು ಶಿಫಾರಸ್ಸು ಮಾಡಿರುವ ವಿಚಾರ.

ತಮಗಿರುವ ವಿಶೇಷ ಹಕ್ಕುಗಳು, ಸೌಲಭ್ಯಗಳ ಪ್ರಿವಿಲೇಜ್ ಬಗ್ಗೆ ನಮ್ಮ ಶಾಸಕರುಗಳಿಗೆ ವಿಪರೀತ ಕಾಳಜಿ. ಇದೊಂದು ಸಂವಿಧಾನದತ್ತವಾದ ಅಧಿಕಾರವೇ ಹೌದಾದರೂ ಈ ಸೌಲಭ್ಯಗಳೊಂದಿಗೆ ಕೆಲವು ಕರ್ತವ್ಯ-ಜವಾಬ್ದಾರಿಗಳೂ ನಮ್ಮ ಚುನಾಯಿತ ಪ್ರತಿನಿಧಿಗಳ ಮೇಲಿರುತ್ತವೆ.

ಈ ಅಂಶ ಸದಾಕಾಲ ನಿರ್ಲಕ್ಷ್ಯಕ್ಕೊಳಗಾಗಿದೆ.

ಈಗತಾನೆ ಮುಗಿದ ಕರ್ನಾಟಕದ ಹೊಸ ಸರ್ಕಾರದ ಬಜೆಟ್ ಅಧಿವೇಶನದಲ್ಲಿ ಬೇಕಾದಷ್ಟು ಚರ್ಚೆ-ವಾಗ್ವಾದಗಳಾಗಿವೆ. ಕೆಸರೆರಚಾಟ, ಆರೋಪ-ಪ್ರತ್ಯಾರೋಪಗಳಲ್ಲಿ ಆಡಳಿತ-ವಿರೋಧ ಪಕ್ಷಗಳ ಪ್ರತಿನಿಧಿಗಳಲ್ಲಿ ತೊಡಗಿದ್ದರು. ಯಾವ ವಿಚಾರದಲ್ಲೂ ಏಕಾಭಿಪ್ರಾಯ ಹೊಂದಿರದಿದ್ದ ಶಾಸಕರೆಲ್ಲಾ ಈ ಒಂದು ವಿಚಾರದಲ್ಲಿ ಮಾತ್ರ ಒಮ್ಮತ ವ್ಯಕ್ತಪಡಿಸಿದ್ದಾರೆ.


ನಿವೃತ್ತ ಐಎಎಸ್ ಅಧಿಕಾರಿ ವಿ.ಬಾಲಸುಬ್ರಮಣ್ಯಂ 'ಸರ್ಕಾರಿ ಭೂಮಿ ಒತ್ತುವರಿಯಾಗಿರುವ' ಬಗ್ಗೆ ತನಿಖೆ ನಡೆಸಿ ವರದಿ ಸಲ್ಲಿಸಲು ಸರ್ಕಾರವೇ ನೇಮಿಸಿದ್ದ ಸಮಿತಿಯ ಮುಖ್ಯಸ್ಥರಾಗಿದ್ದವರು. ಈ ಅಧಿಕಾರಿ ತಮಗೊಪ್ಪಿಸಿದ್ದ ಕೆಲಸವನ್ನು ಶ್ರದ್ಧೆಯಿಂದ ಮಾಡಿಮುಗಿಸಿದ್ದಾರೆ. ಆದರೆ 2011ರಲ್ಲೇ ವರದಿ ಸಲ್ಲಿಸಿದ್ದರೂ ಸರ್ಕಾರ ಇದುವರೆಗೂ ಅದರ ಬಗ್ಗೆ ಚಕಾರ ಎತ್ತಿಲ್ಲ.

'ಹಿಂದಿನ ಬಿಜೆಪಿ ಸರ್ಕಾರ ಮಾತ್ರವಲ್ಲ'

ಈಗಿನ ಕಾಂಗ್ರೆಸ್ ಸರ್ಕಾರವೂ ಸಹ.

ಇತ್ತೀಚೆಗೆ ಈ ಬಾಲಸುಬ್ರಹ್ಮಣ್ಯಂ ಕನ್ನಡ ದಿನಪತ್ರಿಕೆಯೊಂದರಲ್ಲಿ ಮಾತನಾಡುವಾಗ ಶ್ರೀನಿವಾಸಪುರ ಶಾಸಕರಾದ ರಮೇಶ್ ಕುಮಾರ್‌ರವರ ಬಗ್ಗೆ ಅರಣ್ಯ ಭೂಮಿ ಒತ್ತುವರಿ ಮಾಡಿದ್ದಾನೆ ಎಂಬರ್ಥ ಬರುವಂತೆ ಹೇಳಿಕೆ ನೀಡಿದ್ದರೆಂಬ ವಿಚಾರವೇ ವಿವಾದವಾಗಿ ಕೊನೆಗದು ಶಾಸನಸಭೆಯಲ್ಲೂ ಚರ್ಚೆಯಾಗಿದೆ. ಅದೀಗ ಶಾಸಕರ ಅನುಮೋದನೆ ಮೇರೆಗೆ ಪ್ರಿವಿಲೇಜ್ ಕಮಿಟಿಯ ವಿಚಾರಣೆಗೆ ಹೋಗುವಂತಾಗಿದೆ.

ಹೋಗಲಿ...



ಗುಲ್ಬರ್ಗಾ ಪ್ರಾಂತ್ಯದಲ್ಲಿ ಒಮ್ಮೆ ಬರಗಾಲ ಬಂದಿದ್ದಾಗ, ಆ ಬರದ ಸ್ಥಿತಿಯನ್ನು ಇಬ್ಬರು ರಾಜಕೀಯ ನಾಯಕರು ಹೇಗೆ ತಮ್ಮ ಸ್ವಾರ್ಥಕ್ಕೆ ಹಾಗೂ ರಾಜಕೀಯ ಹಿತಾಸಕ್ತಿಗಾಗಿ ಬಳಸಿಕೊಳ್ಳುತ್ತಾರೆಂಬುದನ್ನು ಆ ಸಿನಿಮಾ ಕತೆ ಹೇಳಿತ್ತು. ಅದೇ ಕತೆಯಲ್ಲಿ ಪ್ರಾಮಾಣಿಕ, ಸೂಕ್ಷ್ಮತೆಯುಳ್ಳ ಜಿಲ್ಲಾಧಿಕಾರಿಯೊಬ್ಬ ರಾಕ್ಷಸ ರಾಜಕಾರಣಿಗಳ ನಡುವೆ ಸಿಲುಕಿ ಹೇಗೆ ನಲುಗಿ ಹೋಗುತ್ತಾನೆಂಬುದನ್ನು, ಆತನ ಹತಾಶೆ, ಪ್ರತಿಭಟನೆಯನ್ನು ಬರ ಸಿನಿಮಾ ಬಿಂಬಿಸಿತ್ತು.

1981ರಲ್ಲಿ ಅತ್ಯುತ್ತಮ ಪ್ರಾದೇಶಿಕ ಭಾಷೆ ಚಿತ್ರವೆಂಬ ರಾಷ್ಟ್ರಪ್ರಶಸ್ತಿ ಪಡೆದ 'ಬರ' ಸಿನಿಮಾದ ನಿಜವಾದ ನಾಯಕ ಇದೇ ಬಾಲಸುಬ್ರಮಣ್ಯಂ!

ಅವರು ಗುಲ್ಬರ್ಗಾ ಜಿಲ್ಲಾಧಿಕಾರಿಯಾಗಿದ್ದಾಗ ಬರಗಾಲದಲ್ಲೂ ಜನರ ಜೀವದೊಂದಿಗೆ ಆಟವಾಡುವ ರಾಜಕಾರಣಿಗಳ ಕ್ರೌರ್ಯವನ್ನೆಲ್ಲಾ ನೋಡುತ್ತಿದ್ದರು.

ಬಂದು ನಂತರ ತಮಿಳುನಾಡಿನಲ್ಲೇ ತಮ್ಮ ಬದುಕನ್ನು ಮತ್ತೆ ಕಟ್ಟಿಕೊಂಡರು.

ಈಗ ಬಾಲಸುಬ್ರಹ್ಮಣ್ಯಂ ಬಗ್ಗೆ ಕಿಡಿ ಕಾರುತ್ತಿರುವ, ಶಿಕ್ಷಿಸಲು ಹೊರಟಿರುವ ಕಾಂಗ್ರೆಸ್ ಪಕ್ಷಕ್ಕೇ ಅವರು ಕಾಂಗ್ರೆಸ್‌ಗೆ ಮಾಡಿದ ಉಪಕಾರದ ಬಗ್ಗೆ ಅರಿವಿಲ್ಲವೆಂದು ಕಾಣುತ್ತದೆ.

ಅದು ಎಮರ್ಜೆನ್ಸಿಯ ಕಾಲ.

ಇಂದಿರಾಗಾಂಧಿ ದೇಶಾದ್ಯಂತ ಜಾರಿಗೆ ತಂದ 20 ಅಂಶಗಳ ಕಾರ್ಯಕ್ರಮವು ಕಾಂಗ್ರೆಸ್‌ನ ಓಟ್ ಬ್ಯಾಂಕನ್ನು ಖಾತರಿಗೊಳಿಸಲು ನೆರವಾಗಿತ್ತು. ಈ 20 ಅಂಶಗಳ ಕಾರ್ಯಕ್ರಮದ ಐಡಿಯಾ ರೂಪು ತಳೆದದ್ದು ದೆಹಲಿಯಲ್ಲಲ್ಲ, ಯೋಜನಾ ಭವನದಲ್ಲೂ ಅಲ್ಲ... ಕರ್ನಾಟಕದಲ್ಲಿ...!

ಆಗ ಮುಖ್ಯಮಂತ್ರಿಯಾಗಿದ್ದ ದೇವರಾಜ ಅರಸರ ಆರ್ಥಿಕ ಸಲಹೆಗಾರರಾಗಿದ್ದ ಡಾ. ಡಿ.ಎಂ. ನಂಜುಂಡಪ್ಪನವರು 'ಮೊದಲು 16 ಅಂಶಗಳ ಕಾರ್ಯಕ್ರಮ ರೂಪಿಸಿದ್ದರು. ನಂತರ ಅದು 20ಕ್ಕೇರಿತು. ದೇಶದ ಬಡವರಿಗೆ, ದಲಿತರಿಗೆ ಕೊಂಚ ಚೈತನ್ಯ ನೀಡುವಂತಿದ್ದ ಆ ಯೋಜನೆಯನ್ನು ಕರ್ನಾಟಕದಲ್ಲಿ ಚೆನ್ನಾಗಿ ಜಾರಿಗೆ ತಂದವರಲ್ಲಿ ಬಾಲಸುಬ್ರಮಣ್ಯಂ ಕೂಡ ಒಬ್ಬರಾಗಿದ್ದರು. ಆಗಿನ 'ಸುಧಾ' ವಾರಪತ್ರಿಕೆಯಲ್ಲಿ ಶೈಲೇಶ್‌ಚಂದ್ರ ಗುಪ್ತಾ (ನಂತರ ಪ್ರಜಾವಾಣಿಯ ಸಂಪಾದಕರಾಗಿ ನಿವೃತ್ತರಾಗಿದ್ದಾರೆ) ಇದರ ಬಗ್ಗೆ ದೇವರಾಜ ಅರಸು ಕೂಡ ಮೆಚ್ಚಿಕೊಳ್ಳುವಂತಹ ಒಂದು ಸಚಿತ್ರ ಲೇಖನ ಬರೆದಿದ್ದರು.

ಅದೇ ಕೆಟ್ಟ ಕಾಲದಲ್ಲಿ ಹೊಟೇಲ್ ಮಾಲೀಕರುಗಳು ಯದ್ವಾತದ್ವಾ ಬೆಲೆ ಏರಿಸಿ ಜನರನ್ನು ಸುಲಿಯುತ್ತಿದ್ದಾಗ ತಿಂಡಿಗಳ ಬೆಲೆಗೆ ತಕ್ಕಷ್ಟು ತೂಕವೂ ಇರಬೇಕೆಂಬ ನಿಯಮದ ಜಾರಿಗೆ ಬಾಲಸುಬ್ರಮಣ್ಯಂ ಕಾರಣರಾಗಿದ್ದರು. ಒಮ್ಮೆ ಬೆಂಗಳೂರಿನ High Rise Buildingsಗಳಲ್ಲಿ ವಾಹನ ಪಾರ್ಕಿಂಗ್ ಶುಲ್ಕ ವಸೂಲಿ ಮಾಡುತ್ತಿದ್ದ ಅಕ್ರಮ ದಂಧೆಗೂ ಬಾಲಸುಬ್ರಮಣ್ಯಂ ಕಡಿವಾಣ ಹಾಕಿದರು.

ಕೆಲಕಾಲ ಕೇಂದ್ರ ಸರ್ಕಾರದ ಜವಳಿ ಇಲಾಖೆಯಲ್ಲೂ ಕೆಲಸ ಮಾಡಿದ ಬಾಲಸುಬ್ರಮಣ್ಯಂ ಕರ್ನಾಟಕದ ರೇಷ್ಮೆ ಬೆಳೆಗಾರರಿಗೆ ಅದ್ಭುತ ರೀತಿಯಲ್ಲಿ ನೆರವಾದರು. ಅವರು ರೇಷ್ಮೆ ಮಂಡಳಿಯಲ್ಲಿದ್ದಾಗ ನಂತರ ಕರ್ನಾಟಕದ ರೇಷ್ಮೆ ಇಲಾಖೆಯ ಕಮೀಷನರ್ ಆಗಿ ಬಂದಾಗ ಇಲ್ಲಿ ರೇಷ್ಮೆಗೂಡಿನ ವಹಿವಾಟು ಅರಾಜಕವಾಗಿತ್ತು. ರೇಷ್ಮೆಗೂಡು ಬೆಳೆಯುವ ರೈತರನ್ನು ಬ್ರೋಕರ್‌ಗಳನ್ನು ಹಾಗೂ ರೇಷ್ಮೆ ವ್ಯಾಪಾರಿಗಳು ವಂಚಿಸಿ ಶೋಷಿಸುತ್ತಿದ್ದರು. ಇದನ್ನು ತಪ್ಪಿಸಿ ಶ್ರಮಜೀವಿ

..9

ಹಾದಿಮನಿ ಮತ್ತು ಪ್ರಜಾವಾಣಿ



ಮೊನ್ನೆ ಭಾನುವಾರದ (28) ಪ್ರಜಾವಾಣಿಯ ಸಾಪ್ತಾಹಿಕ ಪುರವಣಿ ನೋಡಿದ ನಂತರ ಒಂದೆರಡು ಮಾತು ಬರೆಯಬೇಕೆನಿಸಿದೆ.


ಕಲಾವಿದ ಹಾದಿಮನಿ ರಚಿಸಿರುವ ಕಿ.ರಂ. ನಾಗರಾಜರ ಒಂದು ರೇಖಾಚಿತ್ರವು ಸಾವಿರಾರು ಓದುಗರನ್ನು ಬೆರಗಾಗಿಸಿದೆ.

ಕಿ.ರಂ. ನಾಗರಾಜ್ ಕುರಿತ ನಟರಾಜ್ ಹುಳಿಯಾರ್‌ರವರ ಪದ್ಯವೊಂದು ಭಾನುವಾರದ ಪ್ರಜಾವಾಣಿಯಲ್ಲಿ ಪ್ರಕಟಗೊಂಡಿದೆ. ಹಾದಿಮನಿ ಆ ಪದ್ಯಕ್ಕೊಂದು ಕಿ.ರಂ. ಚಿತ್ರ ರೂಪಿಸಿದ್ದಾರೆ.

ಕಿ.ರಂ. ಮೇಷ್ಟ್ರ ಮುಗ್ಧ ಮುಖ ಚಹರೆ, ಗುಂಗುರು ಕೂದಲಿನ ಸೊಬಗು, ಕಣ್ಣುಗಳ ಮಿಂಚು, ಅವ್ಯಕ್ತ ನಗುವೆಲ್ಲಾ ಜೀವ ತಳೆದುಬಂದಂತೆ... ಒಂದು ನೈಜ ಫೋಟೋ ಕೂಡಾ ಎಂದಿಗೂ ಬಿಂಬಿಸಲಾಗದಂತೆ ಕಾಣುವ ಕಿ.ರಂ.ರ ಈ ರೇಖಾಚಿತ್ರ ಓದುಗರಲ್ಲಿ ಸಂಭ್ರಮ ಮೂಡಿಸಿದೆ.

ಹಾದಿಮನಿ ಈ ನಾಡಿನ ಶ್ರೇಷ್ಠ ಕಲಾವಿದ ಎಂಬುದು ಇನ್ನೊಮ್ಮೆ ಸಾಬೀತಾಗಿದೆ.

ಕೆಲ ತಿಂಗಳ ಹಿಂದೆ ಹಾದಿಮನಿ ಕುರಿತಂತೆ ನಮ್ಮಲ್ಲಿ ಒಂದು ತನಿಖಾ ವರದಿ ಪ್ರಕಟವಾಗಿತ್ತು. ಈ ಕಲಾವಿದನ ಕೆಲ ಕೆಟ್ಟ ವರ್ತನೆಗಳು ಪೊಲೀಸರ ತನಕ ಹೋಗಿ ಕೇಸ್ ದಾಖಲಾಗಿತ್ತು. ಆ ಹಂತದಲ್ಲಿ 'ಲಂಕೇಶ್' ತನ್ನನ್ನು ಸರಿಪಡಿಸಿಕೊಂಡರೆ ಚಿತ್ರ ಕಲಾವಿದನಾಗಿ ಅವರಿಗೆ ಈಗಲೂ ಉತ್ತಮ ಭವಿಷ್ಯವಿದೆ ಎಂದು ಆಶಿಸಿತ್ತು.




ಈಗ ಹಾದಿಮನಿ ತಮ್ಮ ಎಂದಿನ ಲಯ ಕಂಡುಕೊಳ್ಳುತ್ತಿದ್ದಾರೆ.

ಇದರ credit ಪ್ರಜಾವಾಣಿ ಸಂಸ್ಥೆಗೆ ಸೇರಬೇಕು. ಹಾದಿಮನಿ ತಮ್ಮ ಕಲಾವಿದನ ಬದುಕು ಹಾಗೂ ಕೆರಿಯರ್ ಅನ್ನು ಪುನರ್ ನಿರ್ಮಿಸಿಕೊಳ್ಳಲು ಪ್ರಜಾವಾಣಿ ಅಪಾರ ಔದಾರ್ಯ ಹಾಗೂ ಸಹನೆ ತೋರಿದ ಕಾರಣ ಇದು ಸಾಧ್ಯವಾಗಿದೆ.

MEDIA FACTS & TERROR FICTION

ಭಯೋತ್ಪಾದನೆಯ ವಿಚಾರ ಕುರಿತಂತೆ ನಮ್ಮ ಸರ್ಕಾರಗಳು, ಪೊಲೀಸರು ಹಾಗೂ ಕೆಲವು ಸಮೂಹ ಮಾಧ್ಯಮಗಳು ತೋರುವ ಪೂರ್ವಾಗ್ರಹಗಳನ್ನು ಬಹುಶಃ ನೀವೂ ಗಮನಿಸಿರುತ್ತೀರಿ.



ವ್ಯವಸ್ಥಿತವಾಗಿಯೋ ಎಂಬಂತೆ ನಡೆದಿರುವ ಈ ಅಪಪ್ರಚಾರದ ದಾಳಿಗೆ ಪದೇಪದೇ ಗುರಿಯಾಗುತ್ತಿರುವವರು....

ಈ ನಾಡಿನ ಮುಸಲ್ಮಾನರು!

ಅಂತಹ ಪ್ರಕರಣಗಳು ನಡೆದಾಗ ಪೊಲೀಸರು ಹೇಳಿದ್ದೇನು ಮೀಡಿಯಾಗಳು ಬಿಂಬಿಸಿದ್ದೇನನ್ನು ಹಾಗೂ ಅಂತಿಮವಾಗಿ ಕೋರ್ಟ್‌ನಲ್ಲಿ ಸಾಬೀತಾಗಿದ್ದೇನೆಂಬ ಬಗ್ಗೆ ಯುವ ಪತ್ರಕರ್ತರ ತಂಡವೊಂದು ಒಂದು ವಿವರವಾದ ಅಧ್ಯಯನವನ್ನೇ ನಡೆಸಿದೆ.

ಈಗದು `Media Facts & Terror Fiction' ಎಂಬ ಪುಸ್ತಕ ರೂಪದಲ್ಲಿ ಕಳೆದ ವಾರ ಬಿಡುಗಡೆಯಾಗಿದೆ.

ಎಲ್ಲಿ ಎಂತದ್ದೇ ಭಯೋತ್ಪಾದಕ ಘಟನೆ ನಡೆದರೂ, ಏನನ್ನು ಆಳವಾಗಿ ಪರಿಶೀಲಿಸದೆ ಏಕಾಏಕಿ ಮುಸ್ಲಿಮರನ್ನೇ ಶಂಕಿತರನ್ನಾಗಿಸುವ ಪೊಲೀಸರು, ಅದಕ್ಕೆ ಇನ್ನಷ್ಟು ಕಲ್ಪಿತ ಸಂಗತಿಗಳನ್ನು ಸೇರಿಸಿ ಪ್ರಚಾರ ಮಾಡುವ ಕೆಲ ಮೀಡಿಯಾಗಳ ಅತಿರೇಕದ ವರ್ತನೆಗಳನ್ನು ಈ ಪುಸ್ತಕ ಸಾಕ್ಷಿ ಪುರಾವೆಗಳ ಸಹಿತ ಬಯಲುಗೊಳಿಸಿದೆ.

ಇದು ನಮ್ಮ ಸಮಾಜದ ಪ್ರಮುಖ ಅಂಗಸಂಸ್ಥೆಗಳು ಇನ್ನಷ್ಟು ಹೊಣೆಗಾರಿಕೆಯಿಂದ ವರ್ತಿಸಬೇಕೆಂಬುದನ್ನು ಹೇಳುತ್ತಿದೆ.

Students Islamic Organisation of India ಎಂಬ ಸಂಸ್ಥೆ ಪ್ರಕಟಿಸಿರುವ ಈ ಅಧ್ಯಯನ ಕೃತಿಯ ಪ್ರತಿ ಬೇಕೆನಿಸಿದರೆ ದಯವಿಟ್ಟು 'ಲಂಕೇಶ್' ಸಂಪರ್ಕಿಸಿ.

080-26646861 ಅಥವಾ rio karzone@gmail.com ಸಂಪರ್ಕಿಸಿ.

ಹಣ ಇರುವೆಡೆ ಮನುಷ್ಯರ ಗುಣ...!

ಕಂಡಹಾಗೆ



• ಗೌರಿ ಲಂಕೇಶ್
ಪ್ರಧಾನ ಸಂಪಾದಕಿ
editorlankesh@gmail.com

ಶ್ರಮಜೀವಿಯಾದ ಸದಾನಂದ ಪಟೇಲ್ ಕಷ್ಟಪಟ್ಟು ದುಡಿದು ಕೋಟ್ಯಾಂತರ ರೂಪಾಯಿಗಳ ಆಸ್ತಿಯ ಮಾಲೀಕನಾಗಿದ್ದಾನೆ. ತನ್ನ ಸಾಧನೆ ಬಗ್ಗೆ ಆತನಿಗೆ ತುಂಬಾ ಹೆಮ್ಮೆ ಇದೆ. ಹಾಗೆಯೇ ಅಶಿಕ್ಷಿತಳಾದ ಹೆಂಡತಿ ಸ್ವರ್ಣಳ ಬಗ್ಗೆ ಇನ್ನೂ ಉಂಡಾಡಿ ಗುಂಡನಂತಾಡುವ ಮಗ ಅಜಯ್ ಬಗ್ಗೆ ಮತ್ತು ಸೌಮ್ಯ ಸ್ವಭಾವದವಳಂತೆ ಕಂಡರೂ ಒಳಗೊಳಗೆ ಕುತಂತ್ರಿಯಾದ ಸೊಸೆ ಪ್ರೀತಿ ಬಗ್ಗೆ ಸದಾನಂದನಿಗೆ ಇನ್ನಿಲ್ಲದಷ್ಟು ಕೋಪ, ಅಸಹನೆ ಮತ್ತು ಸೇಡಿನ ಭಾವನೆ. ಈ ಮೂವರೂ ತನ್ನ ಮರಣದ ನಂತರ ತಾನು ಕಷ್ಟಪಟ್ಟು ದುಡಿದಿದ್ದ ಆಸ್ತಿಯನ್ನೆಲ್ಲ ಮಜಾ ಮಾಡುತ್ತಾ ಕರಗಿಸುತ್ತಾರೆ ಎಂಬ ಗುಮಾನಿ. ಆದಕ್ಕಿಂತ ಮುಖ್ಯವಾಗಿ ಇವರೆಲ್ಲರಿಂದಾಗಿ ತನ್ನದು ಎಂಬುದು ಯಾವುದೂ ಈ ಭೂಮಿಯ ಮೇಲೆ ಉಳಿದಿರುವುದಿಲ್ಲ ಎಂಬ ಜಿಗುಪ್ಸೆ.



ಈತನ ಹೆಸರು ಸದಾನಂದ ಎಂಬುದಾದರೂ ಈತ ಕೋಪಿಷ್ಟ. ಈತ ನಕ್ಕಿದ್ದನ್ನು ನೋಡಿದವರೇ ಇಲ್ಲ. ಇತರರ ಬಗ್ಗೆ ಅಸೂಕ್ಷ್ಮವಾಗಿ ವರ್ತಿಸುವ, ಸದಾ ತನ್ನ ಬಗ್ಗೆ ಮಾತ್ರ ಯೋಚಿಸುವ ಸದಾನಂದ ಆಫೀಸಿನಲ್ಲೂ, ಮನೆಯಲ್ಲೂ ಸರ್ವಾಧಿಕಾರಿ ಧೋರಣೆಯನ್ನು ಮೆರೆಯುವವನು. ಇದರಿಂದ ಬೇಸರವಾದರೂ ಸಂಪ್ರದಾಯಸ್ಥ ಗೃಹಿಣಿಯಾದ ಸ್ವರ್ಣ ಪ್ರತಿಭಟಿಸುವುದಿಲ್ಲ. ಆದರೆ ಅವರ ಮಗ ಅಜಯ್ ಹಾಗಲ್ಲ. ಕಾರಣವಿದ್ದರೂ, ಇರದಿದ್ದರೂ ತನ್ನ ಅಪ್ಪ ಸದಾನಂದ ತಾಳಿರುವ ನಿಲುವಿಗೆ ವಿರುದ್ಧವಾದ ನಿಲುವನ್ನು ತೆಗೆದುಕೊಳ್ಳುವುದು ಅಜಯ್‌ನ ಸ್ವಭಾವ. ಆ ಮೂಲಕವಾದರೂ ತನ್ನನ್ನು ಸದಾ ಅವಮಾನಿಸುವ ಅಪ್ಪನ ವಿರುದ್ಧ 'ಕ್ರಾಂತಿ' ಸಾಧಿಸಿದ್ದೇನೆಂಬ ಭಾವನೆ ಅವನಿಗೆ.

ಸದಾನಂದನ ಸೊಸೆ ಪ್ರೀತಿ ಮೇಲುನೋಟಕ್ಕೆ ತಗ್ಗಿಬಗ್ಗಿ ನಡೆಯುವ ಯುವತಿಯಂತೆ ಕಂಡರೂ ಆಕೆ ಧನಪಿಶಾಚಿ. ಮುಂದೊಂದು ದಿನ ಸದಾನಂದ ಸತ್ತು ಆತನ ಆಸ್ತಿಯೆಲ್ಲಾ ಅಜಯ್ ಪಾಲಿಗೆ ಬರುತ್ತೆ ಎಂಬ ಕಾರಣಕ್ಕೇ ಆ ಉಂಡಾಡಿಗುಂಡನನ್ನು ಮದುವೆ ಆಗಿರುವವಳು.

ಈ ಮೂವರಲ್ಲದೆ ಸದಾನಂದನ ಬದುಕಿನಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುವವಳು ಮಧ್ಯವಯಸ್ಕಿನ ಮಹಿಳೆ ಕಿರಣ್ ಪಿಣಸಿನಕಾಯಿ. ಸದಾನಂದನ ಕಂಪನಿಯ ಬೋರ್ಡ್‌ನಲ್ಲಿ ಪ್ರಮುಖ ಸದಸ್ಯೆಯಾಗಿರುವ ಕಿರಣ್ ಸದಾನಂದನ ಪ್ರೇಯಸಿ ಕೂಡ ಹೌದು. ಬೇರೆಯವರ ಬದುಕನ್ನು ನಿಯಂತ್ರಿಸುವಲ್ಲಿ ಎತ್ತಿದ ಕೈಯಾದ ಸದಾನಂದ ತನ್ನ ಮತ್ತು ಕಿರಣ್ ನಡುವಿನ ಸಂಬಂಧದ ಬಗ್ಗೆ ಬೇರೆಯವರಿಗೆ ಸುಳಿವು ಸಿಗಕೂಡದೆಂದು ಆಕೆಗೆ ಕುಡುಕನೊಬ್ಬನೊಂದಿಗೆ ಮದುವೆ ಮಾಡಿರುತ್ತಾನೆ. ಹಾಗೆ ಮಾಡುವ ಮೂಲಕ ಆಕೆಗೆ ಸಮಾಜದಲ್ಲಿ ಸ್ಥಾನಮಾನ, ಆಕೆಯ ಗಂಡನಿಗೆ ದಿನನಿತ್ಯ ಗುಂಡು ಮತ್ತು ತನಗೆ ಓರ್ವ ಸುಂದರ ಮತ್ತು ದಕ್ಷ ನಲ್ಲೆ ಸಿಗುವಂತೆ ಏರ್ಪಾಡು ಮಾಡಿಕೊಂಡಿರುತ್ತಾನೆ.

ಗುಂಡು, ಸಿಗರೇಟು ಹವ್ಯಾಸಗಳನ್ನು ಹೊಂದಿರುವ ಸದಾನಂದ ಹೈ ಬಿಪಿ, ಡಯಾಬಿಟೀಸ್ ಮತ್ತು ಹೈ ಕೊಲೆಸ್ಟರಾಲ್ ಸಮಸ್ಯೆಗಳನ್ನು ಎದುರಿಸುತ್ತಿದ್ದಾನೆ. ತಾನು ಬದುಕಿರುವಾಗ ತನ್ನ ಸುತ್ತಲಿನವರನ್ನು ತನ್ನ ತಾಳಕ್ಕೆ ತಕ್ಕಂತೆ ಕುಣಿಸುತ್ತಿರುವ ಸದಾನಂದ ತಾನು ಸತ್ತ ಮೇಲೂ ಅವರೆಲ್ಲರ ಮೇಲೆ ನಿಯಂತ್ರಣ ಹೊಂದಿರುವುದು ಹೇಗೆ ಎಂದು ಯೋಚಿಸುತ್ತಾನೆ. ತನ್ನ ಅಪಾರ ಸಂಪತ್ತಿನಲ್ಲಿ ನಯಾಪೈಸೆಗೂ ತನ್ನ ಪತ್ನಿ ಸ್ವರ್ಣ, ಮಗ ಅಜಯ್, ಸೊಸೆ ಪ್ರೀತಿ ಮತ್ತು ಕೊನೆಗೆ ನಲ್ಲೆ ಕಿರಣ್ ಕೂಡ ಅರ್ಹರಲ್ಲ ಎಂದೇ ನಂಬಿರುವ ಸದಾನಂದ ಸಾಯುವ ಮುನ್ನ ಒಂದು ವಿಚಿತ್ರ ವಿಲ್ ಬರೆದಿಡುತ್ತಾನೆ.

ಆ ವಿಲ್‌ನಲ್ಲಿ ತನ್ನ ಸರ್ವ ಸಂಪತ್ತನ್ನು ಒಂದು ಟ್ರಸ್ಟ್‌ಗೆ ಬರೆದಿರುತ್ತಾನೆ. ಆ ಟ್ರಸ್ಟ್‌ಗೆ ಕಿರಣ್‌ಳನ್ನೇ ಟ್ರಸ್ಟೀ ಮಾಡಿರುತ್ತಾನೆ. ತನ್ನ 23ರ ಹರೆಯದ ಮಗ ಅಜಯ್‌ಗೆ 45 ವರ್ಷ ವಯಸ್ಸು ತುಂಬಿದಾಗ ಟ್ರಸ್ಟ್ ಅನ್ನು ಇಲ್ಲವಾಗಿಸಿ ತನ್ನ ಇಡೀ ಆಸ್ತಿ ಮಗನಿಗೆ ಬರಬೇಕು ಎಂದು ಆದೇಶಿಸಿರುತ್ತಾನೆ. ಆದರೆ ಅದಕ್ಕೂ ಹತ್ತಾರು ಶರತ್ತುಗಳನ್ನು ವಿಧಿಸಿರುತ್ತಾನೆ. ಪ್ರತಿದಿನ ಅಜಯ್ ಆಫೀಸಿಗೆ ಹಾಜರಾಗಬೇಕೆಂದೂ, ತನಗೆ ಇಷ್ಟವಾದ ಹಲ್ವಾವನ್ನು ಸಕ್ಕರೆ ಕಾಯಿಲೆಯಿಂದಾಗಿ ತಿನ್ನಲಾಗಿದ್ದರಿಂದ ಮಗನೂ ತನ್ನ ಜೀವಮಾನವಿಡೀ ಹಲ್ವಾ ತಿನ್ನಬಾರದೆಂದೂ ಶರತ್ತು ಹಾಕಿರುತ್ತಾನೆ. ಮನೆ ನಿರ್ವಹಣೆಗೆ, ಕೈಕಾಸಿಗೆ ತನ್ನ ಕುಟುಂಬದ ಮೂವರಿಗಲ್ಲದೆ ಟ್ರಸ್ಟಿ ಆಗಿರುವ ಕಿರಣ್‌ಳಿಗೂ ಮಾಸಾಶನವನ್ನು ನಿಗದಿ ಮಾಡಿರುತ್ತಾನೆ. ಹೀಗೆ ತನ್ನ ಸಮಾಧಿಯಿಂದಲೂ ತನ್ನ ಕುಟುಂಬದ ಮೇಲೆ ನಿಯಂತ್ರಣವನ್ನು ಸ್ಥಾಪಿಸಲು ಹವಣಿಸುವ ಸದಾನಂದ ತನ್ನ ನಲ್ಲೆ ಕಿರಣ್‌ಳನ್ನು ಸುಮ್ಮನೆ ಬಿಡುತ್ತಾನೆಯೇ? ಆಕೆ ಕೂಡ ತನ್ನ ಕುಡುಕ ಗಂಡನನ್ನು ತೊರೆದು ತನ್ನ ಮನೆಯಲ್ಲೇ ತನ್ನ ಸಂಸಾರದ ಸದಸ್ಯೆಯಂತೆ ವಾಸಿಸಬೇಕು ಎಂದು ಆದೇಶಿಸಿರುತ್ತಾನೆ. ತಾನು ವಿಧಿಸಿರುವ ಶರತ್ತುಗಳಲ್ಲಿ ಒಂದೇ ಒಂದನ್ನೂ ತನ್ನ ಕುಟುಂಬದ ಸದಸ್ಯರು ಪಾಲಿಸದಿದ್ದರೆ ತನ್ನ ಇಡೀ ಆಸ್ತಿಯನ್ನು ತಾನು ಪಟ್ಟಿ ಮಾಡಿರುವ ಸಂಘ ಸಂಸ್ಥೆಗಳಿಗೆ ದಾನ ಮಾಡಿ ತನ್ನ ಕುಟುಂಬಕ್ಕೆ ನಯಾಪೈಸೆ ಸಿಗಕೂಡದೆಂದು ಹೇಳಿರುತ್ತಾನೆ. ಆದರೆ ಈ ವಿಲ್‌ಅನ್ನು ಸದಾನಂದ ಗೌಪ್ಯವಾಗಿಟ್ಟಿರುತ್ತಾನೆ.

ಒಂದು ದಿನ ಸದಾನಂದ ಹೃದಯಘಾತದಿಂದ ಸತ್ತೇ ಹೋಗುತ್ತಾನೆ. ತಾನು ಬರೆದಿಟ್ಟಿರುವ ವಿಲ್‌ಗೆ ತನ್ನ ಕುಟುಂಬದ ಸದಸ್ಯರು ಹೇಗೆ ಪ್ರತಿಕ್ರಿಯಿಸುತ್ತಾರೆಂದು ನೋಡಲು ಆತನ ಆತ್ಮ ಅಲ್ಲೇ ಅವರೆಲ್ಲರ ಮಧ್ಯೆ ಸುಳಿದಾಡುತ್ತಿರುತ್ತದೆ. ಆದರೆ ಅವರು ಯಾರಿಗೂ ಆತನ ಆತ್ಮ ತಮ್ಮ ಮಧ್ಯೆ ಇರುವುದು ಗೊತ್ತಿರುವುದಿಲ್ಲ.

ಹೊಸ ಯೋಜನೆಗಳನ್ನು ಜಾರಿಗೆ ತರುವ ಹುಮ್ಮಸ್ಸಿನಲ್ಲಿದ್ದ ಅಜಯ್, ಐಶಾರಾಮಿ ಬದುಕಿನ ಕನಸ್ಸು ಕಾಣುತ್ತಿದ್ದ ಪ್ರೀತಿ, ತನ್ನ ಗಂಡ ನಲ್ಲೆಯೋರ್ವಳನ್ನು ಇಟ್ಟುಕೊಂಡಿದ್ದು ಗೊತ್ತಾಗಿರುವ ಸ್ವರ್ಣ ಎಲ್ಲರೂ ಸದಾನಂದನ ವಿಲ್‌ನಲ್ಲಿರುವ ಶರತ್ತುಗಳನ್ನು ಕೇಳಿ ದಂಗುಬಡಿದು ಹೋಗುತ್ತಾರೆ. ಅವರು ಇಂತಹ ಪರಿಸ್ಥಿತಿಯಲ್ಲಿರುವಾಗಲೇ ಅವರೊಂದಿಗೆ ವಾಸಿಸಲು ಕಿರಣ್ ಬರುತ್ತಾಳೆ.



ಸಧಾನಂದನ ವಿಲ್‌ನಿಂದಾಗಿ ಆತನ ಕುಟುಂಬದ ಸದಸ್ಯರ ಬದುಕೇ ಉಲ್ಟಾ ಪಲ್ಟಾ ಆಗಿದೆ. ಆದರೆ ವಿಧಿ ಇಲ್ಲ. ಆತನ ಕೋಟ್ಯಾಂತರ ರೂಪಾಯಿಗಳ ಆಸ್ತಿ ಬರಬೇಕೆಂದರೆ ಆತನ ಎಲ್ಲಾ ಶರತ್ತುಗಳನ್ನು ಪಾಲಿಸಬೇಕು. ಅಜಯ್ ಕೊನೆಗೂ ಜವಾಬ್ದಾರಿಯನ್ನು ಹೊತ್ತುಕೊಳ್ಳುವುದನ್ನು ಕಲಿಯುತ್ತಾನೆ. ಆತನ ಹೆಂಡತಿ ಸ್ವರ್ಣ ಗೃಹಿಣಿಯಾಗಿ, ಹೆಂಡತಿಯಾಗಿ ತನ್ನ ಮಿತಿಗಳನ್ನು ಅರ್ಥಮಾಡಿಕೊಳ್ಳುತ್ತಾಳೆ. ಸೊಸೆ ಪ್ರೀತಿ ಕೂಡ ಬದುಕಿನಲ್ಲಿ ಹಣವೇ ಮುಖ್ಯವಲ್ಲ ಎಂದು ಮನಗಾಣುತ್ತಾಳೆ. ಇನ್ನು ಕಿರಣ್‌ಳಲ್ಲೂ ಬದಲಾವಣೆಗಳಾಗುತ್ತವೆ. ಸದಾನಂಧ ಹೇಗೆ ತನ್ನನ್ನು ಮತ್ತು ತನ್ನ ಕುಟುಂಬದವರನ್ನು ಮರಣೋತ್ತರವೂ ನಿಯಂತ್ರಿಸುತ್ತಿದ್ದಾನೆ ಎಂದು ಗೊತ್ತಾಗುತ್ತದೆ. ಕೊನೆಗೆ ಅವರೆಲ್ಲ ಜೊತೆಗೂಡಿ ಸದಾನಂದನ ಕೀಲುಬೊಂಬೆಗಳಾಗಿ ಬದುಕುವುದನ್ನು ನಿಲ್ಲಿಸುವ ಮೂಲಕ ಆತನ ವಿರುದ್ಧ ಸೇಡು ತೀರಿಸಿಕೊಳ್ಳುತ್ತಾನೆ.

–ಇದು ಯಾವುದೋ ಸಿನಿಮಾದ ಕತೆಯಲ್ಲ, ಬದಲಾಗಿ ನನ್ನ ಹಲವಾರು ವರ್ಷಗಳ ಸ್ನೇಹಿತನೂ, ಸಾಹಿತಿಯೂ ಆಗಿರುವ ಮಹೇಶ್ ದತ್ತಾನಿ ಬರೆದಿರುವ ಒಂದು ನಾಟಕದ ಕಥಾಸಾರಾಂಶ. ಇದನ್ನು ಒಂದು ಸೀರಿಯಸ್ ವಿಷಯದ ಸುತ್ತ ಹೆಣೆದಿದ್ದರೂ ಡೈಲಾಗ್‌ಗಳು ತುಂಬಾ ಮಜವಾಗಿದ್ದು ಇದೊಂದು ಕಾಮಿಡಿ ನಾಟಕವಾಗಿದೆ. ಈ ಇಂಗ್ಲಿಷ್ ನಾಟಕದ ಹೆಸರು **'Where there is a will'**. ಈಗ ಈ ನಾಟಕವು ಬೆಂಗಳೂರು ಮತ್ತು ಅಲಹಾಬಾದ್ ವಿಶ್ವವಿದ್ಯಾಲಯಗಳಲ್ಲಿ ಪಠ್ಯವಾಗಿದೆ. ಆ ಪಠ್ಯಪುಸ್ತಕವನ್ನು ನಮ್ಮ ಸಂಸ್ಥೆಯೇ ಪ್ರಕಟಿಸಿ ಅಲಹಾಬಾದಿನಲ್ಲೂ ಮಾರಾಟ ಮಾಡುತ್ತಿದೆ.

ಒಂದು ದಿನ ಮಹೇಶ್ ಜೊತೆ ಮಾತನಾಡುತ್ತಿದ್ದಾಗ "ಈ ನಾಟಕವನ್ನು ಯಾರಾದರೂ ಕನ್ನಡಕ್ಕೆ ಅನುವಾದಿಸಿದ್ದಾರಾ?" ಎಂದು ಕೇಳಿದೆ. ಮಹೇಶ್ ಇಲ್ಲ ಅಂದಾಗ ನಾನೇ ಅನುವಾದ ಮಾಡುತ್ತೇನೆ ಅಂದೆ. ಕಳೆದ ಶನಿವಾರ ಮತ್ತು ಭಾನುವಾರ ಆಫೀಸ್ ಕೆಲಸಗಳಿರಲಿಲ್ಲವಾದ್ದರಿಂದ ಮನೆಯಲ್ಲಿ ಕೂತು ಈ ನಾಟಕವನ್ನು ಅನುವಾದ ಮಾಡಿ ಮುಗಿಸಿದೆ.


ಈಗ ಇದನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಬೇಕೋ ಅಥವಾ ಆಸಕ್ತ ರಂಗತಂಡಗಳಿಗೆ ಇದರ ಪ್ರಿಂಟ್‌ಔಟ್ ಕೊಟ್ಟು ಸುಮ್ಮನಾಗಬೇಕೋ ಎಂದು ಯೋಚಿಸುತ್ತಿದ್ದೇನೆ... ●

ಬಡವರನ್ನು ಲೆಕ್ಕ ಹಾಕುವ ಕಾಂಗ್ರೆಸ್ ಕಳ್ಳಾಟ

ಬಡವರ ಸಂಖ್ಯೆ ಕಡಿಮೆಯಾಗಿದೆ ಎಂದು ಯೋಜನಾ ಆಯೋಗ ಘೋಷಿಸಿ ಮತ್ತೆ ನಮಗೆಲ್ಲಾ ಮುಜುಗರ ಉಂಟುಮಾಡಿದೆ. ಅದರ ಪ್ರಕಾರ 2011-12ರಲ್ಲಿ ನಗರದ ಬಡವರ ಪ್ರಮಾಣ ಶೇ 13.7 ಮತ್ತು ಗ್ರಾಮೀಣ ಬಡವರ ಪ್ರಮಾಣ ಶೇ. 25.7. ನಗರದಲ್ಲಿ ಮಾಸಿಕ ತಲಾ ರೂ. ಒಂದು ಸಾವಿರ (ದಿನಕ್ಕೆ33.3 ರೂಪಾಯಿ), ಹಳ್ಳಿಯಲ್ಲಿ ತಲಾ ರೂ.816(ದಿನಕ್ಕೆ27.2 ರೂ) ಖರ್ಚಿನ ಲೆಕ್ಕ ಹಾಕಿ ಈ ನಡಗರ.! ಈ ದೈನಿಕ ವೆಚ್ಚದಲ್ಲಿ ಊಟ ತಿಂಡಿ ಅಲ್ಲದೇ ಇತರ ಖರ್ಚೂ ಸಾಲುತ್ತದೆ ಎಂಬ ಲೆಕ್ಕಾಚಾರ ಯೋಜನಾ ಆಯೋಗದ್ದು. ಹೋಟೆಲಲ್ಲಿ ಕ್ಷೌರಕ್ಕೇ ಈ ಮೊತ್ತ ಸಾಲುವುದಿಲ್ಲ. 2009-10ಕ್ಕೆ ಹೋಲಿಸಿದರೆ, ಯೋಜನಾ ಆಯೋಗದ ಈ ಲೆಕ್ಕಾಚಾರದ ಪ್ರಕಾರ ಬಡವರ ಪ್ರಮಾಣದಲ್ಲಿ ಶೇ. 8ರಷ್ಟು ಇಳಿಮುಖವಾಗಿದೆ. ನೆನಪಿಡಿ, ಈ ಎರಡು ವರ್ಷಗಳಲ್ಲಿ ಬರ, ನಿರುದ್ಯೋಗ, ಹಾಗೇ ಎಂದೂ ಕಾಣದ ಆಹಾರ ಧಾನ್ಯಗಳ ಬೆಲೆ ಹೆಚ್ಚಳ ಆಗಿದೆ ಈ ಅತಾರ್ಕಿಕ ಲೆಕ್ಕಾಚಾರ ಮುಂದುವರಿಸಿದರೆ, ಯೋಜನಾ ಆಯೋಗದ ಪ್ರಕಾರ ಇನ್ನು ಮೂರ್ನಾಲ್ಕು ವರ್ಷಗಳಲ್ಲಿ ದೇಶದ ನಗರಗಳಲ್ಲಿ ಬಡವರೇ ಇರುವುದಿಲ್ಲ, ಹಳ್ಳಿಗಾಡಲ್ಲಿ ಕೇವಲ ಶೇ. 12 ಬಡವರಿರಬಹುದು.

ಕಡುಬಡವರ ಸಂಖ್ಯೆ ಇಳಿಮುಖ ಎನ್ನುವ ಸರ್ಕಾರೀ ಘೋಷಣೆಯ ಹಿಂದಿರುವುದು ದೋಷಪೂರಿತ ಮಾನದಂಡಗಳು. ವಾಸ್ತವದಲ್ಲಿ, ಬಡತನ ಹೆಚ್ಚುತ್ತಿರುವುದು. ಮನೆಬಳಕೆ ವಸ್ತು, ಬಾಡಿಗೆ, ಪ್ರಯಾಣ, ಆರೋಗ್ಯ, ಶಿಕ್ಷಣದ ವೆಚ್ಚದ ಬಳಿಕ ದಿನಕ್ಕೆ ತಲಾ 2200 ಕ್ಯಾಲೋರಿ ಆಹಾರ ಹೊಂದಿಸಲೂ ಸಾಧ್ಯವಾಗದ ಕುಟುಂಬಗಳ ಸಂಖ್ಯೆ 2009-10ರಲ್ಲಿ ಗ್ರಾಮಾಂತರದಲ್ಲಿ ಶೇ. 75. 2004-5ರಲ್ಲಿ ಇದು ಶೇ. 69 ಇತ್ತು.

ಯೋಜನಾ ಆಯೋಗ ತಾನೇ ನಿರ್ಧರಿಸಿದ ಬಡತನದ ಗೆರೆಯ ಮಾನದಂಡ ಪ್ರಕಾರ ಈ ಅಂಕಿಅಂಶ ತಯಾರಿಸಿದೆ. 2011-12ರ ಪೌಷ್ಟಿಕಾಂಶಗಳ ಬಳಕೆಯ ಅಂಕಿಅಂಶ ಹೊರಬಂದರೆ ಈಗಿನ ನೈಜಸ್ಥಿತಿ ಏನೆಂಬುದು ಗೊತ್ತಾದೀತು. ಅದು ಈಗ ಯೋಜನಾ ಆಯೋಗ ಹೇಳಿರುವುದಕ್ಕಿಂತ ಗಂಭೀರವಾಗಿರುವುದಂತೂ ಖಂಡಿತ.



ನಮ್ಮ ವಾಸ್ತವದ ಪರಿಸ್ಥಿತಿಗಿಂತ ತದ್ವಿರುದ್ಧವಾದ 'ಬಡವರ ಸಂಖ್ಯೆ ಇಳಿಮುಖ'ವಾಗುತ್ತಿರುವ ಅಂದಾಜು ಯೋಜನಾ ಆಯೋಗಕ್ಕೆ ಹೇಗೆ ಸಾಧ್ಯವಾಗುತ್ತದೆ? ಆಯೋಗದ ಸಮಸ್ಯೆ ಏನು?

ಬಡತನದ ವ್ಯಾಖ್ಯೆಗೆ ತನ್ನದೇ ಮಾನದಂಡವನ್ನು ಯೋಜನಾ ಆಯೋಗ ಬಳಸಿದ್ದು ಒಂದೇ ಬಾರಿ, ಅದೂ 1973-74ರಲ್ಲಿ. ತದನಂತರದ 40 ವರ್ಷಗಳಲ್ಲಿ ಆಯೋಗ ಕೇವಲ ಬೆಲೆ ಸೂಚ್ಯಂಕವನ್ನಷ್ಟೇ ಬಳಸುತ್ತಾ ಬಂದಿದೆ. ಆಹಾರೇತರ ವೆಚ್ಚದ ಬಳಿಕ ಪೌಷ್ಟಿಕ ಆಹಾರದ ಮಟ್ಟವನ್ನು ಕಾಪಾಡಿಕೊಳ್ಳಲು ಎಷ್ಟು ವೆಚ್ಚವಾಗುತ್ತದೆಂಬ ಸೂಚ್ಯಂಕವನ್ನು ಆಯೋಗ ಮುಟ್ಟಿಯೇ ಇಲ್ಲ. ಬೆಲೆ ಸೂಚ್ಯಂಕ ಜೀವನದ ವೆಚ್ಚವನ್ನು ದೀರ್ಘಕಾಲೀನವಾಗಿ ಅಳೆಯಲು ಅಶಕ್ತ. ತುಟ್ಟಿ ಭತ್ಯೆ ಒಂದರ ಮೂಲಕವೇ ವೇತನ ನಿಗದಿಸಲು ನೋಡಿ: ಇದೇ ಮಂದಿ ಬಾಯಿಬಡಿದುಕೊಳ್ಳುವುದು ಖಚಿತ. 1974ರಲ್ಲಿ ರೂ. 1 ಸಾವಿರ ವೇತನ ಪಡೆಯುತ್ತಿದ್ದ ಸರ್ಕಾರೀ ಉದ್ಯೋಗಿ ಇದೇ ಮಾನದಂಡದ ಪ್ರಕಾರ ಕೇವಲ 18 ಸಾವಿರ ಪಗಾರ ಪಡೆಯಬೇಕು. ಆದರೆ ಅವರೆಲ್ಲಾ ಈಗ ಏನಿಲ್ಲವೆಂದರೂ 70 ಸಾವಿರ ವೇತನ ಪಡೆಯುತ್ತಿದ್ದಾರೆ.


ಬೆಲೆ ಸೂಚ್ಯಂಕವೊಂದೇ ಜೀವನ ವೆಚ್ಚದ ಏರಿಕೆಯನ್ನು ತೋರಿಸುವುದಿಲ್ಲವೆಂದೇ ತಾನೇ ಸರ್ಕಾರ ವೇತನ ಆಯೋಗಗಳನ್ನು ಸ್ಥಾಪಿಸುವುದು? ಆದರೂ ಬಡವರ ಕಷ್ಟ ಅಳೆಯಲು, ಬಡತನಸೂಚಿಯ ಮೂಲ ವರ್ಷದ ಆಧಾರದ ಜೊತೆಗೆ ಕೇವಲ ಬೆಲೆ ಸೂಚ್ಯಂಕ ಬಳಸುತ್ತದೆ!!

ಶಾಲೆಯ ಫಲಿತಾಂಶದ ಪ್ರಮಾಣ ಹೆಚ್ಚಿಸಲು ಕನಿಷ್ಠ ಅಂಕಗಳನ್ನು ಇಳಿಸುತ್ತಾ ಬಂದು ನೂರಕ್ಕೆ ನೂರು ಪಾಸು ಎಂದು ಘೋಷಿಸುವಂತಿದೆ, ಈ ಲೆಕ್ಕಾಚಾರ. ಬಡತನದ ಸೂಚಿಗಳ ಮಾನದಂಡವನ್ನೇ ಇಳಿಸುತ್ತಾ ಬಂದು ಬಡತನವೇ ಇಲ್ಲ

⏭ ..8



ಮಗನ ಎಂ.ಪಿ. ಮಾಡಲು ಮ್ಯಾಗಿ ಮಳ್ಳಾಟ!



ಉತ್ತರ ಕನ್ನಡದ ರಾಜಕಾರಣದಲ್ಲೀಗ ಕದನ ಕುತೂಹಲದ ಕಾಲ. ಪ್ರಮುಖ ಎದುರಾಳಿ ಪಕ್ಷಗಳಾದ ಕಾಂಗ್ರೆಸ್ ಹಾಗು ಬಿಜೆಪಿಯ ಮುಖಾಮುಖಿ ಗುದ್ದಾಟ ವೇನೂ ಇದಲ್ಲ, ಆ ಎರಡೂ ಪಕ್ಷದ ಒಳಸುಳಿಗಳ ಸಂಘರ್ಷ ಈಗ ಕ್ಲೈಮಾಕ್ಸ್ ತಲುಪುತ್ತಿದೆ! ಕಳೆದ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಜನರಿಂದ ಸಮಾ ಒದೆಸಿಕೊಂಡು ಸೊಂಟ ಮುರಿಸಿ ಕೊಂಡಿರುವ ವಿಭಜಕ ವಿಪ್ರರ ಬಿಜೆಪಿಯ ಜನವಾರಿ ಬಳಗ ಮಾಜಿ ಮಂತ್ರಿ ಕಾಗೇರಿ ಮಾಣಿ ಮತ್ತು ಹಾಲಿ ಸಂಸದ ಅನಂತ್ಮಾಣಿ ತಂಡಗಳಾಗಿ ಬಡಿದಾಡುತ್ತಿವೆ. ಅತ್ತ ಕಾಂಗ್ರೆಸ್‌ನಲ್ಲಿ ಮಂತ್ರಿ ಆರ್.ವಿ. ದೇಶಪಾಂಡೆ ಹಾಗು ರಾಜಸ್ಥಾನದ ರಾಜ್ಯಪಾಲೆ ಮ್ಯಾಗಿಯಜ್ಜಿಯ ಗ್ಯಾಂಗ್‌ಗಳ ಪರಂಪರಾಗತ ಕತ್ತಿವರಸೆಗೆ ಏಕದಮ್ ಕಾವು 'ಬಂದು ಬಿಟ್ಟದೆ!

ಬಿಜೆಪಿಯ ಸಾಂಸ್ಥಿಕ ಚುನಾವಣೆ ಅಖಾಡದಲ್ಲಿ ನರಿಬುದ್ಧಿಯ ಕಾಗೇರಿ ಮತ್ತು ಹೊಡಿ-ಬಡಿ-ಕಡಿ ಸಂಸ್ಕೃತಿಯ ಸೋಗಲಾಡಿ ಅನಂತ್ಮಾಣಿ ಕಟಕಟನೆ ಕಚ್ಚಾಡಿಕೊಂಡರು. ಜಿಲ್ಲಾ ಬಿಜೆಪಿ ಕಬ್ಜಾ ಮಾಡಿಕೊಳ್ಳುವ ಜಿದ್ದಿನಲ್ಲಿ ಅಲ್ಲಲ್ಲಿ ಆಧಿಪತ್ಯ ಸ್ಥಾಪಿಸಿಕೊಂಡರು. ಅಂತಿಮವಾಗಿ ಅನಂತ್ಮಾಣಿಯ ಆಜ್ಞಾನುಧಾರಿ ಸೇವಕನೇ ಜಿಲ್ಲಾ ಬಿಜೆಪಿ ಅಧ್ಯಕ್ಷನಾಗಿ ಹೋದ.. ಇದರಿಂದ ಕೆರಳಿರುವ ಕಾಗೇರಿ ಮುಂಬರುವ ಲೋಕಸಭೆ ಎಲೆಕ್ಷನ್‌ಗಾಗಿ ಸಮಯ ಸಾಧಿಸುತ್ತಿದ್ದಾರೆ. ಕಳೆದ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ತೀರಾ ಸಣ್ಣ ಅಂತರದಲ್ಲಿ ಬಚಾವಾಗಿರುವ ಕಾಗೇರಿ ತನ್ನ ಸೋಲಿಗೆ ಸ್ವಪಕ್ಷ-ಸ್ವಜಾತಿಯ ಹಿತಶತ್ರು ಅನಂತ್ಮಾಣಿ ಹಗಲಿರುಳು ಶ್ರಮಿಸಿದ್ದು ಇನ್ನೂ ಮರೆತಿಲ್ಲ, ಕಾಗೇರಿಯ ಈ ಸೇಡು ತೀರುವುದು ಲೋಕಸಭೆ ಎಲೆಕ್ಷನ್‌ನಲ್ಲಿ ಬಿಜೆಪಿ ಕ್ಯಾಂಡಿಡೇಟಾಗಲಿರುವ ಅನಂತ್ಮಾಣಿಯನ್ನು ಮಾಜಿ ಮಾಡಿದ ನಂತರವೇ. ಅಂಥದೊಂದು ಶಪಥ ಈಗಾಗಲೇ ಕಾಗೇರಿ ತನ್ನ ಖಾಸಾ ಶಿಷ್ಯರ ಮುಂದೆ ಮಾಡಿಯೂ ಆಗಿದೆ.



ನಿವೇದಿತ್ ಆಳ್ವ

ಕಾಂಗ್ರೆಸ್‌ನಲ್ಲೂ ಲೋಕಸಭಾ ಎಲೆಕ್ಷನ್ ಹಿನ್ನೆಲೆಯಲ್ಲೇ ಹಿಕಮತ್ತುಗಳು ಬಿರುಸಾಗಿದೆ. ಯಾವ ಘಳಿಗೆಯಲ್ಲಿ ಜನತಾ ಪರಿವಾರ ಬಿಟ್ಟು, ಗುರು ರಾಮಕೃಷ್ಣ ಹೆಗಡೆಜೀಗೇ ತಿರುಮಂತ್ರ ಹಾಕಿ ಆರ್.ವಿ.ಡಿ ಕಾಂಗ್ರೆಸ್‌ಗೆ ಸೇರಿದ್ದನೋ ಏನೋ! ಅಂದು ಶುರುವಾದ ಕಾಂಗ್ರೆಸ್‌ನ ಜಳಜಗಳಕ್ಕೆ ಈ ಒಂದೂಕಾಲು ದಶಕದಲ್ಲಿ ಒಮ್ಮೆಯೂ ಅಲ್ಪ ವಿರಾಮವೂ ಬಿದ್ದಿದ್ದಿಲ್ಲ! ಮ್ಯಾಗಿಗೆ ತಾನು ಕಾಂಗ್ರೆಸ್ ಅಧಿನಾಯಕಿ ಸೋನಿಯಾರ ಅಂತಃಪುರದ ಅತ್ಯಾಪ್ತೆ ಎಂಬ ಸೊಕ್ಕು; ದೇಶಪಾಂಡೆಗೋ ಸೋನಿಯಾರ ಆಪ್ತ ಕಾರ್ಯದರ್ಶಿ ಅಹ್ಮದ್ ಪಟೇಲರಂಥವರನ್ನೇ ಖರೀದಿಸಿ ಟ್ರ್ಯಾಕ್ಸ್ ಕ್ಲಿಯರ್ ಮಾಡಿಕೊಳ್ಳುವೆನೆಂಬ ದುರಹಂಕಾರ. ಈ ಈಗೋ ಕಲಹದಲ್ಲಿ ಕಾಂಗ್ರೆಸ್ ಜಿಲ್ಲೆಯಲ್ಲಿ ಹಳ್ಳ ಹಿಡಿದುಹೋಗಿದೆ. ಮ್ಯಾಗಿ-ದೇಶಪಾಂಡೆಗಳ ಪುತ್ರ ವ್ಯಾಮೋಹ ಜಿಲ್ಲಾ ಕಾಂಗ್ರೆಸ್‌ನ ಕಲಹಕ್ಕೀಗ ವಿಲಕ್ಷಣ ಆಯಾಮ ಕೊಟ್ಟುಬಿಟ್ಟದೆ!

ದೇಶಪಾಂಡೆ ಕಾಲೆಳೆವ ಕುಯುಕ್ತಿಯಲ್ಲಿ ನಿಸ್ಸೀಮ. ಆತನಿಗೆ ಜಿಲ್ಲಾ ಕಾಂಗ್ರೆಸ್‌ನ-ಜಿಲ್ಲೆಯ ರಾಜಕಾರಣದ ನಾಡಿಮಿಡಿತ ಗೊತ್ತು. ಆದರೆ ಮ್ಯಾಗಿ ಮುಸಲತ್ತುಗಾರ್ತಿಯಾದರೂ ಕರಾರುವಾಕ್ ತಂತ್ರ ಹೆಣೆಯಲಾಗದ ಪೆದ್ದಿ, ಹಾಗೆಯೇ ಆಕೆಗೆ ಜಿಲ್ಲೆಯ ಸುಖ-ದುಃಖವಾಗಲೀ, ಸ್ಥಳೀಯ ರಾಜಕಾರಣದ ಸಿಕ್ಕುಗಳಾಗಲಿ ಅರ್ಥವೇ ಆಗುತ್ತಿಲ್ಲ, ಹೀಗಾಗಿ ಆಕೆ ಅದೆಷ್ಟೇ ಬಿರುಸಾಗಿ ದಿಲ್ಲಿಯಲ್ಲಿ ದೇಶಪಾಂಡೆ ವಿರುದ್ಧ ಲಾಬಿ ಮಾಡಿದರೂ ಅಂತಿಮವಾಗಿ ಸೋತು ಶರಣಾಗಿದ್ದೇ ಹೆಚ್ಚು, ದೊಡ್ಡ ದುರಂತವೆಂದರೆ, ಹಿಂಬಾಗಿಲ ರಾಜಕಾರಣಿಯಾದ ಮ್ಯಾಗಿ ಉತ್ತರ ಕನ್ನಡಕ್ಕೆ ಬಂದು ಎರಡು ದಶಕವಾದರೂ ಜನಸಾಮಾನ್ಯರ ವಿಶ್ವಾಸ ಗಳಿಸಲು ಆಗಿಲ್ಲ, ಇದಕ್ಕೆ ಕಾರಣ ಸ್ವ-ಧರ್ಮದ ಕ್ಯಾಂಗ್ ಕ್ರಿಶ್ಚಿಯನ್ನರು ಮತ್ತು ಸಮಾಜಕ್ಕೆ ಬೇಡದ ಕ್ರಿಮಿನಲ್-ಗೋಲ್‌ಮಾಲ್ ಗಿರಾಕಿಗಳನ್ನು ಕಟ್ಟಿಕೊಂಡು ಮಾಡುವ ಮಾಗಿಯ ದರಿದ್ರ ರಾಜಕಾರಣ.

ಅದಿರಲಿ, ದೇಶಪಾಂಡೆ ಕಾಂಗ್ರೆಸ್ ಸೇರಿದ ತರುವಾಯ ಮೂರು ಪಾರ್ಲಿಮೆಂಟ್ ನಾಲ್ಕು ಅಸೆಂಬ್ಲಿ ಎಲೆಕ್ಷನ್ ಆಗಿಹೋಗಿದೆ. ಇದರಲ್ಲಿ ದೇಶಪಾಂಡೆ ಮೊದಲಿನ ಚುನಾವಣೆಯಲ್ಲಿ ಮ್ಯಾಗಿಗೆ ದೋಖಾ ಮಾಡಲಿಲ್ಲ, ನಂತರದಲ್ಲಿ ಎರಡು ಬಾರಿ ಮ್ಯಾಗಿ ಸೋತಿದ್ದು ದೇಶಪಾಂಡೆಯ ಕಿತಾಪತಿಯಿಂದಲೇ. ಹಾಗೆಯೇ ಮ್ಯಾಗಿ ದೇಶಪಾಂಡೆಯನ್ನು ಸೋಲಿಸಲು ಮೂರು ಬಾರಿ ಪ್ರಯತ್ನಿಸಿ ಒಂದು ಬಾರಿ ಸಫಲರಾದರು. ಈಗ ಲೋಕಸಭಾ ಎಲೆಕ್ಷನ್ ಮತ್ತೆ ಬರುತ್ತಿದೆ; ಮ್ಯಾಗಿ-ದೇಶಪಾಂಡೆ ಎದುರುಬದುರಾ ನಿಂತು ಗುರಾಯಿಸುತ್ತಿದ್ದಾರೆ. ಕಳೆದ ಬಾರಿಯೇ ದೇಶಪಾಂಡೆ ಮ್ಯಾಗಿಗೆ ಟಿಕೆಟ್ ತಪ್ಪಿಸುವ 'ಡೆಡ್ಲಿ ಕಾರ್ಯಾಚರಣೆ'ಗೆ ಕೈಹಾಕಿದ್ದರು. ತನ್ನ ಮಗ ಕೇಂದ್ರ ಮಂತ್ರಿ ಪ್ರಫುಲ್ ಪಟೇಲರ ಅಳಿಮಯ್ಯ- ಮುಂಬೈ ಬೇಸ್ಡ್ ಪ್ರಶಾಂತ್ ದೇಶಪಾಂಡೆಗೆ ಉತ್ತರ ಕನ್ನಡ ಕ್ಷೇತ್ರದ ಕಾಂಗ್ರೆಸ್ ಕ್ಯಾಂಡಿಡೇಟ್ ಮಾಡುವ ಪ್ಲಾನ್ ಹಾಕಿಕೊಂಡಿದ್ದರು. ಮಗನನ್ನು ಜಿಲ್ಲೆಯ ಅಂಗಳಕ್ಕೆ ಬಿಟ್ಟು ಅಲ್ಲಲ್ಲಿ ಶೋ ಕೂಡ ಮಾಡಿಸಿದ್ದರು.

ಆದರೆ ಯುವರಾಜ ರಾಹುಲ್ ಗಾಂಧಿ ದೇಶಪಾಂಡೆ ಮಾತಿಗೆ ಸೊಪ್ಪು ಹಾಕಲಿಲ್ಲ, ತನ್ನನ್ನು ಬಾಲ್ಯದಲ್ಲಿ ಎತ್ತಿ ಆಡಿಸಿದ ಮ್ಯಾಗಿಗೆ ಕೊನೆಯ ಛಾನ್ಸ್ ಕೊಡಲು ರಾಹುಲ್ ನಿರ್ಧರಿಸಿದ್ದರು. ಮ್ಯಾಗಿ ಏಕಾಂಗಿಯಾಗಿ ಹೋರಾಡಿದರು. ದೇಶಪಾಂಡೆ ಅದೆಷ್ಟೇ ಕುತಂತ್ರ ಮಾಡಿದರೂ ಬಿಜೆಪಿ ಅಭ್ಯರ್ಥಿಯಾಗಿದ್ದ ಅನಂತ್ಮಾಣಿ ಮೇಲಿನ ಅಸಹ್ಯದಿಂದ ಉತ್ತರ ಕನ್ನಡಿಗರು ಮ್ಯಾಗಿಗೇ ಓಟು ಹಾಕಿದ್ದರು.. ಆದರೆ ಬೆಳಗಾವಿ ಜಿಲ್ಲೆಯ ಕಿತ್ತೂರು-ಖಾನಾಪುರದಲ್ಲಿ ಮ್ಯಾಗಿಯನ್ನು ಜನ ನಂಬಲಿಲ್ಲ, ಅಲ್ಲಿ ಮ್ಯಾಗಿಯ ಉಸ್ತುವಾರಿ ನೋಡಿಕೊಂಡಿದ್ದ ಆಕೆಯ ಮಗ ನಿವೇದಿತ್‌ನ ಅಧಿಕ ಪ್ರಸಂಗದಿಂದಾಗಿ ಮ್ಯಾಗಿ ಸೋತರು. ಉತ್ತರ ಕನ್ನಡದಲ್ಲಿ ಆ ಕೊರತೆ ನೀಗಿಕೊಳ್ಳಲು ದೇಶಪಾಂಡೆ ಬಿಡಲಿಲ್ಲ, ಸೋತ ಮ್ಯಾಗಿಗೆ ಸಕ್ರಿಯ ರಾಜಕಾರಣದಿಂದ ಕಡ್ಡಾಯ ನಿವೃತ್ತಿ ಹೈಕಮಾಂಡ್ ನೀಡಿತು. ರಾಜ್ಯಪಾಲೆಯಾಗಿ ಪುನರ್ವಸತಿ ಕಲ್ಪಿಸಿತು. ಜಿಲ್ಲೆಯ ಕಾಂಗ್ರೆಸ್‌ಗೆ ದೇಶಪಾಂಡೆಯೇ ಏಕಮೇವಾದ್ವಿತೀಯ ದೊರೆಯಾಗಿ ಹೋದರು!

ಹಾಗಂತ ಮ್ಯಾಗಿಯ ಹಳೆಯ ಬೇರುಗಳೇನೂ ಹೈಕಮಾಂಡ್ ನೆಲದಲ್ಲಿ ಒಣಗಿರಲಿಲ್ಲ. ಆಕೆ ರಾಜ್ಯಪಾಲೆಯಾದರೂ ಡರ್ಟಿ 'ಪಾಲಿ-ಟ್ರಿಕ್ಸ್' ಪಾಲಿಸಿಕೊಂಡು ಬಂದರು. ಹೈಕಮಾಂಡ್ ಬಲದಿಂದ ಉತ್ತರ ಕನ್ನಡದಲ್ಲಿ ದೇಶಪಾಂಡೆಗೆ ಸಣ್ಣ-ಸಣ್ಣ ಟಾಂಗ್ ಕೊಡಹತ್ತಿದರು. ಕಳೆದ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ದೇಶಪಾಂಡೆಗೆ ಮಣಿಸಿ ಶಿರಸಿಯಲ್ಲಿ ತನ್ನ ಕ್ರಿಮಿನಲ್ ಬಂಟ ದೀಪಕ್ ಹೊನ್ನಾವರನಿಗೆ ಟಿಕೆಟ್ ಕೊಡಿಸಿ ಮುಖಭಂಗಿತರಾದರು. ಕಾರವಾರದಲ್ಲಿ ದೇಶಪಾಂಡೆ ಶಿಷ್ಯ-ಕಳ್ಳ ಅದಿರು ಉದ್ಯಮಿ ಸತೀಶ್ ಸೈಲ್‌ಗೆ ಕಾಂಗ್ರೆಸ್ ಟಿಕೆಟ್ ಸಿಗದಂತೆ ಮಾಡಿ ಅಲ್ಲೂ ಸೋತರು. ಟಿಕೆಟ್ ಹಂಚಿಕೆಯಲ್ಲಿ ದೇಶಪಾಂಡೆಗೆ ಮುಖಭಂಗವಾದರೂ ಫಲಿತಾಂಶ ಬಂದಾಗ ಮ್ಯಾಗಿ ಮಕಾಡೆ ಬಿದ್ದಿದ್ದರು. ಮ್ಯಾಗಿ ಹಿಂಬಾಲಕರು ಗೆಲ್ಲದಂತೆ ದೇಶಪಾಂಡೆ ನೋಡಿಕೊಂಡಿದ್ದರು. ಇದರಿಂದ ಜಿಲ್ಲೆಯಲ್ಲಿ ಅಳಿದುಳಿದಿದ್ದ ಮ್ಯಾಗಿ ಇಮೇಜ್ ಮಣ್ಣುಪಾಲಾಗಿ ದೇಶಪಾಂಡೆಯೇ ಪವರ್‌ಫುಲ್ ಲೋಕಲ್ ರಾಜಕಾರಣದಲ್ಲಿ ಎಂಬ ಸಂದೇಶ ರವಾನೆಯಾಯ್ತು.

ಇಷ್ಟಾದರೂ ಮ್ಯಾಗಿ 'ಆಟ' ನಿಲ್ಲಿಸಿಲ್ಲ, ಹಣ್ಣು-ಹಣ್ಣಾಗಿರುವ ಮ್ಯಾಗಿ ದುರ್ಬಲರಾಗಿದ್ದಾರೆ. ಆಕೆಗೆ ಉತ್ತರ ಕನ್ನಡ ಲೋಕಸಭಾ ಕ್ಷೇತ್ರದ ಟಿಕೆಟ್ ಕೊಳ್ಳುವ ಮನಸ್ಸಿಲ್ಲ, ಹೈಕಮಾಂಡ್ ಅದಕ್ಕೆ ಸಿದ್ಧವಿಲ್ಲ ಬಿಡಿ. ಆದರೆ ಮ್ಯಾಗಿ ದಿಲ್ಲಿಯಲ್ಲಿ ಟಿಕೆಟ್ ಹಂಚುವಾಗ ಸಂಚು ಮಾಡುವ ತಾಕತ್ತು ಇವತ್ತಿಗೂ ಉಳಿಸಿಕೊಂಡಿದ್ದಾರೆ. ಅಲ್ಲದೆ ಕಳೆದ ಬಾರಿ ತೀರಾ ಸಣ್ಣ ಅಂತರ (27 ಸಾವಿರ)ದಿಂದ ಸೋತಾಕೆ. ಹೀಗಾಗಿ ಆಕೆಯ ಮಾತಿಗೊಂದು ತೂಕ ಟಿಕೆಟ್ ಕೊಡುವಾಗ ದಿಲ್ಲಿಯಲ್ಲಿ ಸಿಗಲಿದೆ. ಅದನ್ನಾಕೆ ಬಳಸಿಕೊಂಡು ತನ್ನ ಪೆದ್ದು ಪುತ್ರ ರತ್ನ ನಿವೇದಿತ್ ಆಳ್ವನಿಗೆ ಕ್ಯಾಂಡಿಡೇಟ್ ಮಾಡುವ ಸ್ಕೆಚ್ ಹಾಕಿಕೊಂಡಿದ್ದಾರೆ. ಮಗನಿಗೆ ಟಿಕೆಟ್ ಕೊಡಿಸೋದು ಮ್ಯಾಗಿಗೆ ದೊಡ್ಡದಲ್ಲ, ಸಮಸ್ಯೆಯಿರುವುದು ಕ್ಷೇತ್ರದಲ್ಲಿ, ಮಗ ಕಾಂಗ್ರೆಸ್ ಅಭ್ಯರ್ಥಿಯಾದರೆ ಏನಾದೀತು? ತನ್ನಂತೆಯೇ ಪಲ್ಟಿ ಹೊಡೆಯುವನಾ? ಇಲ್ಲ ದೇಶಪಾಂಡೆಯ ಅಡೆತಡೆ ಎದುರಿಸಿ ಗೆಲ್ಲುವನಾ? ಎಂಬ ಚಿಂತೆ ಆಕೆಯ ನಿದ್ದೆಗೆಡಿಸುತ್ತಿದೆ.

ಉತ್ತರ ಕನ್ನಡದ ಪಿಚ್ ತನ್ನ ಮಗನ ಬ್ಯಾಟಿಂಗ್‌ಗೆ 'ಪ್ರಶಸ್ತವಾಗಿದೆಯಾ ಎಂಬುದನ್ನು ಪರೀಕ್ಷಿಸಲೆಂದೇ ಮ್ಯಾಗಿ ಮೊನ್ನೆ ದೂರದ ರಾಜಸ್ಥಾನದಿಂದ ಉತ್ತರ ಕನ್ನಡದ ಕುಮಟಾಕ್ಕೆ ಬಂದಿದ್ದರು. ತಾನು ರಾಜ್ಯಪಾಲೆಯಾಗಿ ಒಂದು ಪಕ್ಷದ ರಾಜಕಾರಣ ಮಾಡಬಾರದೆಂಬ ಪ್ರಜ್ಞೆಯೂ ಈ ಮುದಿ ರಾಜಕಾರಣಿಗೆ ಇರಲಿಲ್ಲ, ಕಾಂಗ್ರೆಸ್ ಕಾರ್ಯಕರ್ತರ ಸಭೆ-ಭೋಜನಕೂಟದಲ್ಲಿ ಆಕೆ ನಿರ್ಲಜ್ಜವಾಗಿ ಭಾಗವಹಿಸಿದ್ದರು. ರಾಜ್ಯಪಾಲೆಯೆಂಬ ಕಾರಣಕ್ಕೆ ಜಿಲ್ಲಾಡಳಿತ ನೀಡಿದ ಪೊಲೀಸ್ ಗೌರವ ರಕ್ಷೆಯಲ್ಲಿ ಸ್ಥಳೀಯ ಕಾಂಗ್ರೆಸ್ ಶಾಸಕಿ- ತನ್ನ ಗ್ಯಾಂಗಿನ (ಅರ್ಥಾತ್ ದೇಶಪಾಂಡೆ ವಿರೋಧಿ ಟೋಳಿ) ಶಾರದಾ ಶೆಟ್ಟಿಯನ್ನು ಪಕ್ಕದಲ್ಲಿಟ್ಟುಕೊಂಡಿದ್ದರು. ತನಗೆ ಫೈನಾನ್ಷಿಯರ್ ಆಗಿದ್ದ ಪ್ರಕಾಶ್ ಗಾಂವ್ಕರ್ ಸಾವಿನಿಂದ ನೊಂದಿದ್ದ ಆಕೆಯ ಮಡದಿಗೆ ಸಾಂತ್ವನ ಹೇಳಲು ಹೋಗಿದ್ದರು. ಒಟ್ಟಿನಲ್ಲಿ ಜಿಲ್ಲಾ ಕಾಂಗ್ರೆಸ್‌ನ ತನ್ನ ಬಣದ ಗೆಟ್-ಟು-ಗೆದರ್‌ನಲ್ಲಿ ಲವಲವಿಕೆಯಿಂದ ಭಾಗವಹಿಸಿದ ಮ್ಯಾಗಿ ತನ್ನ ಮಗನೇ ಕಾಂಗ್ರೆಸ್‌ನ ಪಾರ್ಲಿಮೆಂಟ್ ಎಲೆಕ್ಷನ್ ಹುರಿಯಾಳೆಂಬ ಭಾವನೆ ಬಿತ್ತಿ ಹೋಗಿದ್ದಾರೆ. ದೇಶಪಾಂಡೆಗೆ ತನ್ನ ಮಗ ಪ್ರಶಾಂತನಿಗೆ ಟಿಕೆಟ್ ಸಾಧ್ಯವಿಲ್ಲ ಎಂದು ಪರೋಕ್ಷವಾಗಿ ಹೇಳಿಹೋಗಿದ್ದಾರೆ.



ಪ್ರಶಾಂತ್ ದೇಶಪಾಂಡೆ

ತನ್ನ ಘಗ ಮಹಾರಾಯನಿಗೆ ಕ್ಷೇತ್ರ ಹದಗೊಳಿಸಲು ಮ್ಯಾಗಿ ವ್ಯೂಹ ರಚನೆಯಲ್ಲಿ ತೊಡಗಿರುವುದಂತೂ ಖರೆ. ದೇಶಪಾಂಡೆಗೆ ವಿರೋಧವಾಗಿರುವ, ಒಂಚೂರು ಚಲಾವಣೆಯಿರುವ ಬೇರೆ-ಬೇರೆ ಪಕ್ಷದ ಗಟ್ಟಿಗರನ್ನು ಕಾಂಗ್ರೆಸ್‌ಗೆ ಸೇರಿಸಲು ಆಕೆ ಯೋಚಿಸಿದ್ದಾರೆ. ಕಳೆದ ವಿಧಾನಸಭೆ ಚುನಾವಣೆ ಹೊತ್ತಲ್ಲೇ ಇಂಥದೊಂದು ಪ್ರಯತ್ನವೂ ಆಕೆ ಮಾಡಿದ್ದರು. ಅದಕ್ಕೆ ದೇಶಪಾಂಡೆ ಅವಕಾಶ ಕೊಟ್ಟಿರಲಿಲ್ಲ, ಈಗ ಅದನ್ನೇ ಮ್ಯಾಗಿ ಮುಂದುವರಿಸಿದ್ದಾರೆ. ಕಾರವಾರದ ಉಂಡಾಡಿ ಗುಂಡಣ್ಣ-ಬಿಜೆಪಿಯ ಮಾಜಿ ಮಂತ್ರಿ ಆನಂದ್ ಅಸ್ನೋಟಿಕರ್ ಮತ್ತು ಭಟ್ಕಳದ ಕೆಜೆಪಿ ಕಲಿ ಶಿವಾನಂದ ನಾಯ್ಕ್‌ರ ಕಾಂಗ್ರೆಸ್ ಎಂಟ್ರಿಗೆ ಮ್ಯಾಗಿ ಕಟಿಪಿಟಿ ನಡೆಸಿದ್ದಾರೆ. ಇಥೊಂದರ್ಥದಲ್ಲಿ ದೇಶಪಾಂಡೆ ವಿರೋಧಿ ರಾಜಕಾರಣವಾದರೆ, ಇನ್ನೊಂದು ಆ್ಯಂಗಲಿನಲ್ಲಿ ಬ್ರಾಹ್ಮಣರೇತರ ಪಡೆ ಕಟ್ಟುವ ದೂರಾಲೋಚನೆ. ಉತ್ತರ ಕನ್ನಡದ ಬ್ರಾಹ್ಮಣರು ತನಗೆಂದೂ ಬೆಂಬಲಿಸಿಲ್ಲವೆಂಬುದು ಮ್ಯಾಗಿ ಮನದಟ್ಟು ಮಾಡಿಕೊಂಡಿದ್ದಾರೆ.

ಅಸ್ನೋಟಿಕರ್ ಮತ್ತು ಶಿವಾನಂದ ನಾಯ್ಕ್, ಅವರವರ ಕ್ಷೇತ್ರದಲ್ಲಿ ರಾಜಕೀಯವಾಗಿ ಸತ್ತೇನೂ ಹೋಗಿಲ್ಲ, ಈ ಇಬ್ಬರಿಗೂ ದೇಶಪಾಂಡೆ ಮೇಲೆ ಘನಘೋರ ಸಿಟ್ಟಿದೆ. ಕಳೆದ ಬಾರಿ ಕಾಂಗ್ರೆಸ್ ಸೇರಲು- ಆ ಪಕ್ಷದ ಕ್ಯಾಂಡಿಡೇಟಾಗಲು ಅಡ್ಡಗಾಲು ಹಾಕಿದ್ದೇ ಕೊಂಕಣಿ ಬ್ರಾಹ್ಮಣ ದೇಶಪಾಂಡೆ ಎಂಬ ಆಕ್ರೋಶ ಈ ಶೂದ್ರರಿಬ್ಬರಿಗಿದೆ. ಅಸ್ನೋಟಿಕರ್ ಸ್ವಯಂಕೃತಾಪರಾಧರಿಂದಾಗಿ ಕಾಂಗ್ರೆಸ್‌ನಿಂದ ನಿಂತರೂ ಗೆಲ್ಲುತ್ತಿರಲಿಲ್ಲ, ಆದರೆ ಶಿವಾನಂದ ನಾಯ್ಕ್ ಕೈ ಹುರಿಯಾಳಾದರೆ ಖಂಡಿತ ಗೆಲ್ಲುತ್ತಿದ್ದರು. ಆತ ಒಲ್ಲದ ಮನಸ್ಸಿನಿಂದ ಕೆಜೆಪಿ ಕ್ಯಾಂಡಿಡೇಟಾಗಿದ್ದರು. ಶಿವಣ್ಣನನ್ನು ಬಿಜೆಪಿ ಸಹವಾಸವೇ ಬೇಡವಾಗಿದೆ. ಆದರೆ ತನ್ನ ಬಾಸ್ ಯಡ್ಡಿ ಆ ಬ್ರಾಹ್ಮಣಶಾಹಿ ಪಕ್ಷದ ಜೊತೆ ಮತ್ತೆ ಚಕ್ಕಂದ ಶುರು ಹಚ್ಚಿಕೊಂಡಿರುವುದು ಶಿವಣ್ಣನಿಗೆ ಕಾಂಗ್ರೆಸ್‌ನತ್ತ ವಾಲಿಸಿದೆ. ಶಿವಾನಂದ ನಾಯ್ಕ್, ಇನ್ನೊಂದೆಡೆಯಿಂದ ಎಐಸಿಸಿ ಪ್ರಧಾನ ಕಾರ್ಯದರ್ಶಿ ಹರಿಪ್ರಸಾದ್ ಮೂಲಕವೂ ಕಾಂಗ್ರೆಸ್ ನುಸುಳಲು ನೋಡುತ್ತಿದ್ದಾರೆ..

ಮಂತ್ರಿಯಾಗಿದ್ದೇ ತಡ ದೇಶಪಾಂಡೆ ಮೇಲ್ವರ್ಗದ ರಾಜಕಾರಣ ಮಾಡುತ್ತಿರುವುದರಿಂದ ಜಿಲ್ಲೆಯ ಅಬ್ರಾಹ್ಮಣರು ತಿರುಗಿಬಿದ್ದಿದ್ದಾರೆ. ಬಿಜೆಪಿಯಲ್ಲಿನ ಮಾಣಿದ್ವಯರ ಪಾರುಪತ್ಯದಿಂದ ಅಲ್ಲಿಯ ಶೂದ್ರರು ರೋಸಿಹೋಗಿದ್ದಾರೆ. ಇವರೆಲ್ಲರನ್ನು ಕಾಂಗ್ರೆಸ್‌ಗೆ ತಂದರೆ ತನ್ನ ಮಗನ ಟೀಮು ಬೆಳೆಯಬಹುದೆಂದು ಮ್ಯಾಗಿ ಲೆಕ್ಕ ಹಾಕಿದ್ದಾರೆ. ಮತ್ತೊಂದೆಡೆ ದೇಶಪಾಂಡೆಯೂ ತನ್ನ ಮಗನ ಪಡೆ ಕಟ್ಟುವ ತರಾತುರಿಗೆ ಬಿದ್ದಿದ್ದಾರೆ. ಮ್ಯಾಗಿ ಕುಮಟೆಗೆ ಬಂದುಹೋದ ತಕ್ಷಣ ಆತ ಬೆಂಗಳೂರಲ್ಲಿ ಕಾಂಗ್ರೆಸ್ ಜನಪ್ರತಿನಿಧಿಗಳ ಸಭೆ ಕರೆದಿದ್ದರು. ಆಗ ಇಡೀ ಜಿಲ್ಲಾ ಕಾಂಗ್ರೆಸ್ ಅಲ್ಲಿ ಸೇರಿತ್ತು, ಮ್ಯಾಗಿ ಬಂದಾಗ ದೇಶಪಾಂಡೆ ಹಿಂಬಾಲಕರ್‍ಯಾರೂ ಮುಖ ತೋರಿಸಿರಲಿಲ್ಲ, ಇದು ಲೋಕಲ್ ರಾಜಕಾರಣದಲ್ಲಿ ದೇಶಪಾಂಡೆ ಮ್ಯಾಗಿಗಿಂತ ಸಶಕ್ತ ಪುಢಾರಿ ಎಂಬುದನ್ನು ತೋರಿಸುವಂತಿದೆ. ದೇಶಪಾಂಡೆ ಬೆಂಗಳೂರಿಗೆ ಬಂದಿದ್ದ ಕಾಂಗ್ರೆಸ್ಸಿಗರಿಗೆ ಭರ್ಜರಿ ಮೇಜುವಾನಿ ಮಾಡಿಕಳಿಸಿದ್ದಾರೆ. ತನ್ನ ಮಗ ಟಿಕೆಟ್ ತರುವುದು ಖಂಡಿತ ಎಂಬ ಕಲ್ಪನೆ ಮೂಡಿಸಿದ್ದಾರೆ. ಮ್ಯಾಗಿ ದಿಲ್ಲಿಯಲ್ಲಿ ಔಟ್ ಡೇಟೆಡ್. ಹಾಗಾಗಿ ಟಿಕೆಟ್ ಕೊಡುವ ಕಾಲ ಬಂದಾಗ ತನ್ನ ಮಗನ ಪರವೇ ಅಭಿಮತ ರೂಪುಗೊಳ್ಳುವಂತೆ ನೋಡಿಕೊಳ್ಳಿ ಎಂದು ಹೇಳಿದ್ದಾರೆ.

ಈ ಮುದಿ ದೇಶಪಾಂಡೆ ಮತ್ತು ಮ್ಯಾಗಿಯ ವಂಶೋದ್ಧಾರದ ಬುರ್ನಾಸ್ ಕಸರತ್ತು ಏನೇ ಇರಲಿ, ಇವರ ಮಕ್ಕಳಂ ಪೂತ ಎಂಪಿಯಾಗುವ ಯೋಗ್ಯತೆಯವರಲ್ಲ, ಬೆಂಗಳೂರು-ಮುಂಬೈ-ದಿಲ್ಲಿಯಲ್ಲಿ ಜೀನ್ಸ್-ಟೀ ಶರ್ಟ್ ಹಾಕಿಕೊಂಡು ಹೈ-ಫೈ ಜೀವನ ನಡೆಸುವ ಈ ಹುಡುಗರಿಗೆ ರಿಮೋಟ್ ಉತ್ತರ ಕನ್ನಡದ ಸಾಮಾಜಿಕ-ರಾಜಕೀಯ ಗೊತ್ತು-ಗುರಿಗಳೇ ಗೊತ್ತಿಲ್ಲ, ಎಂಪಿ ಆಗುವ ಆಸೆಯಿಂದ ಜಿಲ್ಲೆಯ ಕಾಡು-ಮೇಡು, ಹೊಳೆ-ಹಳ್ಳದಲ್ಲಿ ಎಡವಿ ಬೀಳುತ್ತ ಅಂಡಲೆಯುತ್ತಿರುವ ಪ್ರಶಾಂತ ದೇಶಪಾಂಡೆ ಮತ್ತು ನಿವೇದಿತ್ ಆಳ್ವ ಜನರಿಗೆ ಪುಕ್ಕಟೆ ಮನರಂಜನೆ ನೀಡುತ್ತಿದ್ದಾರೆ. ಇವರಲ್ಲಿ ಯಾರು ಕಾಂಗ್ರೆಸ್ ಅಭ್ಯರ್ಥಿಯಾದರೂ ಇನ್ನೊಂದು ಬಣದವರು ಕಾಲೆಳೆಯುತ್ತಾರೆ. ಇದರಿಂದ ಗೆಲ್ಲುವ ಛಾನ್ಸ್ ಇರುವ ಕಾಂಗ್ರೆಸ್ ಒಂದು ಸೀಟು ಸುಲಭವಾಗಿ ಕಳೆದುಕೊಳ್ಳಲಿದೆ. ಬಿಜೆಪಿ ಸಂಸದ ಅನಂತ್ಮಾಣಿಯ ಕೋಮು ವಾದ-ದುಡ್ಡಿನ ದುರಾಸೆ-ಆಸ್ತಿ ಶೇಖರಣೆ-ಜನದ್ರೋಹ ಕಾಂಗ್ರೆಸ್ ಪರ ವಾತಾವರಣ ಸೃಷ್ಟಿಸಿದೆ. ಆದರೆ ಕಾಂಗ್ರೆಸ್‌ಗೆ ಮ್ಯಾಗಿ-ದೇಶಪಾಂಡೆಗಳೇ ದೊಡ್ಡ ಶಾಪವಾಗಿದ್ದಾರೆ.


ಮ್ಯಾಗಿ ಮಗ ಎಂಪಿ ಇಲೆಕ್ಷನ್‌ಗೆ ನಿಂತರೆ ಸೋಲು ಖಚಿತ; ದೇಶಪಾಂಡೆ ಮಗನಾದರೆ ಆತನಿಗಿಂತ ಹೆಚ್ಚು ಮತ ಪಡೆಯಬಲ್ಲನಾದರೂ ಆತನ ಸ್ಪರ್ಧೆ ಕಾಂಗ್ರೆಸ್‌ಗೆ ರಿಸ್ಕೇ! ಈ ಕಾಂಗ್ರೆಸ್‌ಗೆ ಬೇಕಿರುವುದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಹರಿಪ್ರಸಾದ್‌ರಂಥ ಸೌಮ್ಯ ಅಭ್ಯರ್ಥಿ ಹಾಗೆಂಬುದು ನಿಷ್ಠಾವಂತ ಕಾಂಗ್ರೆಸಿಗರ ಅಭಿಪ್ರಾಯ. ದಕ್ಷಿಣ ಕನ್ನಡ ಮೂಲದ ಮ್ಯಾಗಿಯೇ ಉತ್ತರ ಕನ್ನಡಕ್ಕೆ ವಲಸೆ ಬಂದು ಕ್ಯಾಂಡಿಡೇಟಾಗಿರುವಾಗ ಅದೇ ದಕ್ಷಿಣ ಕನ್ನಡದ ಹರಿಪ್ರಸಾದ್ ಯಾಕೆ ಬರಬಾರದೆಂಬುದು ಕಾರ್ಯಕರ್ತರ ಪ್ರಶ್ನೆ. ಹರಿಯ ಕುಲಬಾಂಧವರಾದ ಈಡಿಗರು (ದೀವರು) ಇಲ್ಲಿ ದೊಡ್ಡ ಸಂಖ್ಯೆಯಲ್ಲಿದ್ದಾರೆ. 'ಬಂ' ನಂತರ ಇವರಿಗೊಬ್ಬ ಸಮರ್ಥ ನಾಯಕನಿಲ್ಲದಂತಾಗಿದೆ. ಹರಿ ಬಂದರೆ ಹರಿದು ಹೋಗಿರುವ ಉತ್ತರ ಕನ್ನಡ ಕಾಂಗ್ರೆಸ್ ಒಂದಾದೀತು. ದೇಶಪಾಂಡೆ ಈ ಡೈನಾಮಿಕ್ ಲೀಡರ್ ಎದುರು ಬಾಲ ಬಿಚ್ಚಲಿಕ್ಕಿಲ್ಲ, ಹೀಗಾಗಿ ಹರಿಗೆ ಗೆಲ್ಲುವ ಛಾನ್ಸ್ ಜಾಸ್ತಿ. ಸೋಕಾಲ್ಡ್ ಲೀಡರ್‌ಗಳ ದಂಡ-ಪಿಂಡಗಳಿಗಿಂತ ಸಾವಿರಾರು ಪಾಲು ಹರಿ ಬೆಟರ್ ಕ್ಯಾಂಡಿಡೇಟ್.

ಎಐಸಿಸಿಯಲ್ಲಿ ಪ್ರಭಾವಿಯಾಗಿರುವ ಹರಿ ಮ್ಯಾಗಿ-ದೇಶಪಾಂಡೆಗಳೆಂಬ ಮನೆಮುರುಕರನ್ನು ದಿಲ್ಲಿಯಲ್ಲಿ ಟ್ಯಾಕಲ್ ಮಾಡೋದು ಕಷ್ಟವೇನಲ್ಲ, ಉತ್ತರ ಕನ್ನಡದಲ್ಲಿ ಕಾಂಗ್ರೆಸ್ ಗೆಲ್ಲಬೇಕೆಂದಿದ್ದರೆ ದಿಲ್ಲಿ ಧಣಿಗಳು ಮ್ಯಾಗಿ ಮತ್ತು ದೇಶಪಾಂಡೆ ಮಕ್ಕಳಿಗೆ ಮಣೆ ಹಾಕಬಾರದು. ಹಾಗೆಯೇ ಆ ಗ್ಯಾಂಗಿನವರಿಗ್ಯಾರಿಗೂ ಅವಕಾಶ ಕೊಡಕೂಡದು. ಉತ್ತರ ಕನ್ನಡ ಕಾಂಗ್ರೆಸ್‌ಗೆ ದೇಶಪಾಂಡೆ ಮತ್ತು ಮ್ಯಾಗಿ ಅದ್ದೆಷ್ಟು ಕಂಟಕವಾಗಿದ್ದಾರೆಂದು ರಾಹುಲ್‌ಗೆ ಅರಹುವರ್‍ಯಾರು?

ಕಳ್ಳ ಬೆಕ್ಕುಗಳಿಗೆ ಗಂಟೆ ಕಟ್ಟೋರ್‍ಯಾರು?

● ಶುದ್ಧೋಧನ

ಸುನೀಲ್‌ಕುಮಾರ್ ದೇಸಾಯಿ ರೀ ಎಂಟ್ರಿಗೆ ವಿವಾದದ ಕ್ಲ್ಯಾಪ್



ಆರೇಳು ವರ್ಷಗಳ 'ಬ್ರೇಕ್'ನ ತರುವಾಯ ಕನ್ನಡದ ಪ್ರತಿಭಾವಂತ ಸಿನಿಮಾ ನಿರ್ದೇಶಕ ಸುನೀಲ್ ಕುಮಾರ್ ದೇಸಾಯಿ 'ಆಕ್ಷನ್...ಕಟ್' ಹೇಳಲು ಸಜ್ಜಾಗುತ್ತಿದ್ದಾರೆ. ಈ ವಿಷಯ ಹೊಸದೇನೂ ಅಲ್ಲ, ಕಳೆದ ಸಂಚಿಕೆಯಲ್ಲಷ್ಟೇ 'ಲಂಕೇಶ್' ಈ ಕುರಿತು 'ದೇಸಾಯಿ ಅಜ್ಞಾತವಾಸಕ್ಕೆ ಮುಕ್ತಾಯ' ಶೀರ್ಷಿಕೆಯಡಿ ಸಣ್ಣ ಟಿಪ್ಪಣಿ ಪ್ರಕಟಿಸಿತ್ತು. ವಿಪರ್ಯಾಸವೆಂದರೆ, ಈ ಹೊಸ ಚಿತ್ರದ ಮುಹೂರ್ತಕ್ಕೂ ಮುನ್ನವೇ ಹಳೇ ವಿವಾದವೊಂದು ದೇಸಾಯಿಯ ಕುತ್ತಿಗೆಗೆ ಸುತ್ತಿಕೊಂಡಿದೆ. ಎನ್‌ಆರ್‌ಐ ನಿರ್ಮಾಪಕ ಡಾ.ನಾರಾಯಣ ಹೊಸ್ಮನೆಯವರಿಗೆ ಹದಿನೈದು ಲಕ್ಷ ರೂ. ಯಾಮಾರಿಸಿದ್ದಾರೆ ಎಂಬುದೇ ದೇಸಾಯಿ ಮೇಲಿರುವ ಲೇಟೆಸ್ಟ್ ಆರೋಪ.

ಹಾಗೆ ನೋಡಿದರೆ ಗಾಂಧಿನಗರಕ್ಕೆ ವಿವಾದವಾಗಲಿ, ವಿವಾದಕ್ಕೆ ಗಾಂಧಿನಗರವಾಗಲಿ ಹೊಸದಲ್ಲ. ಅವೊಂಥರಾ 'ದೋಸ್ತ್ ಕಿ ಬಗಲ್ ಮೇ ಹೀ ದುಶ್ಮನ್' ಇದ್ದಂತೆ. ಎಂದರೆ ತಮ್ಮ ಎರಡೂವರೆ ದಶಕದ ಚಿತ್ರ ಬದುಕಿನಲ್ಲಿ ದೇಸಾಯಿಯ ಹೆಸರು ಸಕ್ಸಸ್, ಫ್ಲಾಪ್‌ಗಳಂತ ಸಿನಿ ಮೆಂಟ್‌ಗಳೊಂದಿಗೆ ಥಳುಕು ಹಾಕಿಕೊಂಡಿದ್ದು ಬಿಟ್ಟರೆ ಇದೇ ಮೊದಲು ಹೀಗೆ ವಂಚನೆಯ ಮಸಿ ಮೆತ್ತಿಸಿಕೊಂಡು ಪ್ರತಿಧ್ವನಿಸುತ್ತಿರೋದು. ಹಾಗಾಗಿ, ತುಸು ಆಸಕ್ತಿ ವಹಿಸಿದ ಪತ್ರಿಕೆ ವಿವಾದದ ಮೂಲಕ್ಕೆ 'ಜೂಮ್' ಹಾಕಿ ನೋಡಿದಾಗ ದೇಸಾಯಿಯ ಸ್ವಯಂಕೃತ ಯಡವಟ್ಟುಗಳು, ಹೊಸ್ಮನೆಯ 'ಬ್ಯಾಡ್‌ಲಕ್ಕು'ಗಳು ಗೋಚರಿಸಿದವು.

ರಮ್ಯ ಚೈತ್ರ ಸಾ(ಕಾ)ಲ...!

ಡಾ.ವಿಷ್ಣುವರ್ಧನ್‌ರಂತಹ ಸ್ಟಾರ್ ನಟನನ್ನು ಮುಂದಿಟ್ಟುಕೊಂಡು ಮಾಡಿದ 'ಪರ್ವ' ಹಾಗೂ ಪ್ರೇಮಾ ನಾಯಕಿಯಾಗಿದ್ದ 'ಮರ್ಮ' ಚಿತ್ರಗಳು ಸೋಪೆದ್ದ ಮೇಲೆ ಕೆಲ ದಿನ ತಣ್ಣಗಿದ್ದ ಸುನೀಲ್ ಕುಮಾರ್ ದೇಸಾಯಿ 2005ರಲ್ಲಿ ಮತ್ತೆ ರೀಲು ಸುತ್ತಲು ಹೊರಟಿದ್ದು 'ರಮ್ಯ ಚೈತ್ರ ಕಾಲ' ಎನ್ನುವ ಚಿತ್ರಕ್ಕೆ. ಸಂದೀಪ್ ಎನ್ನುವ ಹೊಸ ನಟ ಅದಕ್ಕೆ ನಾಯಕನಾಗಿದ್ದ. ಅದಾಗಲೆ ಗಾಂಧಿನಗರದ



'ಗ್ಯಾರಂಟಿ'ಯನ್ನೆ ಕಳೆದುಕೊಂಡಿದ್ದ ದೇಸಾಯಿ ನಂಬಿ ದುಡ್ಡು ಕೊಡಲು ಯಾವ ನಿರ್ಮಾಪಕರೂ ಸಿದ್ಧರಿರಲಿಲ್ಲ. ಹಾಗಾಗಿ ಸ್ನೇಹಿತ ಡಿ.ರಮೇಶ್ ಮಾಲೀಕತ್ವದ 'ಕಾರ್ಯಸಿದ್ಧಿ ಆಂಜನೇಯ ಪ್ರೊಡಕ್ಷನ್ಸ್' ಚಿತ್ರಸಂಸ್ಥೆಗೆ ಕಾರ್ಯನಿರ್ವಾಹಕ ನಿರ್ಮಾಪಕನಾಗುವ ಮೂಲಕ ನಿರ್ದೇಶನದ ಜೊತೆಯಲ್ಲೇ ದೇಸಾಯಿ ನಿರ್ಮಾಣಕ್ಕೂ ಹೆಗಲು ನೀಡಿದ್ದರು. ಕಡಿಮೆ ಬಜೆಟ್‌ನಲ್ಲೇ ಶೂಟಿಂಗ್ ಮುಗಿಸಿ ನಿಂತಿದ್ದ ಚಿತ್ರಕ್ಕೆ ಕೊನೇಕ್ಷಣದಲ್ಲಿ ಆರ್ಥಿಕ ಮುಗ್ಗಟ್ಟು ಅಡ್ಡ ಬಂದು ರಿಲೀಸ್ ಆಗುವುದೇ ದೊಡ್ಡ ಸಮಸ್ಯೆಯಾಗಿ ಹೋಗಿತ್ತು. ಆಗ ಸುನೀಲ್ ಕುಮಾರ್ ದೇಸಾಯಿಯ ಸಹಾಯಕ್ಕೆ ಬಂದದ್ದು ...ದೇ ಎನ್ನಾರೈ ಹೊಸ್ಮನೆ.

... ದೇಸಾಯಿ, ಚಿತ್ರ ಸಂಸ್ಥೆಯ ಪರವಾಗಿ ... ಡಾ.ಹೊಸ್ಮನೆಯಿಂದ ಹದಿನೈದು ಲಕ್ಷ ರೂಪಾಯಿ ಸಾಲ ಪಡೆದಿದ್ದರು. ಇದಕ್ಕೆ ಪ್ರತಿಯಾಗಿ 'ರಮ್ಯ ಚೈತ್ರ ಕಾಲ' ಸಿನಿಮಾದ ಟಿ.ವಿ. ರೈಟ್ಸ್‌ಗಳನ್ನು ಹೊಸ್ಮನೆಗೆ ನೀಡಬೇಕೆನ್ನುವ ಒಡಂಬಡಿಕೆಯೂ ನಡೆದಿತ್ತು. ಇದಿಷ್ಟೂ ವ್ಯವಹಾರ ಕುದುರಿದ್ದು ಬೆಂಗಳೂರಿನಲ್ಲಿ. ಈ ಕುರಿತು ಆಗಸ್ಟ್ 8, 2005ರಲ್ಲಿ ಬರೆದುಕೊಟ್ಟಿರುವ ಕರಾರುಪತ್ರದಂತೆ ಚಿತ್ರದ ಟಿ.ವಿ. ಸ್ಯಾಟಲೈಟ್ ಹಕ್ಕುಗಳ ಉಸ್ತುವಾರಿ ಲಲಿತಾ ಸದಾಶಿವ ಹೊಸ್ಮನೆ (ನಾರಾಯಣ ಹೊಸ್ಮನೆಯ ತಾಯಿ) ಅವರಿಗೆ ಸೇರಬೇಕಾಗಿತ್ತು. ಹಾಗಂತ ನಿರ್ಮಾಪಕರುಗಳಿಗೂ ಚಿತ್ರದ ಟಿ.ವಿ. ಹಕ್ಕುಗಳಿಗೂ ಸಂಬಂಧವೇ ಮುಗಿದುಹೋಯ್ತು ಎನ್ನುವಂತೆಯೂ ಇರಲಿಲ್ಲ. ಯಾಕೆಂದರೆ ಅದು ಹಕ್ಕುಗಳ ನೇರ ಮಾರಾಟವಾಗಿರಲಿಲ್ಲ. ಕೇವಲ ಹಕ್ಕುಗಳ ಮೇಲಿನ ಉಸ್ತುವಾರಿಯನ್ನಷ್ಟೇ ನೀಡಲಾಗಿತ್ತು. ಅಂದರೆ ನಿರ್ಮಾಪಕರು ಸ್ಯಾಟಲೈಟ್ ಹಕ್ಕುಗಳನ್ನು ಖಾಸಗಿ ಸಂಸ್ಥೆಗೂ, ಟಿ.ವಿ. ಚಾನೆಲ್‌ಗೂ ಮಾರಾಟ ಮಾಡಬಹುದಿತ್ತಾದರು ಆಗ ಬಂದ ಮೊತ್ತದಲ್ಲಿ, ಹೊಸ್ಮನೆ ನೀಡಿದ್ದ ಹದಿನೈದು ಲಕ್ಷವನ್ನು ಹಾಗೂ ಆ ಮೊತ್ತಕ್ಕೆ ತಗಲುವ ನ್ಯಾಯಸಮ್ಮತ ... ನೇರವಾಗಿ ಹೊಸ್ಮನೆಗೆ ಪಾವತಿಸಬೇಕಾಗಿತ್ತು. ಒಂದುವೇಳೆ, ಹದಿನೈದು ಲಕ್ಷಕ್ಕಿಂತಲೂ ... ಬೆಲೆಗೆ ರೈಟ್ಸ್ ಮಾರಾಟವಾದರೆ, ಹೊಸ್ಮನೆಗೆ ಕೊಡಬೇಕಾದ ಅಸಲಿ ಮೊತ್ತ ಹಾಗೂ ರಾಯಲ್ಟಿ ಹಣವನ್ನು ಚಿತ್ರದ ಬೇರೆ ಆದಾಯಗಳಿಂದ ಸಂಗ್ರಹಿಸಿ ಆತನಿಗೆ ನೀಡಬೇಕಾಗಿತ್ತು. ನಿರ್ಮಾಪಕರು ಮಾರಾಟ ಮಾಡಲು ವಿಫಲವಾದರೆ, ಹೊಸ್ಮನೆಯೇ ಟಿ.ವಿ. ರೈಟ್ಸ್‌ಗಳನ್ನು ಮಾರಾಟ ಮಾಡಿಕೊಳ್ಳಬಹುದು ಎನ್ನುವ ಒಪ್ಪಂದಗಳು ಕರಾರುಪತ್ರದಲ್ಲಿ ನಮೂದಾಗಿದ್ದವು.

ಒಂದರ್ಥದಲ್ಲಿ ಆ ಚಿತ್ರದ ಸ್ಯಾಟಲೈಟ್ ಹಕ್ಕುಗಳನ್ನು ಹೊಸ್ಮನೆ ಬಳಿ ಅಡವಿಟ್ಟ ದೇಸಾಯಿ ಹದಿನೈದು ಲಕ್ಷ ಸಾಲ ಮಾಡಿದ್ದಂತೂ ನಿಜ. ಸಿಂಡಿಕೇಟ್ ಬ್ಯಾಂಕ್ ಖಾತೆಯ ಮೂರು ಚೆಕ್‌ಗಳ ಮೂಲಕ ಕಾರ್ಯಸಿದ್ಧಿ ಆಂಜನೇಯ ಪ್ರೊಡಕ್ಷನ್ ಸಂಸ್ಥೆಗೆ ಈ ಹಣ ಸಂದಾಯವಾಗಿದೆ. ದಿನಾಂಕ 08.08.2005ರಂದು ಸಂಖ್ಯೆ 326326ರ ಚೆಕ್ ಮೂಲಕ 5,00,000 ಹಾಗೂ ಅದೇ ದಿನ ಚೆಕ್ ಸಂಖ್ಯೆ 326327 ಮೂಲಕ 7,00,000/- ಮತ್ತು 22.08.2013ರಂದು ಚೆಕ್ ಸಂಖ್ಯೆ 326353 ಮೂಲಕ 3,00,000/- ಹೀಗೆ ಒಟ್ಟು 15 ಲಕ್ಷ ರೂ. ವರ್ಗಾವಣೆಯಾಗಿದೆ.

ಆದರೆ ನಿರ್ಮಾಪಕರಾದ ಡಿ.ರಮೇಶ್ ಮತ್ತು ದೇಸಾಯಿ ಚಿತ್ರದ ಸ್ಯಾಟಲೈಟ್ ಹಕ್ಕುಗಳನ್ನು ಮೂರನೇ ಪಾರ್ಟಿಗೆ ಮಾರಾಟ ಮಾಡಿದ್ದರು. ಡಾ.ಹೊಸ್ಮನೆಗೆ ಸೇರಬೇಕಾಗಿದ್ದ ಹದಿನೈದು ಲಕ್ಷ ಅಸಲು ಮತ್ತು ರಾಯಲ್ಟಿ ಹಣ ಹೊಸ್ಮನೆಗೆ ತಲುಪಿಸಿಯೇ ಇರಲಿಲ್ಲ. ಇದೇ ಸದ್ಯದ ವಿವಾದಕ್ಕಿರುವ ಮೂಲ ಕಾರಣ. ಅತ್ತ 'ರಮ್ಯ ಚೈತ್ರ ಕಾಲ' ಚಿತ್ರವೂ ಬಾಕ್ಸಾಫೀಸ್‌ನಲ್ಲಿ ಮುಗ್ಗರಿಸಿದ್ದರಿಂದ ದೇಸಾಯಿಯ ದುಡ್ಡು-ಕಾಸಿನ ಪರಿಸ್ಥಿತಿ ಮತ್ತಷ್ಟೂ ಕ್ರಿಟಿಕಲ್ ಸ್ಥಿತಿಗೆ ಬಂದು ತಲುಪಿತ್ತು. ಹಾಗಾಗಿ ಸಾಲ ಹಾಗೇ ಉಳಿದಿತ್ತು. ಈ ನಡುವೆ ದೇಸಾಯಿ, ಡಾ.ಹೊಸ್ಮನೆಗೆ ನೀಡಿದ್ದ ಒಂದೆರಡು ಚೆಕ್‌ಗಳೂ ಬೌನ್ಸ್ ಆಗಿದ್ದವು.

ಆದರೆ ಇತ್ತೀಚೆಗಷ್ಟೆ ಸುನೀಲ್ ಕುಮಾರ್ ದೇಸಾಯಿಯವರು ರಮೇಶ್ ಅರವಿಂದ್, ಅನಂತನಾಗ್, ರಂಗಾಯಣ ರಘು ಮೊದಲಾದ ನಟರ ಕಾಂಬಿನೇಷನ್‌ನಲ್ಲಿ 'ತಂದಾನ..ತಂದಾನಾನಾ..' ಎಂಬ ಹೊಸ ಚಿತ್ರ ಆರಂಭಿಸುವುದಾಗಿ ಪ್ರಕಟಿಸುತ್ತಿದ್ದಂತೆಯೇ ರೊಚ್ಚಿಗೆದ್ದಿರುವ ಡಾ.ನಾರಾಯಣ ಹೊಸ್ಮನೆ ದೇಸಾಯಿಯನ್ನ ಹಿಗ್ಗಾ-ಮುಗ್ಗಾ ನಿಂದಿಸಿದ ಇ-ಮೇಲ್ ಅನ್ನು ಮಾಧ್ಯಮಗಳಿಗೂ, ಕನ್ನಡ ಚಿತ್ರ ನಿರ್ಮಾಪಕರಿಗಳಿಗೂ ಕಳಿಸಿ ವಿವಾದಕ್ಕೆ ಜೀವ ತುಂಬಿದ್ದಾರೆ. 'ನಾನು ಡಾ.ಹೊಸ್ಮನೆಗೆ ಹಣ ಕೊಡಬೇಕಾಗಿರೋದು ನಿಜ, ಅದನ್ನು ಪ್ರತಿ ತಿಂಗಳು ಐದು ಲಕ್ಷದಂತೆ ಇನ್ನು ಮೂರು ತಿಂಗಳಲ್ಲಿ ತೀರಿಸ್ತೀನಿ' ಅಂತ ಸ್ವತಃ ದೇಸಾಯಿಯೇ ಒಪ್ಪಿಕೊಂಡಿರೋದ್ರಿಂದ ವಿವಾದ ಸದ್ಯದಲ್ಲೇ ಅಂತ್ಯಕಾಣುವ ನಿರೀಕ್ಷೆಯೂ ಇದೆ.

ಪ್ರತಿಭೆಯ ದಿಕ್ಕು ತಪ್ಪಿಸಿದ ದೇಸಾಯಿ

ಚೂರೇ ಚೂರು over confidence, ಅಷ್ಟೇ ಪ್ರಮಾಣದ ಹಠ-ಮೊಂಡಾಟಗಳಿಗೆ ಅಂಟಿ ಕೂತರೆ ಅದ್ಭುತ ಪ್ರತಿಭಾವಂತನೂ ಹೇಗೆ ಸರಿದು ಹೋಗುತ್ತಾನೆ ಎನ್ನುವುದಕ್ಕೆ ಸುನೀಲ್ ಕುಮಾರ್ ದೇಸಾಯಿಯೇ ಸಾಕ್ಷಿ. ತನ್ನನ್ನು ಪೂರ್ಣ ಪ್ರಮಾಣದ ನಿರ್ದೇಶಕನನ್ನಾಗಿ ಪರಿಚಯಿಸಿಕೊಂಡ 'ತರ್ಕ' (1988) ಸಿನಿಮಾದಿಂದಲೇ ಬೆಳ್ಳಿ ತೆರೆಗೆ ಅಚ್ಚರಿಯಂತೆ ಅಪ್ಪಳಿಸಿದವರು ಈ ದೇಸಾಯಿ. ಮನಸ್ಸಿನ ತಲ್ಲಣಗಳನ್ನು ಸರಿತಪ್ಪುಗಳ ಪೂರ್ವ ವಿಮರ್ಶೆಯಿಲ್ಲದೆ ಸೂಕ್ಷ್ಮವಾಗಿ ಸೆರೆಹಿಡಿದ ಅವರ ಪ್ರಯತ್ನ ನಿಜಕ್ಕೂ ಕನ್ನಡ ಚಿತ್ರರಂಗದಲ್ಲಿ ಭರವಸೆಯೊಂದನ್ನು ಮೂಡಿಸಿತ್ತು. ಆ ಭರವಸೆಯನ್ನು ಹುಸಿಗೊಳಿಸದಂತೆ ಅವರ ಮುಂದಿನ ಚಿತ್ರಗಳಾದ ಉತ್ಕರ್ಷ, ಸಂಘರ್ಷ, ನಿಷ್ಕರ್ಷಗಳು ವಿಭಿನ್ನ ಮತ್ತು ಉತ್ಕೃಷ್ಟವಾಗಿ ಮೂಡಿ ಬಂದಿದ್ದವು. ಸಸ್ಪೆನ್ಸ್ ಹಾಗೂ ಥ್ರಿಲ್ಲರ್ ಸರಣಿಗೇ ದೇಸಾಯಿ ಬ್ರ್ಯಾಂಡ್ ಆಗಿ ಬಿಡುವ ಸಾಧ್ಯತೆ ಇದ್ದಾಗ 1996ರಲ್ಲಿ ಯಂಡಮೂರಿ ವೀರೇಂದ್ರನಾಥ್‌ರ (ಕನ್ನಡಕ್ಕೆ ಅಂಶಿಯವರು ಅನುವಾದಿಸಿದ) 'ಬೆಳದಿಂಗಳ ಬಾಲೆ' ಕಾದಂಬರಿಯನ್ನು ಅದೇ ಹೆಸರಿನಲ್ಲಿ ಅಮೋಘ ಚಿತ್ರವಾಗಿಸುವ ಮೂಲಕ ತಾನೊಬ್ಬ ಸೂಕ್ಷ್ಮ ಸಂವೇದಿ ನಿರ್ದೇಶಕನೂ ಹೌದು ಎಂದು ಸಾಬೀತುಪಡಿಸಿದ್ದರು. ನಂತರ ದೇಸಾಯಿಗೆ ಅಪಾರ ಖ್ಯಾತಿ ತಂದು ಕೊಟ್ಟದ್ದು 'ನಮ್ಮೂರ ಮಂದಾರ ಹೂವೆ' (1997) ಚಿತ್ರ.

ಅವರ ಚಿತ್ರಗಳಲ್ಲಿನ ನಟರುಗಳನ್ನೂ ಮೀರಿ ದೇಸಾಯಿ ಆಯ್ದುಕೊಳ್ಳುತ್ತಿದ್ದ ಕಥೆ, ತಾನು ಹೇಳಬಯಸುವ ಸಂದೇಶ Convey ಆಗುವ ರೀತಿಯಲ್ಲಿ ನಿರೂಪಿಸುತ್ತಿದ್ದ ಬಗೆಗಳೇ ನೋಡುಗರಿಗೆ ದೇಸಾಯಿ ಸಿನಿಮಾಗಳನ್ನು ಹತ್ತಿರವಾಗಿಸುತ್ತಿದ್ದವು. ಸಿನಿಮಾವಾಗದ ಕಥೆಗಳನ್ನೂ ಸಿನಿಮಾವಾಗಿಸುವ ನಿಪುಣತೆ, ಕಲಾತ್ಮಕತೆ ದೇಸಾಯಿಯವರ ನಿರ್ದೇಶನದಲ್ಲಿ ಮಿಳಿತವಾಗಿದ್ದವು. 2000ದಲ್ಲಿ ತೆರೆಕಂಡ 'ಸ್ಪರ್ಶ' ಚಿತ್ರವೂ ಅದನ್ನು ಸಾಬೀತುಪಡಿಸಿತ್ತು. ಇಡೀ ಚಿತ್ರ ಪಾಪಪ್ರಜ್ಞೆಯಂತಹ ಎಳೆಯ ಸುತ್ತಲೇ ಹರವಿಕೊಂಡದ್ದು ದೇಸಾಯಿಯ ಚಿತ್ರಕುಸುರಿಗೆ ಹಿಡಿದ ಕೈಗನ್ನಡಿಯಂತಿತ್ತು.

ಈ ಗೆಲುವು, ಈ ಹೆಚ್ಚುಗಾರಿಕೆಗಳೆ ಸುನೀಲ್ ಕುಮಾರ್ ದೇಸಾಯಿಯಲ್ಲಿ ಅತಿಯಾದ ಆತ್ಮವಿಶ್ವಾಸ, ತಾನೇ Ultimate ಎನ್ನುವ ಸಲ್ಲದ ಬಿಗುವುಗಳನ್ನು ಸಣ್ಣಗೆ ತುಂಬುತ್ತಾ ಬಂದದ್ದು ಅವರಿಂದ ಸೃಜನಾತ್ಮಕ ದೇಸಾಯಿ ದೂರ ಸರಿಯುವಂತೆ ಮಾಡಿದ್ದವು. ತಾನು ನಿರ್ದೇಶಕನೆನ್ನುವ ಕಾರಣಕ್ಕೆ ಎಲ್ಲಾ ತಂತ್ರಜ್ಞಾನ, ಕಲಾವಿದರ ಕೆಲಸಗಳಲ್ಲೂ ಮೂಗು ತೂರುತ್ತಾ ಬಂದ ದೇಸಾಯಿ ಚಿತ್ರತಂಡದಲ್ಲಿ Suffocating ವಾತಾವರಣ ಸೃಷ್ಟಿಯಾಗಲು ನೇರ ಹೊಣೆಗಾರರಾಗುತ್ತಾ ಬಂದರು. 'Best, must be given by me only' ಎನ್ನುವ ಭ್ರಮೆಯಲ್ಲಿ ಆಯಾ ವಿಭಾಗದವರಿಗೂ ವರ್ಕ್‌ಸ್ಪೇಸ್ ನೀಡದಂತೆ ಲೈಟಿಂಗ್‌ನಿಂದ ಹಿಡಿದು ಡ್ಯಾನ್ಸ್, ಫೈಟಿಂಗ್ ಸಂಯೋಜನೆಯವರೆಗೂ ತನ್ನ ಯಜಮಾನಿಕೆಯನ್ನು ಹಿಗ್ಗಿಸುತ್ತಾ ಬಂದದ್ದು ಅವರನ್ನೊಬ್ಬ ಕಿರಿಕಿರಿಯ ನಿರ್ದೇಶಕನನ್ನಾಗಿ ಬಿಂಬಿಸಿದವು.

'ನಾನೊಬ್ಬ ಅದ್ಭುತ ನಿರ್ದೇಶಕ, ಅತ್ಯದ್ಭುತ ಸಿನಿಮಾವನ್ನೇ ಕೊಡುತ್ತೇನೆ. ಈ ನಂಬಿಕೆ ಇದ್ದರೆ ನನ್ನ ಸಿನಿಮಾದಲ್ಲಿ ನಟಿಸಿ' ಎನ್ನುವ ಹುಂಬತನದಲ್ಲಿ ತನ್ನ ಸಿನಿಮಾದ ನಟರಿಗೂ ಸಂಪೂರ್ಣ ಕಥೆಯನ್ನು ಹೇಳದೆ ಚಿತ್ರದ ರೀಲು ಸುತ್ತಲು ಹೊರಟ ದೇಸಾಯಿ 'ಸ್ಪರ್ಶ'ದ ನಂತರ ಸಾಲು ಸಾಲು ಫ್ಲಾಪ್ ಚಿತ್ರಗಳನ್ನೆ ನೀಡಿದರು. ಕಥೆಯನ್ನೇ ಹೇಳದ ದೇಸಾಯಿಯ ಜೊತೆ 'ಪರ್ವ' ಚಿತ್ರದ ಶೂಟಿಂಗ್ ಸಮಯದಲ್ಲಿ ವಿಷ್ಣು ಮುನಿಸಿಕೊಂಡದ್ದೂ ಉಂಟು. ಆದರೂ ದೇಸಾಯಿ ತನ್ನ ಪಟ್ಟು ಸಡಿಲಿಸದೆ ಕಥೆ ಹೇಳದೆಯೇ ಕಲಾವಿದರಿಂದ ನಟನೆ ಹೊರ ತೆಗೆದು ಚಿತ್ರ ಸಿದ್ಧಗೊಳಿಸಿದ್ದರು. ಕೇವಲ ದೇಸಾಯಿ ವೃತ್ತಿಬದುಕಿನಲ್ಲಿ ಮಾತ್ರವಲ್ಲ, ವಿಷ್ಣು ಚಿತ್ರ ಜೀವನದಲ್ಲೂ 'ಪರ್ವ' ದೊಡ್ಡ ಸೋಲಾಗಿ ಉಳಿದುಹೋಯ್ತು. ಗೆಲುವಿನ ಲಯ ಕಂಡುಕೊಳ್ಳಲು ತನ್ನ ಹಳೇ ಶೈಲಿಯ ಸಸ್ಪೆನ್ಸ್ ಕಥೆಯಿಟ್ಟುಕೊಂಡು ತೆಗೆದ 'ಮರ್ಮ' ಕೂಡಾ ಸೋಲಿನ ಕರ್ಮವನ್ನು ಅಳಿಸಲಿಲ್ಲ. ಅಷ್ಟರಲ್ಲಾಗಲೆ ದೇಸಾಯಿ 'ಔಟ್ ಡೇಟೆಡ್' ಎನ್ನುವ ಸ್ಥಿತಿ ತಲುಪಿದ್ದರು. ಅಂತಹ ಸಮಯದಲ್ಲಿ ನಿರ್ದೇಶಿಸಿದ 'ರಮ್ಯ ಚೈತ್ರ ಕಾಲ' ಚಿತ್ರವೂ ದೇಸಾಯಿ ತೋಳಿಗೆ ನಿರೂಪೈಸೆಯ ಬಲ ತುಂಬಲಿಲ್ಲ, ಬದಲಾಗಿ ಸಾಲಗಾರನನ್ನಾಗಿಸಿತು.

ಈ ನಡುವೆ ಪ್ರಜ್ವಲ್ ದೇವರಾಜ್ ಮತ್ತು ನಕ್ಷತ್ರಾ ಜೋಡಿಯಲ್ಲಿ 'ಸರಿಗಮಪ' ಚಿತ್ರಕ್ಕೆ ರೀಲು ಸುತ್ತಲು ದೇಸಾಯಿ ಸಜ್ಜಾದರೂ ಚಿತ್ರ ಸೆಟ್ಟೇರಲೇ ಇಲ್ಲ. 'ತ್ರಿ ದಿನಗಳು' ಚಿತ್ರದ ಚೇತನ್ ನಾಯಕತ್ವದಲ್ಲಿ ಮತ್ತೊಂದು ಚಿತ್ರಕ್ಕೆ ತಯಾರಿ ನಡೆಯಿತಾದರೂ ಹೆಸರು ನಿಕ್ಕಿಯಾಗುವುದಕ್ಕೂ ಮುನ್ನವೇ ಚಿತ್ರ ಡ್ರಾಪ್ ಆಗಿತ್ತು. ಹೀಗೆ ಸುನೀಲ್ ಕುಮಾರ್ ದೇಸಾಯಿಯ ಬಣ್ಣದ ಬದುಕು ಒಂದರ ಮೇಲೊಂದು ಆಘಾತಗಳನ್ನು ಅನುಭವಿಸಬೇಕಾಯ್ತು. ದೇಸಾಯಿಯ ಈ ದುಸ್ಥಿತಿಗೆ ದೇಸಾಯಿಯೇ ಕಾರಣ!


ಸುದೀರ್ಘ ಅಜ್ಞಾತವಾಸದ ನಂತರ, ಹಲವಾರು ಹತಾಶೆಗಳ ತರುವಾಯ ನಿರ್ದೇಶಕನ ಹ್ಯಾಟ್ ಧರಿಸಲು ಅಣಿಯಾಗುತ್ತಿರುವ ಸುನೀಲ್ ಕುಮಾರ್ ದೇಸಾಯಿಯನ್ನು ವಿವಾದ ಸ್ವಾಗತಿಸುವಂತಾಗಿರೋದು ದುರದೃಷ್ಟ. ಹಲವಾರು ಸಿನಿಮಾಗಳಲ್ಲಿ ತಾನೇ ಚಿತ್ರಿಸಿದ 'ವ್ಯಕ್ತಿತ್ವ ಉನ್ಮಾದ'ಗಳಿಗೆ ಬಲಿಯಾಗುತ್ತಿರುವ ಕನ್ನಡದ ಪ್ರತಿಭಾವಂತ ನಿರ್ದೇಶಕ



ದೇಸಾಯಿ ಹಳೆಯ ಪರಿಧಿಯಿಂದ ಹೊರಬಂದು ಸಹಕಲಾವಿದರಿಗೆ ವರ್ಕ್‌ಸ್ಪೇಸ್ ನೀಡಿ, ಹೊಸ ಪೀಳಿಗೆಯ ಅಭಿರುಚಿಗೆ ಸ್ಪಂದಿಸಿದ್ದೇ ಆದಲ್ಲಿ, 'ತಂದಾನಾ..... ತಂದಾನಾನಾ.....' ಸಿನಿಮಾ ಅವರ ಚಿತ್ರ ಬದುಕಿನ ನವ ಮನ್ವಂತರವಾಗುವ ನಿರೀಕ್ಷೆ ಮೂಡಿಸಬಹುದು. ಅದಕ್ಕೂ ಮುನ್ನ ಅವರು ಸದ್ಯದ ವಿವಾದದಿಂದ ಮುಕ್ತರಾಗುವತ್ತ ಗಮನ ಹರಿಸಲಿ.

● ಗಿರೀಶ್ ತಾಳಿಕಟ್ಟೆ

ಹೊಸ್ಮನೆಯ ಫ್ಲಾಪ್ ಸಿನಿಯಾನ




ಕಳೆದ ಮೂರು ದಶಕಗಳಿಂದ ಅಮೆರಿಕಾದಲ್ಲಿ ಕ್ಯಾನ್ಸರ್ ಸಂಶೋಧನಾ ಕ್ಷೇತ್ರದಲ್ಲಿ ಹೆಸರು ಮಾಡಿರುವ ಡಾ.ನಾರಾಯಣ ಹೊಸ್ಮನೆ ಎಂಬ ಎನ್.ಆರ್.ಐಗೆ ಚಿತ್ರರಂಗದ ಬಗ್ಗೆ ಅದೆಂತಹುದ್ದೋ ವ್ಯಾಮೋಹ. ಉತ್ತರ ಕನ್ನಡ ಜಿಲ್ಲೆಯ ಗೋಕರ್ಣ ... ಹವ್ಯಕ ಬ್ರಾಹ್ಮಣ ಕುಟುಂಬದಲ್ಲಿ ಹುಟ್ಟಿದ ಈ ಅಪ್ಪಟ ಕನ್ನಡಿಗ ನಿರ್ಮಾಣಕ್ಕೆ ... ಕೈ ಇಟ್ಟ ಚಿತ್ರಗಳು ಮಕಾಡೆ ಮಲಗಿವೆ. ... ಮಾಡಿದ 'ರಘು ... ರಜತ್ ಕಪೂರ್ ಜೊತೆಗೂಡಿ ... ರೋಮಿಯೋ' ಎಂಬ ಹಿಂದಿ ಸಿನಿಮಾ ಮಾತ್ರ ಹಣ ಮತ್ತು ಪ್ರಶಸ್ತಿ ಗಳಿಸಿದ್ದು ಬಿಟ್ಟರೆ ಉಳಿದೆಲ್ಲವೂ ಹೊಸ್ಮನೆಯ ದುರದೃಷ್ಟಕ್ಕೆ ಸಾಕ್ಷಿಯೆಂಬಂತೆ ಬಿದ್ದುಕೊಂಡಿವೆ.

ಆರು ಮಿತ್ರರೊಂದಿಗೆ ಸೇರಿ ಟಿ.ಎನ್.ಸೀತಾರಾಂ ನಿರ್ದೇಶನದ 'ಮೀರಾ ಮಾಧವ ರಾಘವ' ಎಂಬ ಚಿತ್ರ ನಿರ್ಮಿಸಿದರಾದರು ಅದು ಇಸ್ಪಿಲ್ಲದಂತೆ ಮುಗ್ಗರಿಸಿತು. ಅನಂತರ ಏಡ್ಸ್ ಕುರಿತು ಜಾಗೃತಿ ಮೂಡಿಸುವ 'ಮುಖಪುಟ' ಎಂಬ ಚಿತ್ರಕ್ಕೆ ಹಣ ಹಾಕಿದರು. ಆ ಚಿತ್ರ ನಿರ್ದೇಶಕಿ ರೂಪಾ ಅಯ್ಯರ್‌ಗೆ ಹೆಸರು ತಂದುಕೊಟ್ಟಿತೆ ವಿನಾ ಎನ್ನಾರೈ ಹೊಸ್ಮನೆಗೆ ಲಾಭವಾಗಲಿಲ್ಲ. ಆಮೇಲೆ ಎನ್.ಆರ್.ಐ ಗೆಳೆಯರನ್ನೇ ಸೇರಿಸಿಕೊಂಡು, ಎನ್.ಆರ್.ಐ ನಿರ್ದೇಶಕಿ ಪ್ರಿಯಾ ಭಾರತಿ ನಿರ್ದೇಶನದಲ್ಲಿ ಕನ್ನಡದ ದೂದ್‌ಪೇಡಾ ದಿಗಂತ್‌ನನ್ನು ನಾಯಕನನ್ನಾಗಿಸಿ 'ಈ ಪ್ರೀತಿ' ಸಿನಿಮಾ ಶುರು ಮಾಡಿದರಾದರು ಒಂದರ ಮೇಲೊಂದು ವಿವಾದಗಳು ಹೊರಬಂದವೇ ಹೊರತು ಸಿನಿಮಾ ರಿಲೀಸ್ ಆಗಲಿಲ್ಲ.

ಇದೇ ಕಾರಣಕ್ಕೆ ಡಾ.ಹೊಸ್ಮನೆ ಕನ್ನಡ ಚಿತ್ರರಂಗದ ಮೇಲೆ ವಿಪರೀತ ಅಪ್‌ಸೆಟ್ ಆದಂತಿದೆ. ಅದಕ್ಕೊಂದೇ ದೇಸಾಯಿ ಕೊಡಬೇಕಾದ ಸಾಲವನ್ನೇ ನೆಪವಾಗಿಟ್ಟುಕೊಂಡು 'ಎನ್.ಆರ್.ಐ. ನಿರ್ಮಾಪಕರುಗಳ್ಯಾರು ಕನ್ನಡ ಚಿತ್ರಗಳಿಗೆ ಹಣ ಹಾಕದಂತೆ ಅಭಿಯಾನ ಆರಂಭಿಸುತ್ತೇನೆ' ಅಂತ ತಮ್ಮ ನೋವು ತೋಡಿಕೊಂಡಿದ್ದಾರೆ.

ಮಂಡ್ಯ ಸರ್ಕಾರಿ ನೌಕರರಿಗೆ 8 ಕೋಟಿ ದೋಖಾ!

ಮಂಚೇಗೌಡನ ಸೈಟು ವಂಚನೆ


ವರದರಾಜ್

ಮಂಡ್ಯದ ನಸೀಬೇ ಸರಿ ಇದ್ದಂತಿಲ್ಲ. ಒಂದು ಕಾಲದಲ್ಲಿ ಸ್ವಾಭಿಮಾನಿ ಹೋರಾಟಗಳಿಂದಾಗಿಯೇ ಸುದ್ದಿಯಾಗುತ್ತಿದ್ದ ಮಂಡ್ಯ ಈಗ ಮೇಲಿಂದ ಮೇಲೆ ವಂಚನೆಗಳಿಗೆ ಸಾಕ್ಷಿಯಾಗುತ್ತಿದೆ. ಇತ್ತೀಚೆಗಷ್ಟೆ ಮೂಡಾದಲ್ಲಿ ನಡೆದ 5 ಕೋಟಿ ರೂ. ವಂಚನೆ ಹಾಗೂ ಅಕ್ರಮ ಸೈಟು ಹಂಚಿಕೆ, ಶಿಂಷಾ, ಸಿಟಿ ಕೋ-ಆಪರೇಟಿವ್ ಹಾಗೂ ಲೋಕಪಾವನಿ ಸಹಕಾರ ಬ್ಯಾಂಕುಗಳ ಕೋಟ್ಯಾಂತರ ಅವ್ಯವಹಾರದ ಪ್ರಕರಣಗಳು ಮಾಸುವ ಮುನ್ನವೇ 400 ಮಂದಿ ಸರ್ಕಾರಿ ನೌಕರರನ್ನ ಯಾಮಾರಿಸಿದ ಪ್ರಕರಣವೀಗ ಹೊರಬಂದಿದೆ.

ಸ್ವಂತದ್ದೊಂದು ಮನೆ ಕಟ್ಟಿಕೊಳ್ಳಬೇಕೆಂಬುದು ಪ್ರತಿಯೊಬ್ಬರ ಕನಸು. ಅದರಲ್ಲೂ ಸರ್ಕಾರಿ ನೌಕರಿಯಲ್ಲಿದ್ದವರಿಗೆ ಅದು ಮಿನಿಮಮ್ ಸಾಧನೆ. ಹಾಗಾಗಿಯೇ ಸೈಟು ಖರೀದಿಸಿ ಮನೆ ಕಟ್ಟಿಕೊಳ್ಳುವ ಆಸೆಯಿಂದ ಲಕ್ಷ ಲಕ್ಷ ರೂಪಾಯಿ ಕಟ್ಟಿದ ಸರ್ಕಾರಿ ನೌಕರರಿಗೆ ಮಂಡ್ಯ ನಗರ ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ಅಧ್ಯಕ್ಷ ವರದರಾಜು ಹಾಗೂ ಕಾರ್ಯದರ್ಶಿ ಟಿ.ಎಂ.ಮಂಚೇಗೌಡ ಸಖತ್ತಾಗಿ ಮುಂಡಾಯಿಸಿದ್ದಾರೆ. 'ಕೊಟ್ಟೋನ್ ಕೋಡಂಗಿ ಈಸ್ಕೊಂಡೋನ್ ಈರಭದ್ರ' ಗಾದೆ ಮಾತನ್ನು ಅಕ್ಷರಶಃ ದಿಟ ಮಾಡಿರುವ ಇವರಿಬ್ಬರಿಂದಾಗಿ ಸರ್ಕಾರಿ ನೌಕರರಿಗೆ ಉಳಿದಿರೋದು ಬಾಯಿಬಡಿದುಕೊಳ್ಳುವ ಪುಣ್ಯ ಮಾತ್ರ!

ಕಳೆದ ಜುಲೈ 8-9ರಂದು ಸಂಘದ ಕಾರ್ಯದರ್ಶಿ ಮಂಚೇಗೌಡನು ಹೆಚ್.ಇ.ಸತೀಶ್, ಯೋಗಾನಂದ, ನರಸಿಂಹಯ್ಯ ಎಂಬುವವರಿಂದ ಅಧಿಕ ಹಣ ಪಡೆದು ಅವರಿಗೆ ನಂದಿನಿ ಬಡಾವಣೆಯ ಸೈಟುಗಳನ್ನು ಮಂಜೂರು ಮಾಡಿಸಿಕೊಟ್ಟಿದ್ದ. ಜೇಷ್ಠತೆ ಆಧಾರದಲ್ಲಿ ಮೊದಲಿದ್ದ ಸದಸ್ಯರನ್ನು ಕೈಬಿಟ್ಟು ತಮಗಿಷ್ಟ ಬಂದವರಿಗೆ ಸೈಟು ಹಂಚಿದ ಕೂಡಲೇ ಎಚ್ಚೆತ್ತ ಉಳಿದ ಸದಸ್ಯರು ಇನ್ನು ಕಾಯುವುದರಲ್ಲಿ ಅರ್ಥವೇ ಇಲ್ಲವೆಂದು ಸಂಘದ ಅಧ್ಯಕ್ಷ ಹಾಗೂ ಕಾರ್ಯದರ್ಶಿ ವಿರುದ್ಧ ಬಂಡೆದ್ದು ಹೋರಾಟಕ್ಕೆ ಅಣಿಯಾದಾಗಲೆ ಕೋಟ್ಯಾಂತರ ರೂಪಾಯಿ ಗುಳುಂ ಆಗಿರೋದು ಬೆಳಕಿಗೆ ಬಂದಿದೆ.

ಮಂಚೇಗೌಡನೆಂಬ ವಂಚಕ

ನ್ಯಾಯಾಂಗ ಇಲಾಖೆಯ ನಿವೃತ್ತ ನೌಕರನಾಗಿರುವ ಟಿ.ಎಂ.ಮಂಚೇಗೌಡ ಸದರಿ ಗೃಹನಿರ್ಮಾಣ ಸಹಕಾರ ಸಂಘದ ಕಾರ್ಯದರ್ಶಿ. ವಂಚನಾ ವಿದ್ಯೆಗಳಲ್ಲಿ ಪಳಗಿದ್ದ ಮಂಚೇಗೌಡ ಸರ್ಕಾರಿ ಕೆಲಸದಲ್ಲಿದ್ದಾಗಲೆ ಅಕ್ರಮವಾಗಿ ಸಾಕಷ್ಟು ಆಸ್ತಿ ಸಂಪಾದಿಸಿದ್ದ. ಆತ ನಿವೃತ್ತನಾಗುವ ವೇಳೆಗೆ ಮಂಡ್ಯದಲ್ಲಿ ಆಗಷ್ಟೇ ರಿಯಲ್ ಎಸ್ಟೇಟ್ ಉದ್ಯಮ ... ಬಿಡುತ್ತಿತ್ತು, ಸೈಟಿಗಾಗಿ ಸರ್ಕಾರಿ ... ಕಣ್ಣು ... ನೌಕರರು ರಿಯಲ್ ಎಸ್ಟೇಟ್ ಕುಳಗಳ ... ಬಳಿ ಅಲೆಯುತ್ತಿದ್ದರು. ಇದನ್ನೇ ನೆಪಮಾಡಿಕೊಂಡು ಸರ್ಕಾರಿ ನೌಕರರನ್ನು ಸದಸ್ಯರನ್ನಾಗಿಸಿ ಅವರಿಂದಲೇ ಹಣ ಸುಲಿದು ಸೈಟುಕೊಡುವ ಕಮಾಯಿಯ ಖತರ್ನಾಕ್ ಕನಸು ಬಿದ್ದಿದ್ದೇ ತಡ ಮಂಚೇಗೌಡ ಹಾಗೂ ಇತರರು ಸೇರಿ ಮಂಡ್ಯ ನಗರ ಸರ್ಕಾರಿ ನೌಕರರ ಸಹಕಾರ ಸಂಘವನ್ನು ಹುಟ್ಟುಹಾಕಿದರು. ಮಂಚೇಗೌಡನೇ ಕಾರ್ಯದರ್ಶಿಯಾದ. ಸಂಘದ ಅಧ್ಯಕ್ಷರು ಹಾಗೂ ನಿರ್ದೇಶಕರನ್ನು ತನ್ನ ಜಿಡ್ಡಾಗೆ ಕಿಡವಿಕೊಂಡ ಮಂಚೇಗೌಡ ಅವರಿಗೂ ಒಂದಷ್ಟು ತಿನ್ನಿಸಿ, ತಾನು ಮಾತ್ರ ಚಕ್ಕಮುಕ್ಕಳ ಹಾಕಿ ಕೂತು ಮುಕ್ಕತೊಡಗಿದ. ಪರಿಣಾಮವಾಗಿ ಮಂಚೇಗೌಡನ ಆಸ್ತಿ ಶರವೇಗದಲ್ಲಿ ಹಿಗ್ಗಿ ಹೋಯಿತು. ಇದೇ ಹಣದಲ್ಲಿ ಇಬ್ಬರು ಹೆಣ್ಣುಮಕ್ಕಳ ಮದುವೆಯನ್ನು ಭರ್ಜರಿಯಾಗಿ ಮಾಡಿದ ಮಂಚೇಗೌಡ ತನ್ನ ಅಕ್ರಮಗಳಿಕೆಯಲ್ಲಿ ಅಳಿಯಂದಿರಿಗೂ ಪಾಲು ನೀಡಿ ಅವರನ್ನೂ ತನ್ನ ಕರಾಳ ದಂಧೆಯ ಕುಳಗಳನ್ನಾಗಿಸಿಕೊಂಡಿದ್ದಾನೆ.

ಇನ್ನು ಸರ್ಕಾರಿ ಹೈಸ್ಕೂಲೊಂದರಲ್ಲಿ ಪಿಟಿ ಮಾಸ್ಟರ್ ಆಗಿರುವ ಸಂಘದ ಅಧ್ಯಕ್ಷ ವರದರಾಜು ಕೂಡ ಮನೆ-ಸೈಟು ಅಂತ ಸಕಲಷ್ಟು ಸೌಕರ್ಯ ಮಾಡಿಟ್ಟುಕೊಂಡಿದ್ದಾನೆ. ಇದೇ ಸಂಘದಲ್ಲಿ ತಂಗಿ ಸೇರಿದಂತೆ ತನ್ನ ಬಂಧುಬಳಗದವರಿಗೂ ಸೈಟು ಕೊಡಿಸಿದ್ದಾನೆ.

ಡಿಸಿ ಅನುಮತಿ ಇಲ್ಲ

ಇದುವರೆಗೂ ಈ ಸಂಘದ ಯಾವೊಂದು ಚಟುವಟಿಕೆಗಳು ಬೈಲಾ ಪ್ರಕಾರ ನಡೆದಿಲ್ಲ, ಮಂಚೇಗೌಡನ ಬಾಯಲ್ಲಿ ಬಂದಿದ್ದೇ ಇಲ್ಲಿ ಬೈಲಾ. ಅಪ್ಪಿ-ತಪ್ಪಿ ಯಾರಾದ್ರೂ ಸದಸ್ಯರು ಸ್ವಲ್ಪ ಜೋರಾಗಿ ಕೇಳಿದ್ರೆ, ಸಾಕು, ಬಿಪಿ ಏರಿಸಿಕೊಂಡವನಂತೆ ಮಂಚೇಗೌಡ ತಾರಾಮಾರಾ ಬೈಯ್ಯಲು ಶುರು ಮಾಡುತ್ತಿದ್ದ. ಇವನ ಬಾಯಿಗೆ ಹೆದರಿಯೇ ಇಷ್ಟು ದಿನ ಸದಸ್ಯರು ತೆಪ್ಪಗಿದ್ದರು. ಕರ್ನಾಟಕ ಭೂ ಸುಧಾರಣಾ ಕಾಯ್ದೆ 1961 ಸೆಕ್ಷನ್ 109ರ ಅಡಿಯಲ್ಲಿ ಜಿಲ್ಲಾಧಿಕಾರಿಗಳಿಂದ ಅನುಮತಿ ಪಡೆದು, ಜಮೀನು ಖರೀದಿಸಿ ಸೈಟು ಹಂಚಿಕೆ ಮಾಡಬೇಕು. ಆದರೆ 1995ರಿಂದ 2011ರವರೆಗೆ ಹಂಚಿರುವ ಎಲ್ಲಾ ಸೈಟುಗಳನ್ನು ಜಿಲ್ಲಾಧಿಕಾರಿಗಳ ಒಪ್ಪಿಗೆ ಪಡೆಯದೆ ಖರೀದಿ ಮಾಡಿ ಹಂಚಲಾಗಿದೆ.

ಅಲ್ಲದೆ ನಿಯಮದ ಪ್ರಕಾರ ಸಂಘದ ಸದಸ್ಯರು ಕಟ್ಟಿದ್ದ ಹಣದಿಂದ ಖರೀದಿಸಿರುವ ಭೂಮಿಯನ್ನು ಸಂಘದ ಅಧ್ಯಕ್ಷ ಹಾಗೂ ಕಾರ್ಯದರ್ಶಿ ಪದನಾಮಗಳ ಹೆಸರಿನಲ್ಲಿ ಖರೀದಿಸಬೇಕು. ಅಚ್ಚರಿಯ ಸಂಗತಿಯೆಂದರೆ ಹೈಸ್ಕೂಲ್ ಶಿಕ್ಷಕನಾಗಿರುವ ಅಧ್ಯಕ್ಷ ವರದರಾಜು ಹಾಗೂ ಕಾರ್ಯದರ್ಶಿ ಮಂಚೇಗೌಡ ಇಬ್ಬರೂ ತಾವು ಕೃಷಿಕರೆಂದು ಘೋಷಿಸಿಕೊಂಡು ತಮ್ಮ ಸ್ವಂತ ಹೆಸರಿಗೆ ... ಗೆ ರೈತರಿಂದ ಭೂಮಿ ಖರೀದಿಸಿದ್ದಾರೆ. ಈ ಖತರ್ನಾಕ್ ಜೋಡಿಗಳಿಗೆ ಸಬ್‌ರಿಜಿಸ್ಟ್ರಾರ್ ಕಣ್ಣುಮುಚ್ಚಿ ನೋಂದಣಿ ಮಾಡಿಕೊಡುತ್ತಾರೆಂದರೆ ಅವರಿಗೂ ತೀರ್ಥ-ಪ್ರಸಾದ ಸಖತ್ತಾಗೆ ತಲುಪಿರಬೇಕು. ಅಲ್ಲದೇ ತಮ್ಮ ಸ್ವಂತ ಹೆಸರಿಗೆ ಮಾಡಿಕೊಂಡಿರುವ ಭೂಮಿಯನ್ನು ತಮ್ಮಪ್ಪನ ಆಸ್ತಿ ಎಂಬಂತೆ ಕೋಟಿಗಟ್ಟಲೆ ಹಣಕ್ಕೆ ಖಾಸಗಿಯವರಿಗೆ ಮಾರಿಕೊಂಡಿದ್ದಾರೆ. ಯಾರ್‍ಯಾರನ್ನ ಹೇಗೆ ಸಮಾಧಾನಪಡಿಸಬೇಕೆಂಬ ವಿದ್ಯೆ ಕಲಿತಿರುವ ಮಂಚೇಗೌಡನ ಆತಿಥ್ಯಕ್ಕೆ ಸಹಕಾರ ಸಂಘಗಳ ಉಪನಿಬಂಧಕರಾದಿಯಾಗಿ ಎಲ್ಲರೂ ಮಣಿದಿದ್ದಾರೆನ್ನುವುದು ಮಾತ್ರ ಸತ್ಯ.

ಪಾರದರ್ಶಕತೆ ಇಲ್ಲ

ಸಂಘದ ಬೈಲಾ ಪ್ರಕಾರ ಜಮೀನು ಖರೀದಿ ಮಾಡುವ ಸಂದರ್ಭದಲ್ಲಿ ಚೆಕ್ ಅಥವಾ ಡಿಡಿ ಮೂಲಕ ಹಣ ಪಾವತಿ ಮಾಡಬೇಕು. ಆದರೆ ಹಣವನ್ನು ನಗದು ರೂಪದಲ್ಲಿ ನೀಡಲಾಗಿದೆ. ಈ ಬಗ್ಗೆ ಸದಸ್ಯರು ವಿಚಾರಿಸಿದಾಗ 'ಯಾರ್‍ಯಾರಿಗೋ ಲಂಚ ಕೊಡಬೇಕಾಗುತ್ತೆ, ಆಗ ಚೆಕ್ ಮೂಲಕ ಕೊಡಲು ಸಾಧ್ಯವೇ? ನಾನೇ 1 ಕೋಟಿಯಷ್ಟು ಹಣವನ್ನು ಹಾಕಿದ್ದೇನೆ. ಅದಕ್ಕೆ ನನ್ನ ಹೆಸರಿಗೆ ಬರೆಸಿಕೊಂಡಿದ್ದೇನೆ. ಯಾರಿಗೆ ಹೇಳ್ತೀರಿ ಹೇಳ್ಕೊ ಹೋಗಿ' ಎನ್ನುವ ಧಮಕಿ ಸಿಡುಕುಮೂತಿ ಮಂಚೇಗೌಡನ ಬಾಯಿಂದ ಸಿಡಿದು ಬಂದಿತ್ತು.

2006ರಿಂದ ನಿವೇಶನ ವಿತರಣೆಗಾಗಿ ಮಂಡ್ಯದ ಸುತ್ತಮುತ್ತ ಖರೀದಿಸಿರುವ ಒಂದೇ ಒಂದು ತುಂಡು ಭೂಮಿಯೂ ಸಂಘದ ಹೆಸರಿನಲ್ಲಿಲ್ಲ, ಇವರಿಬ್ಬರೂ ಕಾಯ್ದೆ ನಿಯಮಗಳನ್ನು ಸಂಪೂರ್ಣವಾಗಿ ಉಲ್ಲಂಘಿಸಿರೋದು ಸ್ಪಷ್ಟವಾಗಿದೆ. ಚೆಕ್ ಅಥವಾ ಡಿಡಿ ರೂಪದಲ್ಲಿ ಹಣ ವರ್ಗಾವಣೆಯಾದರೆ ಸದಸ್ಯರಿಗೆ ನಿಖರ ಮಾಹಿತಿ ಸಿಗುವುದರಿಂದ ನಗದು ಮೂಲಕವೇ ವ್ಯವಹಾರ ಕುದುರಿಸಿ ಸದಸ್ಯರಿಂದ ಹೆಚ್ಚು ಹಣ ಸುಲಿಯುವುದು ಈ ಖತರ್ನಾಕ್ ಜೋಡಿಗಳ ಹುನ್ನಾರ.


8 ಕೋಟಿ ಹಣ

ಸದಸ್ಯರಿಗೆ ಯಾವುದೇ ನಿವೇಶನಗಳನ್ನು ಹಂಚದಿದ್ದರೂ 2006ರಿಂದ ಸಂಘ 8 ಕೋಟಿ ರೂ. ವೆಚ್ಚ ಮಾಡಿದೆ. ಆದರೆ ಅದಕ್ಕೆ ಸರಿಯಾದ ಲೆಕ್ಕವೇ ಇಲ್ಲ. ಇದರ ಜೊತೆಗೆ ಬಡಾವಣೆಗಳನ್ನು ಮಾಡಲು ಡಿ.ಸಿ.ಯಿಂದ ಅನ್ಯಕ್ರಾಂತ ಅನುಮತಿ ಪಡೆದಿಲ್ಲ, ಮುಡಾ ನಕ್ಷೆ ಅನುಮೋದನೆಯಾಗಿಲ್ಲ, ಯಾವ ಗುತ್ತಿಗೆದಾರರಿಂದ ಬಡಾವಣೆ ಅಭಿವೃದ್ಧಿಪಡಿಸಲಾಗಿದೆ ಎಂಬುದನ್ನಾಗಲಿ ಅಧ್ಯಕ್ಷ ಹಾಗೂ ಕಾರ್ಯದರ್ಶಿ ಬಹಿರಂಗಪಡಿಸಿಲ್ಲ. ಒಂದೆಡೆ 2.51 ಕೋಟಿ ಮೊತ್ತದ ಒಟ್ಟು 13.27 ಎಕರೆ ಜಮೀನು ಖರೀದಿ ಮಾಡಲಾಗಿದೆ ಎಂದು ದಾಖಲೆಗಳಲ್ಲಿದೆ. ಆದರೆ ಇದುವರೆಗೂ ಆ ಜಮೀನನ್ನು ಅನ್ಯಕ್ರಾಂತ ಮಾಡಿ ... ಸದಸ್ಯರಿಗೆ ಸೈಟುಗಳನ್ನಾಗಿ ವಿತರಿಸಿಲ್ಲ. ಎಲ್ಲಾ ತಡಕಾಡಿದರೂ ಎರಡೂವರೆ ಕೋಟಿ ರೂಪಾಯಿಗೆ ಲೆಕ್ಕ ಸಿಗುತ್ತಿದೆಯೇ ಹೊರತು ಉಳಿದ ಐದೂವರೆ ಕೋಟಿಗೆ ಪೂರ್ವಾಪರವೇ ಇಲ್ಲ.

ಇದೆಲ್ಲಾ ಏನು ಅಂತ ಸದಸ್ಯರೇನಾದರು ಕೇಳಿದರೆ ಗುರ್ರೆನ್ನುವ ಮಂಚೇಗೌಡ 'ನಾವು ಕೊಟ್ಟಾಗ ಈಸ್ಕೋಬೇಕು, ಇಲ್ಲದಿದ್ದರೆ ನೀವು ಕಟ್ಟಿರುವ ದುಡ್ಡು ಬಿಸಾಕ್ತೀವಿ ಎತ್ಕೊಂಡ್ ಹೋಗಿ' ಅಂತ ಗದರಿಸಿ ಓಡಿಸುತ್ತಾನೆ.

ಸರ್ಕಾರಕ್ಕೂ ಮೋಸ

ಭೂಮಿ ಖರೀದಿಗಾಗಿ ನಿಗದಿಪಡಿಸಿರುವ ವಾಸ್ತವಿಕ ದರವನ್ನು ಮರೆಮಾಚಿರುವ ಈ ಜೋಡಿ ಸ್ಟಾಂಪ್ ಡ್ಯೂಟಿಯಲ್ಲಿ ಸರ್ಕಾರಕ್ಕೂ ಮೋಸ ಮಾಡಿದೆ. ಸಂಘದ ಸದಸ್ಯರಿಗೆ ಹೆಚ್ಚಿನ ದರದಲ್ಲಿ ಭೂಮಿ ಖರೀದಿ ಮಾಡಿರುವುದಾಗಿ ಲೆಕ್ಕ ತೋರಿಸಿ ಮನಸೋ ಇಚ್ಛೆ ಹಣ ಸುಲಿದು ವಂಚಿಸಿದ್ದಾರೆ. 2006ರಲ್ಲಿ ಚದರ ಅಡಿಗೆ 108 ರೂಪಾಯಿ ಫಿಕ್ಸ್ ಮಾಡಿದ್ದವರು 2008ರ ವೇಳೆಗೆ 175 ರೂ. ಗೆ ಏರಿಸಿದ್ದರು. ಆದರೀಗ ಚದರ ಅಡಿಗೆ 450 ರೂಪಾಯಿ ನಿಗದಿ ಮಾಡಿದ್ದಾರೆ.


ಮಂಚೇಗೌಡ


ಸಂಘದ ಬೈಲಾ ಪ್ರಕಾರ ಪ್ರತಿ ಆರು ತಿಂಗಳಿಗೊಮ್ಮೆ ಜೇಷ್ಠತಾ ಪಟ್ಟಿ ತಯಾರು ಮಾಡಿ ಅದಕ್ಕೆ ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರಿಂದ ಅನುಮೋದನೆ ಪಡೆಯಬೇಕು. ಆದರೆ ಮಂಚೇಗೌಡನೊಂದಿಗೆ ಅಡ್ಜಸ್ಟ್‌ಮೆಂಟ್ ಮಾಡಿಕೊಂಡು ಹೆಚ್ಚು ಹಣ ನೀಡಿದವರೇ ಮೊದಲಿಗರು! ತನಗಿಷ್ಟ ಬಂದಂತೆ ಜೇಷ್ಠತೆ ಪಟ್ಟಿಯನ್ನು ತಿದ್ದುವುದರಲ್ಲಿ ಈತ ಎಕ್ಸ್‌ಫರ್ಟ್. ಸೀನಿಯಾರಿಟಿ ಗಾಳಿಗೆ ತೂರಿ ಸುಮಾರು 60 ಮಂದಿಗೆ ಅಲಾಟ್‌ಮೆಂಟ್ ಲೆಟರ್ ಎಂಬ ಸಣ್ಣ ಚೀಟಿ ಕೊಟ್ಟಿದ್ದ. ಮಂಚೇಗೌಡನ ಚೀಟಿ ಸಿಕ್ಕಾಯಿತು ಇನ್ನೇನು ಕೆಲ ದಿನಗಳಲ್ಲೇ ಸೈಟೂ ಸಿಗುತ್ತದೆಂದು ಕಾದವರಿಗೆ 2-3 ವರ್ಷವಾದರೂ ಸೈಟಿನ ದರ್ಶನವಾಗಿಲ್ಲ.

ಬಯಲಿಗೆ ತಂದ ಸದಸ್ಯರಿಗೇ ಬೆದರಿಕೆ.

ಇಂದಲ್ಲ ನಾಳೆ ಸೈಟು ಸಿಕ್ಕೇ ಸಿಗುತ್ತದೆಂದು ಕಾಯುತ್ತಿದ್ದ 400 ಮಂದಿ ಸದಸ್ಯರು ಮೋಸಹೋಗಿದ್ದಷ್ಟೇ ಬಂತು. ವಾಸುಕಿ ಪ್ರಸನ್ನ ಎಂಬಾತ 2007ರಲ್ಲಿ ಹೆಂಡತಿಯ ಚಿನ್ನವನ್ನು ಅಡವಿಟ್ಟು 70 ಸಾವಿರ ರೂಪಾಯಿ, 2008ರಲ್ಲಿ ಸಾಲಮಾಡಿ ಪುನಃ 2.30 ಲಕ್ಷ ರೂಪಾಯಿ ಕಟ್ಟಿದ್ದರು. ಅದೇ ರೀತಿ ನಿವೃತ್ತ ಬಿಇಓ ಅಪ್ಪಾಜಯ್ಯ 2 ನಿವೇಶನಕ್ಕೆ 5 ಲಕ್ಷ ಹಣ, ತೋಟಗಾರಿಕೆ ಇಲಾಖೆ ಗುಮಾಸ್ತ ಮರಿಯಪ್ಪ 3 ಲಕ್ಷ, ಟಿ.ಶ್ರೀಧರ್, ವೆಂಕಟೇಶ್, ಚಂದ್ರಶೇಖರ್, ಸೋಮಶೇಖರ್, ಪ್ರದೀಪ್‌ಕುಮಾರ್ ಹೀಗೆ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಸೈಟು ಸಿಗುತ್ತದೆಂಬ ಆಸೆಯಿಂದ ಸಾಲ-ಸೋಲ ಮಾಡಿ ಲಕ್ಷಾಂತರ ಹಣ ತಂದು ಕಟ್ಟಿದ ಸದಸ್ಯರು ಕೊನೆಗೂ ವಂಚಕ ಜೋಡಿಯ ವಿರುದ್ಧ ಸಿಡಿದೆದ್ದಿದ್ದಾರೆ. ಸಂಘವನ್ನು ನಂಬಿ ಮೋಸಹೋದ ಸದಸ್ಯರನ್ನೆಲ್ಲಾ ಸೇರಿಸಿಕೊಂಡು ಕಾನೂನು ಹೋರಾಟಕ್ಕೆ ಮುಂದಾಗಿದ್ದಾರೆ.

ಇತ್ತ ಅವ್ಯವಹಾರಗಳು ಬಯಲಾಗುತ್ತಿದ್ದಂತೆಯೇ ವಂಚಕ ವರದರಾಜು ತನ್ನ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿ ಬಚಾವಾಗುವ ತಂತ್ರ ನಡೆಸಿದ್ದ. ಆದರೆ ಇಡಿಯಾಗಿ ಆಡಳಿತ ಮಂಡಳಿಯನ್ನು ಅಮಾನತುಗೊಳಿಸಿದ ಸಹಕಾರ ಸಂಘಗಳ ಸಹಾಯಕ ನಿಬಂಧಕ ಎಂ.ಸಿ.ಲಕ್ಷ್ಮಣ್, ನಿರೀಕ್ಷಕ ರಾಮಕೃಷ್ಣೇಗೌಡರನ್ನು ವಿಶೇಷ ಅಧಿಕಾರಿಯನ್ನಾಗಿಸಿ ಆದೇಶ ಹೊರಡಿಸಿದ್ದಾರೆ. ಇಷ್ಟಕ್ಕೇ ಸಕಲಕಲಾವಲ್ಲಭದ್ವಯರು ಬೇಸ್ತು ಬಿದ್ದು ತಪ್ಪೊಪ್ಪಿಕೊಳ್ಳುತ್ತಾರೆ ಎನ್ನುವಂತಿಲ್ಲ, ತಮ್ಮ ಅವ್ಯವಹಾರ ಬಯಲು ಮಾಡಿದರು ಎನ್ನುವ ಕಾರಣಕ್ಕೆ ವಾಸುಕಿ ಪ್ರಸನ್ನ, ಸೋಮಶೇಖರ್, ಮಾದೇಗೌಡ ಮೊದಲಾದವರಿಗೆ ಬೆದರಿಕೆ ಹಾಕುವ ಮಟ್ಟಕ್ಕೆ ಬಂದು ತಲುಪಿರುವ ವರದರಾಜು ಹಾಗೂ ಮಂಚೇಗೌಡ ಆದಾಗಲೆ ರಂಗೋಲಿ ಕೆಳಗೆ ತೂರುವ ಯೋಜನೆಯನ್ನೂ ರೂಪಿಸಿಟ್ಟುಕೊಂಡಿರಬಹುದು. ಸೆಕ್ಷನ್ 64ರನ್ವಯ ಸಂಘದಲ್ಲಿ ನಡೆದಿರುವ ಅವ್ಯವಹಾರವನ್ನು ಉನ್ನತ ಮಟ್ಟದ ತನಿಖೆಗೆ ಒಪ್ಪಿಸಿದ್ದೇ ಆದಲ್ಲಿ ಮಾತ್ರ ವರದರಾಜ-ಮಂಚೇಗೌಡರ ಜೋಡಿಯನ್ನು ಜೈಲಿಗಟ್ಟಿ, ವಂಚಿತರಿಗೆ ನ್ಯಾಯ ದೊರಕಿಸಿ ಕೊಡಬಹುದು. ಇಂತಹ ವಂಚಕರ ಅಟ್ಟಹಾಸಗಳಿಂದಾಗಿ ಸಹಕಾರಿ ಸಂಘಗಳ ಬಗ್ಗೆ ನಂಬಿಕೆಯನ್ನೆ ಜನ ಕಳೆದುಕೊಂಡಿದ್ದು ಸಚಿವ ಮಹದೇವ್ ಪ್ರಸಾದ್ ಕೂಡಲೇ ನಿಗಾ ವಹಿಸದಿದ್ದರೆ ಅನಾಹುತಗಳ ಸರಮಾಲೆ ತಪ್ಪಿದ್ದಲ್ಲ.

● ನಾಗೇಶ್



ಬಲೆಗೆ ಬಿದ್ದ ಪಾಯ್ಸನ್ ರಾಮ

ಭಯಂಕರ ಪಾತಕಿ ಪಾಯ್ಸನ್ ರಾಮ ಜೈಲು ಪಾಲಾಗಿದ್ದಾನೆ!

ಅಧಿಕಾರದಿಂದ ಬಿಜೆಪಿ ತೊಲಗುವುದಕ್ಕೂ, ಯಲಹಂಕದ ಬಿಜೆಪಿ ಶಾಸಕ ವಿಶ್ವನಾಥ್ ಪಾಪದ ಕೊಡ ತುಂಬುವುದಕ್ಕೂ, ಕಾಂಗ್ರೆಸ್ ಅಧಿಕಾರಕ್ಕೆ ಬರುವುದಕ್ಕೂ ಮತ್ತು ಹೊಸ ಸರ್ಕಾರ ಬರುತ್ತಿದ್ದಂತೆ ಪೊಲೀಸರ ತೋರಣಗಳೆಲ್ಲಾದ ಬದಲಾವಣೆಗೂ ಹೇಗೆ ಪರಸ್ಪರ ಸಂಬಂಧಗಳಿವೆಯೋ ಹಾಗೆ ಬೆಂಗಳೂರು ಪಾಪಕೂಪದ ಪಾಳೇಗಾರನಂತಿದ್ದ ಕಡಬಗೆರೆ ರಾಮ ಅಲಿಯಾಸ್ ಪಾಯ್ಸನ್ ರಾಮನ ದುರ್ಗತಿಗೂ ಸಂಬಂಧವಿದೆ.

ಇಲ್ಲಿಗೆ ಎರಡು ತಿಂಗಳ ಹಿಂದಷ್ಟೇ ಮಾಗಡಿ ರಸ್ತೆಯ ತಾವರೆಕೆರೆ ಮತ್ತು ನೆಲಮಂಗಲದ ಮಾದಾವರ ಪೊಲೀಸ್ ಠಾಣೆಗಳ ವ್ಯಾಪ್ತಿಯ ಗೋಡೆಗೋಡೆಗಳ ಮೇಲೆಲ್ಲಾ ಪೊಲೀಸ್ ಇಲಾಖೆಯೇ ಅಂಟಿಸಿದ್ದ ವಿಲಕ್ಷಣ ವಾಲ್‌ಪೋಸ್ಟರ್ ಒಂದು ಕಂಗೊಳಿಸುತ್ತಿತ್ತು. ದಪ್ಪದಪ್ಪ ಅಕ್ಷರಗಳಲ್ಲಿ 'ವಾಂಟೆಡ್' ಎಂದು ಮುದ್ರಿಸಿದ್ದ ಆ ಭಿತ್ತಿಪತ್ರದಲ್ಲಿ ರಾರಾಜಿಸುತ್ತಿದ್ದದ್ದು ಕಡಬಗೆರೆ ಪಂಚಾಯ್ತಿ ಅಧ್ಯಕ್ಷ ಪಾಯ್ಸನ್ ರಾಮ!


ಅದು ನೆಲಮಂಗಲ ವ್ಯಾಪ್ತಿಯ ಡಿವೈಎಸ್‌ಪಿ ಮಲ್ಲೇಶ್‌ರ ಮೂಲಕ ಮಾದಾವರ ಎಸ್.ಐ. ಐ.ಬಿ. ರೆಡ್ಡಿ ಮತ್ತು ನೆಲಮಂಗಲದ ಇನ್ಸ್‌ಪೆಕ್ಟರ್ ಡಾ. ಪ್ರಕಾಶ್ ಪ್ರಕಟಿಸಿದ್ದ ಪಬ್ಲಿಕ್ ನೋಟಿಸು. ಹಲವಾರು ಪ್ರಕರಣಗಳಿಗೆ ಸಂಬಂಧ ಪಟ್ಟಂತೆ ಪೊಲೀಸರಿಗೆ ಬೇಕಾದ ಅಪರಾಧಿ ಪಾಯ್ಸನ್ ರಾಮ ಉರ್ಫ್ ಕಡಬಗೆರೆ ರಾಮನ ಬಗ್ಗೆ ಯಾರೇ ಮಾಹಿತಿ ಕೊಟ್ಟರೂ ಅವರಿಗೆ ಪೊಲೀಸ್ ಇಲಾಖೆ ಕಡೆಯಿಂದಲೇ ಸೂಕ್ತ ಬಹುಮಾನವೆಂದೂ, ಮಾಹಿತಿ ಕೊಟ್ಟವರ ಹೆಸರನ್ನು ಗೌಪ್ಯವಾಗಿಡಲಾಗುತ್ತದೆ ಎಂದೂ ಮಾದಾವರ ಪೊಲೀಸರು ಪ್ರಕಟಿಸಿದ್ದರು. ಹೀಗೆ ವಾಲ್‌ಪೋಸ್ಟರ್ ಹಾಕಿದ್ದಷ್ಟೇ ಅಲ್ಲ, ತಾವರೆಕೆರೆ, ಮಾಗಡಿರಸ್ತೆ ಕಡಬಗೆರೆ, ತುಮಕೂರು ರಸ್ತೆಯ ದಾಸನಪುರ, ಮಾಚಕುಮಾರನಹಳ್ಳಿ, ಮಾದಾವರ, ನೆಲಮಂಗಲ ಇತ್ಯಾದಿಗಳಲ್ಲಿ ಪೊಲೀಸರೇ ಮೈಕ್ ಕಟ್ಟಿಕೊಂಡು ಕಂಡಲ್ಲಿ ಗುಂಡು ಹಾಕುತ್ತೇವೆಂದು ಬಹಿರಂಗವಾಗಿ ರಾಮನ ಗ್ಯಾಂಗಿಗೆ ಎಚ್ಚರಿಕೆ ನೀಡುತ್ತಾರೆ.

ಮೈಸೂರಿನಲ್ಲಿ ಸರೆಂಡರ್

ಇದೆಲ್ಲದರ ಪರಿಣಾಮವೋ ಎಂಬಂತೆ ಕಳೆದ ಮೂರು ತಿಂಗಳಿಂದ ಏಕಾಏಕಿ ಭೂಗತನಾದ ಪಾಯ್ಸನ್ ರಾಮ ನಾಟಕೀಯ ಸಂದರ್ಭವೊಂದರಲ್ಲಿ ಮೈಸೂರು ಪೊಲೀಸರಿಂದ ಬಂಧಿತನಾಗುತ್ತಾನೆ. ಭೂಗತ ಚಾಳಿ ಬಲ್ಲ ಯಾರಿಗೂ ಅದೊಂದು ಸರೆಂಡರ್ ನಾಟಕವೆಂಬ ಬಗ್ಗೆ ಅನುಮಾನಗಳಿಲ್ಲ. ಹಾಗೇ ಮೈಸೂರು ಪೊಲೀಸರಿಂದ ಕ್ಷುಲ್ಲಕ ಕೇಸೊಂದರಲ್ಲಿ ಬಂಧಿತನಾಗಿ ಮೈಸೂರು ಜೈಲಿಗೆ ಹೋಗಬೇಕಿದ್ದ ರಾಮ ಅದೇ ಜೈಲಲ್ಲಿದ್ದ ತನ್ನ ಒಂದಾನೊಂದು ಕಾಲದ ದುಷ್ಮನ್ ಕೋತಿರಾಮನ ಕಾರಣಕ್ಕೆ ಮಂಡ್ಯ ಜೈಲಿಗೆ ಹಾಕಿಸಿಕೊಂಡರೆ ಅಲ್ಲಿಂದಲೇ ಬಾಡಿ ವಾರಂಟ್ ಮೇಲೆ ಎಳೆತಂದ ಮಾದಾವರ ಪೊಲೀಸರು ಮಾಗಡಿ ರಸ್ತೆಯುದ್ದಕ್ಕೂ ರಾಮನನ್ನು ಮೆರವಣಿಗೆ ಮಾಡಿ ಮಾನಭಂಗ ಮಾಡಿಬಿಟ್ಟರು.

ಪಾಯ್ಸನ್ ರಾಮ ಉರ್ಫ್ ಕಡಬಗೆರೆ ರಾಮ ಅಲಿಯಾಸ್ ರಾಮಣ್ಣ ಅರ್ಥಾತ್ ಎಸ್. ರಮೇಶ್ ಸದ್ಯ ಕಡಬಗೆರೆ ಪಂಚಾಯ್ತಿಯ ಅಧ್ಯಕ್ಷ. ಈತನ ಅಣ್ಣ ಶ್ರೀನಿವಾಸ್ ದಾಸನಪುರ ಜಿಲ್ಲಾ ಪಂಚಾಯ್ತಿಗೆ ಬಿಜೆಪಿ ಅಭ್ಯರ್ಥಿಯಾಗಿದ್ದ. ಯಲಹಂಕ ಶಾಸಕ ವಿಶ್ವನಾಥ್ ಬಿಜೆಪಿ ಆಳ್ವಿಕೆಯಲ್ಲಿ ಮೆರೆದಷ್ಟೂ ದಿನ ಮಾಗಡಿ ರಸ್ತೆ, ಮಾದಾವರ, ದಾಸನಪುರ ಸುತ್ತಮುತ್ತಲ ಪ್ರದೇಶಕ್ಕೆ ಅನಧಿಕೃತ ಶಾಸಕನಂತೆಯೇ ಮೆರೆದ ಕಡಬಗೆರೆ ರಾಮ ಮೊದಲು ತನ್ನ ಕಡುವೈರಿ ಮಚ್ಚನನ್ನು ಮುಗಿಸಿ ತದನಂತರ ಮದ್ಯಪಾನ ವಿರೋಧಿ ಹೋರಾಟಗಾರ ಎ.ಟಿ. ಬಾಬುರನ್ನು ಕೊಲ್ಲಿಸಿಯೂ ಕಡಬಗೆರೆ ಪಂಚಾಯ್ತಿಗೆ ಅಧ್ಯಕ್ಷನಾದ. ಅದೇ ವಿಜೃಂಭಣೆಯಲ್ಲಿ ಅಣ್ಣ ಶ್ರೀನಿವಾಸ್ ಎಪಿಎಂಸಿ ಅಂದರೆ ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿಗೂ ಅಧ್ಯಕ್ಷನಾದ.

ಕಡಬಗೆರೆ ಸುತ್ತಮುತ್ತಲ ಬಿಜೆಪಿಯ ಬಹುತೇಕ ಪಂಚಾಯ್ತಿ ಸದಸ್ಯರು ಮತ್ತು ಜಿಲ್ಲಾ ಪಂಚಾಯ್ತಿ ಸದಸ್ಯರೆಲ್ಲ ರಾಮಣ್ಣನ ಕೃಪೆಯಿಂದಲೇ ಅವಿರೋಧವಾಗಿ ಆಯ್ಕೆಯಾಗುವ ಮಟ್ಟಿಗೆ ರಾಮನ ಪ್ರಾಬಲ್ಯ ವಿಸ್ತರಿಸಿ ಬಿಜೆಪಿ ಅಧಿಕಾರದಲ್ಲಿದ್ದಷ್ಟೂ ಕಾಲ ಇನ್ನಿಲ್ಲದಂತೆ ಮೆರೆದ ರಾಮನಿಗೆ ಶನಿಕಾಟ ಶುರುವಾಗಿದ್ದೇ ಕಾಂಗ್ರೆಸ್ ಅಧಿಕಾರಕ್ಕೆ ಬಂದನಂತರ. ಅಲ್ಲಿಯತನಕ ಕಡಬಗೆರೆ ಮಾಗಡಿ ರಸ್ತೆ ಮಾಚೋಹಳ್ಳಿ, ಮಾದಾವರ ಸುತ್ತಮುತ್ತಲ ಏರಿಯಾಗಳಲ್ಲಿ ರಾಮನ ಅಣತಿ ಮೀರಿ ಕಡ್ಡಿ ಕೂಡ ಕದಲುವಂತಿರಲಿಲ್ಲ.


ಪಾಯ್ಸನ್ ರಾಮ

ನೂರು ಕೋಟಿಯ ಲೇಔಟ್

ಅಂಥಾದ್ದೊಂದು ರಿಯಲ್ ಎಸ್ಟೇಟ್ ಲಫಡಾಕ್ಕೆ ರಾಮ ಎಂಟ್ರಿ ಕೊಟ್ಟಿದ್ದು ನಿನ್ನೆಮೊನ್ನೆಯೇನಲ್ಲ. ಹೆಚ್ಚೂಕಮ್ಮಿ ನೂರು ಕೋಟಿಯ ಖಾಸಗಿ ಲೇಔಟ್ ವ್ಯವಹಾರದ ಒಳಕ್ಕೆ ತನಗರಿವಿಲ್ಲದೆಯೇ ರಾಮನನ್ನು ಕಾಲಿಡುವಂತೆ ಮಾಡಿದ್ದು ಕಡಬಗೆರೆ ಸರ್ವೇ ನಂಬರ್ 54 ಮತ್ತು 54/1 ರ 35 ಎಕರೆ ಭೂಮಿ. ಕಡಬಗೆರೆಯ ಹಳೇ ಕಾಲದ ಪಟೇಲರುಗಳಾದ ಸಿದ್ದಗಂಗಪ್ಪ, ಗುರುಸಿದ್ದಪ್ಪ, ಗಂಗಾಧರಪ್ಪ ಲಿಂಗದೇವರು, ಹೊನ್ನಗಂಗಪ್ಪ, ಪರಮಶಿವಯ್ಯ ಮುಂತಾದವರ ನೂರಕ್ಕೂ ಅಧಿಕ ಎಕರೆಗಳ ಸೊತ್ತು ಕಡಬಗೆರೆಯಲ್ಲಿದೆ. ಜಾತಿಯಲ್ಲಿ ಲಿಂಗಾಯತರಾದರೂ ಆಸ್ತಿಯಲ್ಲಿ ಕಡಬಗೆರೆಯ ಗೌಡರಿಗಿಂತ ಒಂದು ಕೈ ಮೇಲಂತಿದ್ದ ಪಟೇಲ್ ಸಿದ್ದಗಂಗಪ್ಪ ಮತ್ತು ಅಣ್ಣತಮ್ಮಂದಿರಿಗೆ ಸೇರಿದ ಮೂವತ್ತೆಕರೆಯನ್ನು ಆ ಕಾಲಕ್ಕೆ ವಿಜಯನಗರದ ಡೆವಲಪರ್ ಪಾಪಣ್ಣ ಖರೀದಿಸಿದ್ದ.

ಇವತ್ತು ರಾಮನನ್ನು ಜೈಲು ಪಾಲಾಗುವಂತೆ ಮಾಡಿದ್ದೇ ಈ ಪಾಪಣ್ಣ! ಐವತ್ತೆಕರೆಯಲ್ಲಿ ಲೇಔಟ್ ಮಾಡಿ ಸೈಟು ವಿಂಗಡಿಸಿದ ಪಾಪಣ್ಣ ತನ್ನ ಲೆವೆಲ್ಲಿಗೆ ತಕ್ಕಂತೆ ಹತ್ತಾರು ಮಂದಿ ಪಾಲುದಾರರನ್ನು ಸೇರಿಸಿಕೊಂಡ. ಲೇಔಟಿಗೆ ಹೊಂದಿಕೊಂಡಂತೆಯೇ ಸಿದ್ಧಗಂಗಪ್ಪನ 5 ಎಕರೆ ಪ್ರತ್ಯೇಕ ಭೂಮಿಯಿತ್ತಲ್ಲ; ಅದನ್ನೇ ತನ್ನ ಲೇಔಟಿನ ಸಿಎ ನಿವೇಶನ ಎಂದು ಪಾಪಣ್ಣ ನಕಾಶೆ ರೂಪಿಸಿ ಅದಕ್ಕೆ ಬಿಡಿಎ ವತಿಯಿಂದ ಮಂಜೂರಾತಿಯನ್ನು ಪಡೆದುಕೊಂಡಿದ್ದ. ಬಹುಶಃ ಸಿದ್ಧಲಿಂಗಪ್ಪ ಈ 5 ಎಕರೆಯನ್ನೂ ಮಾರುವ ಭರವಸೆ ಕೊಟ್ಟು ಕೊನೇಗಳಿಗೆಯಲ್ಲಿ ಉಲ್ಟಾ ಹೊಡೆದಿರಬೇಕು.

ಮಂಜೂರಾದ ನಕ್ಷೆಯಲ್ಲಿ ಸಿಎ ಸೊತ್ತೆಂದು ಮೀಸಲಿಟ್ಟಿದ್ದ ಐದೆಕರೆಗೆ ಸಿದ್ಧಗಂಗಪ್ಪನೇ ಮಾಲೀಕನಾದರೂ ಪಂಚಾಯ್ತಿ ಅಧ್ಯಕ್ಷನಾದ್ದರಿಂದ ರಾಮ ಅದು ಗ್ರಾಮಸ್ಥರಿಗೆ ಸೇರಿದ್ದೆಂದು ಭಾವಿಸಿಕೊಂಡ. ಅದೇ ಹೊತ್ತಿಗೆ ಯಲಹಂಕ ಶಾಸಕ ವಿಶ್ವನಾಥ್ ಬೇರೆ ಅರ್ಕಾವತಿ ನದಿ ಉಳಿಸುವಂತೆ ಬೀದಿ ಚಳವಳಿ ಶುರುವಿಟ್ಟಿದ್ದರು. ಸಿಎ ನಿವೇಶನವೆಂದು ಮೀಸಲಿಟ್ಟಿದ್ದ ಐದೆಕರೆಗೆ ಹೇಳಿಕೇಳಿ ಅರ್ಕಾವತಿಯ ರಾಜಕಾಲುವೆ. ಕಡಬಗೆರೆ ಕೆರೆ ಮತ್ತು ಪಕ್ಕದ ಗೆದ್ದೇನಹಳ್ಳಿ ಕೆರೆಗಳೆರಡಕ್ಕೂ ಅರ್ಕಾವತಿ ಪಾತ್ರದ ಸೇತುವೆಯಂತಿದ್ದ ರಾಜಕಾಲುವೆಯನ್ನೇ ಸಿದ್ಧಗಂಗಪ್ಪ ಸೈಟು ಮಾಡಲು ನಿಂತಾಗ ಅದರ ವಿರುದ್ಧ ಜಿಲ್ಲಾಧಿಕಾರಿಗಳಿಗೆ ದೂರು ಕೊಟ್ಟು ಅಡ್ಡಗಾಲಿಟ್ಟವನು ಪಾಯ್ಸನ್ ರಾಮ.


ಮೇ 5ರ ಅಟ್ಯಾಕ್!

ಆದರೆ ಶತಗತಾಯ ಐದೆಕರೆಯನ್ನು ಮಾರಲೇ ಬೇಕೆಂದಿದ್ದ ಸಿದ್ಧಗಂಗಪ್ಪ ರಾಮನನ್ನೇ ಧಿಕ್ಕರಿಸಿ ಶಾಸಕ ವಿಶ್ವನಾಥ್ ಜೊತೆ ಡೀಲು ಕುದುರಿಸಿಕೊಂಡ. ಅದೇ ಹೊತ್ತಿಗೆ ಅಕ್ಕಪಕ್ಕದ ಪಂಚಾಯ್ತಿಗಳಾದ ಕಿತ್ತನಹಳ್ಳಿ ಮತ್ತು ಕಡಬಗೆರೆಯ ಪಂಚಾಯ್ತಿ ಅಧ್ಯಕ್ಷರ ಚುನಾವಣೆ ಬಂತು. ಕಿತ್ತನಹಳ್ಳಿಗೆ ಪರಿಶಿಷ್ಟ ಬುಡಕಟ್ಟಿನ ಅಭ್ಯರ್ಥಿ ಅಧ್ಯಕ್ಷನಾಗಬೇಕಿತ್ತಾದರೂ ಒಂದಲ್ಲ ಇಬ್ಬರು ಎಸ್.ಟಿ. ಅಭ್ಯರ್ಥಿಗಳಿದ್ದಾಗಲೂ ಅವರ್‍ಯಾರೂ ನಾಮಪತ್ರವನ್ನೇ ಸಲ್ಲಿಸದಂತೆ ಮಾಡಿದ ಶಾಸಕ ವಿಶ್ವನಾಥ್ ತನ್ನ ಛೇಲಾ ಬಿಸಿಎಂ-ಬಿ ಪ್ರವರ್ಗದ ರವಿಕುಮಾರ್ ಎಂಬಾತನನ್ನು ಅಧ್ಯಕ್ಷಗಾದಿಗೆ ತಂದ.

ಇದೇ ರೀತಿ ಕಡಬಗೆರೆಗೆ ಪರಿಶಿಷ್ಟ ಜಾತಿಯ ಅಧ್ಯಕ್ಷನಾಗಬೇಕಿತ್ತು.

ಕಿತ್ತನಹಳ್ಳಿಯಲ್ಲಾದಂತೆ ಕಡಬಗೆರೆಯಲ್ಲಿ ಬೇರೆ ಯಾರೂ ನಾಮಪತ್ರ ಸಲ್ಲಿಸದಂತೆ ಮಾಡಿ ರಾಮ ತನ್ನ ಪತ್ನಿಯನ್ನೇ ಅಧ್ಯಕ್ಷೆಯಾಗಿಸಬಹುದೆಂಬ ಭೀತಿ ಯಲಹಂಕ ಶಾಸಕ ವಿಶ್ವನಾಥ್‌ಗಿತ್ತು. ಒಂದೆಡೆ ಸಿದ್ದಗಂಗಪ್ಪನ ಐದೆಕರೆಯ ರಾಜಾಕಾಲುವೆ ಕಬಳಿಕೆಯೂ ನಿರಾತಂಕವಾಗಬೇಕು, ಮತ್ತೊಂದೆಡೆ ಕಡಬಗೆರೆ ಪಂಚಾಯ್ತಿಯನ್ನೇ ರಾಮನ ಹಿಡಿತದಿಂದ ಬಿಡಿಸಬೇಕೆಂದು ಒಂದೇ ಕಲ್ಲಿಗೆ ಎರಡು ಕಾಯಿ ಉದುರಿಸುವ ಕಾರ್ಯಾಚರಣೆಗೆ ವಿಶ್ವನಾಥ್ ಕೈಯಿಟ್ಟರು.

ಇದರ ಪ್ರತಿಫಲವೇ ಮಾದನಾಯಕನಹಳ್ಳಿ ಪೊಲೀಸರು ಧೀರೋದ್ದಾತ್ತ ಕಾರ್ಯಾಚರಣೆ. ಆ ಪ್ರಕಾರವೇ ಮೊನ್ನೆ ಮೇ 21 ರಂದು ಮಾದನಾಯಕನಹಳ್ಳಿ ಪೊಲೀಸ್ ಠಾಣೆಯಲ್ಲಿ ರಾಮನ ಗ್ಯಾಂಗ್ ವಿರುದ್ಧ ದೂರು ದಾಖಲಾಗುತ್ತದೆ. ತಾನು ತನಗೆ ಸೇರಿದ ನಿವೇಶನದಲ್ಲಿ ಕಾಂಪೌಂಡ್ ಹಾಕಲು ಹೋದಾಗ ಪಾಯ್ಸನ್ ರಾಮ ಹತ್ತಾರು ರೌಡಿಗಳೊಂದಿಗೆ ತನ್ನ ಹತ್ಯೆಗೆ ಯತ್ನಿಸಿದನೆಂದೂ ತನ್ನ ಕಾರಿಗೆ ರಾಮನ ಗ್ಯಾಂಗ್ ಬೆಂಕಿ ಹಚ್ಚಿತೆಂದೂ ಮಾರಕಾಸ್ತ್ರಗಳಿಂದ ತನ್ನ ಮೇಲೆ ಹಲ್ಲೆಯಾಯಿತೆಂದೂ ತಾನು ಸತ್ತೆನೆಂದು ತಿಳಿದು ಬೆಂಕಿಯಿಟ್ಟವರು ತನ್ನನ್ನು ಜೀವ ಸಮೇತ ಬಿಟ್ಟುಹೋದ್ದರಿಂದ ಬದುಕುಳಿದೆನೆಂದೂ ಸಿದ್ದಗಂಗಪ್ಪನ ಭಾವೀ ಅಳಿಯ ರುದ್ರಕುಮಾರ್ ಮಾದನಾಯಕನಹಳ್ಳಿ ಪೊಲೀಸರಿಗೆ ದೂರು ಕೊಡುತ್ತಾನೆ.


ವಿಶ್ವನಾಥ್

ಕೊಲ್ಲಲು ಬಂದವರು ಕಾರಿಗೆ ಬೆಂಕಿಯಿಟ್ಟು ಪರಾರಿಯಾದರೆಂಬ ಮಾತೇ ದೂರಿನ ಅಸಲಿಯತ್ತನ್ನು ಹೇಳುತ್ತಿತ್ತು. ಮಾರಕವಾಗಿ ಗಾಯಗೊಂಡು ಆಸ್ಪತ್ರೆ ಸೇರಿದನೆನ್ನಲಾದ ರುದ್ರಕುಮಾರ್ ಮೈಮೇಲೆ ಸಣ್ಣಗೀರೂ ಆಗಿರಲಿಲ್ಲ. ಇದೇ ದೂರಿನ ಆಧಾರದ ಮೇಲೆ ರಾಮನ ಬೇಟೆಗಿಳಿದ ಪೊಲೀಸರು ಸರಿಸುಮಾರು ಮುನ್ನೂರು ಮಂದಿ ಪೊಲೀಸರ ಬೆಂಗಾವಲಿನಲ್ಲಿ ಕಡಬಗೆರೆ ಪಂಚಾಯ್ತಿ ಚುನಾವಣೆಯನ್ನೂ ನಡೆಸುತ್ತಾರೆ. ಆದರೆ ತೆರೆಮರೆಯಲ್ಲಿದ್ದುಕೊಂಡೇ ರಾಮ ತನ್ನ ಬೆಂಬಲಿಗ ಹನುಮಯ್ಯನನ್ನು ಅಧ್ಯಕ್ಷನನ್ನಾಗಿ ಮಾಡಿ ತನ್ನ ಪತ್ನಿ ಪವಿತ್ರಾ ಉಪಾಧ್ಯಕ್ಷೆಯಾಗುವಂತೆ ಮಾಡುತ್ತಾನೆ. ಇಲ್ಲಿ ವಿಶ್ವನಾಥ್ ಹಾಕಿದ್ದ ಪರಿಶಿಷ್ಟ ಅಭ್ಯರ್ಥಿ ಕೆಂಪಾಂಜನಿಗೆ ಬಿದ್ದದ್ದು ಬರೀ ಒಂದು ಓಟು ಮಾತ್ರ!

ಇಷ್ಟಾಗ್ಯೂ ಬೆನ್ನಿಗೆ ಬಿದ್ದ ಪೊಲೀಸರಿಂದ ರಾಮ ಬಚಾವಾಗುವುದು ಸಾಧ್ಯವಾಗಲೇ ಇಲ್ಲ. ಮಂಡ್ಯ ಜೈಲಲ್ಲಿದ್ದರೂ ಬಿಡದೆ ಎಳೆತಂದು ಮೆರವಣಿಗೆ ಮಾಡಿ ಜೈಲಿಗಟ್ಟಿದ ಡಿವೈಎಸ್‌ಪಿ ಮಲ್ಲೇಶ್ ಮತ್ತು ಎಸ್‌ಐ ರೆಡ್ಡಿಯ ಬೆನ್ನಿಗೆ ರಾಮನ ಗಾಡ್‌ಫಾದರ್ ಎಮ್ಮೆಲ್ಲೇ ವಿಶ್ವನಾಥ್‌ರೇ ನಿಂತಿದ್ದಾರೆಂದರೆ ಅದು ಪಾಯ್ಸನ್ ರಾಮನ ಗ್ರಹಚಾರ ಕೆಟ್ಟಿದೆಯೆಂದೇ ಅರ್ಥ!

ಅಷ್ಟಕ್ಕೂ ಬೆಳೆಸಿ, ಪೋಷಿಸಿದ ಶಾಸಕ ವಿಶ್ವನಾಥ್‌ರೇ ತಮ್ಮ ಬಲಗೈ ಬಂಟನನ್ನು ಮುಗಿಸಲು ಹೊರಟಿದ್ದಾರೆಂದರೆ ಅದು ರಿಯಲ್ ಎಸ್ಟೇಟ್ ಪರಿಣಾಮವೋ ಅಥವಾ ಕಾಂಗ್ರೆಸ್ಸಿಗೆಲ್ಲಿ ಹಾರಬಹುದೆಂಬ ಭೀತಿಯೋ?

ಉಪ್ಪು ತಿಂದ ಪಾಯ್ಸನ್ ರಾಮ ನೀರು ಕುಡಿಯಲೇಬೇಕಲ್ಲವೆ?

● ರಾ. ಸೋಮನಾಥ್

ಬದ್ಧವೈರಿಗಳಂತಿದ್ದ ಇ.ಕೆ. ಮತ್ತು ವಿಶ್ವನಾಥ್ ಸದ್ದಿಲ್ಲದೆ ರಾಜಿಯಾಗಿದ್ದೇಕೆ?


ನಿನ್ನೆ ಮೊನ್ನೆಯ ತನಕ ಹಾವು-ಮುಂಗುಸಿಯಂತೆ ಒಬ್ಬರ ಮೇಲೊಬ್ಬರು ಕತ್ತಿ ಮಸೆಯುತ್ತಿದ್ದ ಇ.ಕೆ. ಉರ್ಫ್ ಮುಂಗಾರು ಮಳೆ ಕೃಷ್ಣಪ್ಪ ಮತ್ತು ಯಲಹಂಕ ಬಿಜೆಪಿ ಶಾಸಕ ವಿಶ್ವನಾಥ್ ಇಬ್ಬರೂ ಸದ್ಯ ಕೈಜೋಡಿಸಿದ್ದರ ಫಲವೇ ಪಾಯ್ಸನ್ ರಾಮನ ದುರ್ಗತಿಗೆ ಕಾರಣವಾಯ್ತೆ?


ಏಕೆಂದರೆ ಗೆಲ್ಲುವತನಕ ಕಡಬಗೆರೆ ರಾಮ ಮತ್ತು ಆತನ ಅಣ್ಣ ಶ್ರೀನಿವಾಸ್‌ರನ್ನು ಬೆಳೆಸಿ, ಪೋಷಿಸುತ್ತಲೇ ಬಂದ ವಿಶ್ವನಾಥ್ ಏಕಾಏಕಿ ಉಲ್ಟಾ ಹೊಡೆಯಲು ಬೇರೊಂದು ಕಾರಣವಿಲ್ಲ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ವಿಶ್ವನಾಥ್ ಗಳಿಸಿದ 18 ಸಾವಿರ ಮತಗಳ ಲೀಡಿಗೆ ಕಾರಣರಾದವರೇ ಕಡಬಗೆರೆ ಬ್ರದರ್ಸ್. ದಾಸನಪುರ ಹೋಬಳಿಯೊಂದರಲ್ಲೇ 18 ಸಾವಿರದಷ್ಟು ಮತ ಬೀಳದಿದ್ದರೆ ಜೆಡಿಎಸ್‌ನ ಚಂದ್ರಪ್ಪ ಸುಲೀಸಾಗಿ ಗೆದ್ದು ಬಿಡುತ್ತಿದ್ದ. ಮುಂಬರುವ ಲೋಕಸಭೆ ಎಲೆಕ್ಷನ್ ಹೊತ್ತಿಗೇನಾದರೂ ಜೆಡಿಎಸ್ ಮತ್ತು ಬಿಜೆಪಿ ಮಧ್ಯೆ ಹೊಂದಾಣಿಕೆ ನಡೆಯಿತೆಂದರೆ ತನ್ನ ಭವಿಷ್ಯದ ದೃಷ್ಟಿಯಿಂದ ಚಂದ್ರಪ್ಪನ ಪಾಲಿಗೆ ಕಾಂಗ್ರೆಸ್ ಬಿಟ್ಟರೆ ಬೇರೆ ಗತಿಯೇ ಇಲ್ಲ.

ಚಂದ್ರಪ್ಪನ ಜೊತೆ ಕಡಬಗೆರೆ ಬ್ರದರ್ಸ್ ಕೂಡ ಕಾಂಗ್ರೆಸ್ಸಿಗೆ ಹೋಗುವ ಸಾಧ್ಯತೆಗಳೇ ಹೆಚ್ಚಿವೆ. ಆಗ ಜೆಡಿಎಸ್ ಪಾಲಿಗೆ ಉಳಿದವನೊಬ್ಬನೇ ಇ.ಕೆ. ಇ.ಕೆ. ವಿರುದ್ಧ ಕಡಬಗೆರೆ ಗ್ಯಾಂಗನ್ನು ಛೂಬಿಟ್ಟು ಆತನ ಭೂಕಬಳಿಕೆ ವಿರುದ್ಧ ಕೇಸು ಹಾಕಿಸಿದ ವಿಶ್ವನಾಥ್‌ಗೆ ತನ್ನ ಮೇಲೂ ಅನೇಕಾನೇಕ ಭೂಕಬಳಿಕೆ ಕೇಸುಗಳು ಬಿದ್ದಿರುವುದು ನಡುಕ ಹುಟ್ಟಿಸಿದೆ. ಕೋರ್ಟ್ ಕೇಸ್ ಇತ್ಯರ್ಥವಾಗದೆ ಚುನಾವಣೆಗೆ ನಿಲ್ಲುವಂತಿಲ್ಲ ಎಂದಾಗಿಬಿಟ್ಟರೆ ಇಬ್ಬರೂ ತಂತಮ್ಮ ಪತ್ನಿಯರನ್ನು ಕಣಕ್ಕಿಳಿಸಬೇಕಾಗುತ್ತದೆ. ಇಂಥಾ ದುರ್ಗತಿಗೆ ಬಿದ್ದ ಬದ್ಧ ವೈರಿಗಳಾಗಿದ್ದ ಇ.ಕೆ. ಮತ್ತು ವಿಶ್ವನಾಥ್ ಸದ್ದಿಲ್ಲದೆ ರಾಜಿ ಮಾಡಿಕೊಂಡಿದ್ದು ಕಡಬಗೆರೆ ಸಹೋದರರ ಪಾಲಿಗೆ ಮುಳುವಾಗಿದೆ.

ಕಡಬಗೆರೆ ಗ್ಯಾಂಗ್ ವಿರುದ್ಧ ಇವರಿಬ್ಬರಿಗಿಂತಲೂ ಜಿದ್ದಾಜಿದ್ದಿಗೆ ಬಿದ್ದ ಮತ್ತೊಬ್ಬ ಪಾತಕಿ ನೆಲಮಂಗಲದ ಗೋಪಾಲಪುರದ ಕಾಂಗ್ರೆಸ್ ಜಿ.ಪಂ. ಸದಸ್ಯ ವಡೇರಹಳ್ಳಿ ಜಯರಾಮ. ಚೆತ್ತನಗೆರೆ ಸೀನ ಬದುಕಿದ್ದಷ್ಟು ಕಾಲ ಆತನನ್ನು ಛೂಬಿಟ್ಟು ರಕ್ತ ಹರಿಸುತ್ತಲೇ ಬಂದ ವಡೇರಹಳ್ಳಿ ಜಯರಾಮನಿಗೆ ಮೊಯ್ಲಿ ಮತ್ತು ಕಾಂಗ್ರೆಸ್ ನಾಯಕ ಹೆಚ್.ಎಂ. ರೇವಣ್ಣನ ಜೊತೆ ಆತ್ಮೀಯತೆಯಿದೆ. ಹೆಸರಿಗಾತ ಕಾಂಗ್ರೆಸ್ಸಾದರೂ ಜೆಡಿಎಸ್‌ನ ಇ.ಕೆ.ಗೆ ಗಳಸ್ಯ ಕಂಠಸ್ಯ ಕೂಡ. ಬಿಜೆಪಿ ಅಧಿಕಾರದಲ್ಲಿದ್ದಷ್ಟೂ ಹೊತ್ತು ಇ.ಕೆ.ಯ ಭೂಕಬಳಿಕೆ ವಿರುದ್ಧ ಕಾದಾಡಿದ ಕಡಬಗೆರೆ ಪಾಳೇಗಾರರ ಪಾಲಿಗೆ ಶಾಸಕ ವಿಶ್ವನಾಥ್, ಇ.ಕೆ. ವಡೇರಹಳ್ಳಿ ಜಯರಾಮ ತ್ರಿಮೂರ್ತಿಗಳೇ ಕಂಟಕರಾಗಿಬಿಟ್ಟರು.

ಎಷ್ಟೆಂದರೂ ಸದ್ಯ ನೆಲಮಂಗಲಕ್ಕೆ ಬಂದಿರುವ ಪೊಲೀಸ್ ಅಧಿಕಾರಿಗಳೆಲ್ಲ ವಡೇರಹಳ್ಳಿ ಜಯರಾಮನ ಮೂಲಕ ಬಂದವರೆ. ಟೈಮು ಕೆಟ್ಟರೆ ಏನಾಗುತ್ತದೆ ಎಂಬುದಕ್ಕೆ ಪಾಯ್ಸನ್ ರಾಮನ ದುಸ್ಥಿತಿಗಿಂತ ಬೇಕೆ?


ಇ. ಕೃಷ್ಣಪ್ಪ


ವಡ್ಡೇರಹಳ್ಳಿ ಜಯರಾಮ


ಚೆತ್ತನಗೆರೆ ಸೀನ

ಪ್ರವಾದಿಯ ಕಾಲದಲ್ಲಿ ಮಹಿಳೆಯರು...

ಮುಸ್ಲಿಂ ಮಹಿಳೆಯರಿಗೆ ಮಸೀದಿ ಪ್ರವೇಶ ಎಂಬ ವಿಷಯದ ಸುತ್ತ ವಿವಾದದ ಸುಳಿಯೊಂದು ಎದ್ದಿರುವ ಸಂದರ್ಭದಲ್ಲಿ ಬಿ.ಎಂ.ಬಷೀರ್ ಅವರ 'ನಮ್ಮ ಮುಂದಿರುವ ಸವಾಲು' ಬರಹಷ್ಟು ವಿಚಾರಗಳನ್ನು ಸ್ಪಷ್ಟಪಡಿಸುತ್ತದೆ. ಆದರೂ ಕೊನೆಯಲ್ಲಿ ಕೆಲವು ಪ್ರಶ್ನೆಗಳು, ಗೊಂದಲಗಳು ಇನ್ನೂ ಹಾಗೇ ಉಳಿಯುತ್ತವೆ.

ಕುರ್‌ಆನ್ ಪ್ರಕಾರ ಸ್ತ್ರೀ, ಪುರುಷರಿಬ್ಬರನ್ನೂ ಒಂದೇ ಚೇತನದಿಂದ, ಒಂದೇ ತತ್ವದಿಂದ ನಿರ್ಮಿಸಲಾಗಿದೆ; ಅವರು ಪರಸ್ಪರ ಪೂರಕವಾಗಿದ್ದಾರೆ; ಪರಸ್ಪರ ಸಂಗಾತಿಗಳಾಗಿದ್ದಾರೆ; ಸಮಾನ ಹಕ್ಕುಗಳನ್ನು ಹೊಂದಿದ್ದಾರೆ. ಮುಸ್ಲಿಂ ಮಹಿಳೆಗೆ ಮಸೀದಿ ಪ್ರವೇಶ ನಿಷಿದ್ಧ ಎನ್ನುವುದಕ್ಕೆ ಕುರ್‌ಆನ್‌ನಲ್ಲಿ ಯಾವ ಆಧಾರಗಳೂ ಇಲ್ಲ. ಅಲ್ಲಾಹುವಿನ ಮಹಿಳಾ ಸೇವಕರು ಮಸೀದಿ ಪ್ರವೇಶಿಸುವುದನ್ನು ತಡೆಯದಿರಿ ಎಂದೇ ಪ್ರವಾದಿ ಹೇಳಿದ್ದಾರೆ. ಮಹಿಳೆಯರಿಗೆ ಸಮಾನ ಹಕ್ಕುಗಳಿದ್ದಂತಹ ಆ ಕಾಲದಲ್ಲಿ ಅವರು ಬೆಳಗಿನ ಹಾಗೂ ಸಂಜೆಯ ಪ್ರಾರ್ಥನೆಗೆ ಮಸೀದಿಗೆ ಹೋಗುತ್ತಿದ್ದರು.

ಪ್ರವಾದಿಯ ಕಾಲದಲ್ಲಿ ಜಾರಿಗೆ ಬಂದ ಲಿಂಗ ಸಮಾನತೆ ಕೆಲವು ದಶಕಗಳ ಕಾಲ ಚಾಲ್ತಿಯಲ್ಲಿತ್ತು. ಪ್ರವಾದಿ ನಂತರದಲ್ಲಿ ಇದು ಬದಲಾಯಿತು. ಇಸ್ಲಾಂ ಲಿಂಗ ಸಮಾನತೆಗೆ ವಿರುದ್ಧವಾದ ಸಾಮಾಜಿಕ, ಆರ್ಥಿಕ ಸನ್ನಿವೇಶಗಳನ್ನು ಹೊಂದಿದ್ದ ಪಾಳೆಗಾರಿ ದೇಶಗಳಿಗೆ ವಿಸ್ತರಿಸಿದಾಗ ಪರಿಸ್ಥಿತಿ ಬದಲಾಯಿತು. ಅಲ್ಲಿನ ಸ್ಥಳೀಯ ಸಂಸ್ಕೃತಿಗಳ ಪ್ರಭಾವದ ಪರಿಣಾಮವಾಗಿ ಕ್ರಮೇಣ ಒಂದೊಂದೇ ಹಕ್ಕನ್ನು ರದ್ದುಗೊಳಿಸುತ್ತ ಬರಲಾಯಿತು. ಹೀಗೆ ಮಹಿಳೆಯ ಹಕ್ಕುಗಳನ್ನು ಕಸಿದುಕೊಂಡು ಆಕೆಗೆ ಎರಡನೆ ದರ್ಜೆಯ ಸ್ಥಾನ ನೀಡಿರುವುದಕ್ಕೂ ಧರ್ಮಕ್ಕೂ ಸಂಬಂಧವಿಲ್ಲವೆನಿಸುತ್ತದೆ. ಯಾಕೆಂದರೆ ಲೈಂಗಿಕ ಅಸಮಾನತೆ ಮತ್ತು ಶೋಷಣೆ ಎನ್ನುವುದು ಪಿತೃಪ್ರಧಾನ ಸಾಮಾಜಿಕ ವ್ಯವಸ್ಥೆಯ ಕೂಸು. ಅನಾದಿಕಾಲದ ಮಾತೃಪ್ರಧಾನ ವ್ಯವಸ್ಥೆ ಕಾಲಾಂತರದಲ್ಲಿ ಪಿತೃಪ್ರಧಾನ ವ್ಯವಸ್ಥೆಯಾಗಿ ಮಾರ್ಪಟ್ಟ ಬಳಿಕ ಸ್ತ್ರೀಯರ ದಮನಕ್ಕಾಗಿ ನಾನಾರೀತಿಯ ಸಾಮಾಜಿಕ/ಸಾಂಸ್ಕೃತಿಕ ಕಟ್ಟಳೆಗಳನ್ನು ಹೇರಲಾಯಿತೆಂದು ಇತಿಹಾಸದ ಪುಟಗಳಿಂದ ತಿಳಿದುಬರುತ್ತದೆ.



ಪ್ರವಾದಿಯ ಕಾಲದಲ್ಲಿ ಮಹಿಳೆಯರು ಆಡಳಿತದಲ್ಲಷ್ಟೇ ಅಲ್ಲ, ಯುದ್ಧಗಳಲ್ಲಿಯೂ ಭಾಗವಹಿಸುತ್ತಿದ್ದರು. ಅಂದು ಪ್ರತಿಭಾವಂತ ಕವಯಿತ್ರಿಯರಿದ್ದರು, ಸಂಗೀತಗಾರರಿದ್ದರು, ಕಲಾರಾಧಕಿಯರಿದ್ದರು. ಮಹಿಳೆಯೊಬ್ಬಳು ಮಾರುಕಟ್ಟೆಯ ಪ್ರಧಾನ ಇನ್‌ಪೆಕ್ಟರ್ ಆಗಿ ಕಾರ್ಯನಿರ್ವಹಿಸಿರುವ ನಿದರ್ಶನಗಳಿವೆ. ಶಿಕ್ಷಣ ಇಲ್ಲದೆ ಇದು ಸಾಧ್ಯವಿತ್ತೇ?

ಆದರೆ ನಂತರದ ಪುರುಷಪ್ರಧಾನ ಸಮಾಜಗಳು ಮನೆಗೇ ಸೀಮಿತರಾದ ಮಹಿಳೆಯರಿಗೆ ವಿದ್ಯಾಭ್ಯಾಸ ಯಾಕೆಂದೇ ಪ್ರಶ್ನಿಸುತ್ತಿದ್ದವು. ಪ್ರಸಕ್ತವಾಗಿ ಆಧುನಿಕತೆಯ ಗಾಳಿ ಅದನ್ನೆಲ್ಲ ಧೂಳೀಪಟಮಾಡಿದೆ. ಆಧುನಿಕ ಯುಗದಲ್ಲಿ ಮಹಿಳೆ ವಿದ್ಯಾವಂತಳಾಗುವುದು ಅನಿವಾರ್ಯವಾಗಿದೆ. ಇದು ಧಾರ್ಮಿಕ ಕಟ್ಟುಪಾಡುಗಳನ್ನು ಮೀರಿದ ಬೆಳವಣಿಗೆ.



ಹೆಚ್ಚುಕಡಿಮೆ ಎಲ್ಲಾ ಧರ್ಮಗಳೊಳಗೆ ನಡೆಯುತ್ತಿರುವ ವಿದ್ಯಮಾನ. ಮೂಲಭೂತವಾದಿ ವಹಾಬಿ ತತ್ವದ ಉಗಮಸ್ಥಾನವಾದ ಸೌದಿ ಅರೇಬಿಯಾದಲ್ಲೂ ಹುಡುಗಿಯರು ವಿದ್ಯಾಭ್ಯಾಸ ಮಾಡತೊಡಗಿರುವಾಗ ಸುನ್ನಿ, ಶಿಯಾ, ಜಮಾತ್, ಸಲಫಿ ಇತ್ಯಾದಿಗಳು ಯಾವ ಲೆಕ್ಕಕ್ಕೆ? ಆದರೆ ಇಲ್ಲೊಂದು ಮುಖ್ಯ ವಿಷಯವನ್ನು ಗಮನಿಸಬೇಕು. ಜಮಾತ್, ಸಲಫಿಗಳಂತವರು ತಮ್ಮ ಹುಡುಗಿಯರನ್ನು ಸಹಶಿಕ್ಷಣದ ಶಾಲೆಗಳಿಗೆ ಕಳುಹಿಸುವುದಿಲ್ಲ; ಕಳುಹಿಸುತ್ತಿರುವುದು ಕೇವಲ ಹುಡುಗಿಯರಿಗಾಗಿರುವ ಶಿಕ್ಷಣಸಂಸ್ಥೆಗಳಿಗೆ. ದಿಲ್ಲಿಯ ಗ್ಯಾಂಗ್ ರೇಪ್ ಪ್ರಕರಣದ ತರುವಾಯ ಸಹಶಿಕ್ಷಣದ ರದ್ದತಿಗಾಗಿ ಆಗ್ರಹಿಸುತ್ತಿರುವ ಇವರು ಅದರಿಂದ ಅತ್ಯಾಚಾರಗಳು ಕಡಿಮೆಯಾಗುತ್ತವೆ ಎನ್ನುತ್ತಾರೆ. ಇದಕ್ಕೇನು ಹೇಳಬೇಕೋ ಗೊತ್ತಾಗುತ್ತಿಲ್ಲ. ವಾಸ್ತವದಲ್ಲಿ ಸಹಶಿಕ್ಷಣ ಪದ್ಧತಿ ಗಂಡು, ಹೆಣ್ಣುಗಳ ಸಹಜ, ಆರೋಗ್ಯಕರ ಬೆಳವಣಿಗೆಗೆ ಪೂರಕ ಮತ್ತು ಸ್ತ್ರೀ, ಪುರುಷ ಸಮಾನತೆಯ ತತ್ವಗಳಿಗೆ ಅನುಗುಣವಾಗಿದೆ ಎಂಬುದಾಗಿ ಶಿಕ್ಷಣತಜ್ಞರಿಂದಲೇ ಅನುಮೋದಿಸಲ್ಪಟ್ಟಿದೆ. ವಸ್ತ್ರಸಂಹಿತೆಯ ವಿಷಯದಲ್ಲಿಯೂ ಶಿಕ್ಷಣತಜ್ಞರ ಅಭಿಪ್ರಾಯ ಏನೆಂದರೆ ಪ್ರಾಥಮಿಕ ಶಾಲೆಯನ್ನು ಬಿಟ್ಟು ಮುಂದಿನ ಎಲ್ಲಾ ಹಂತಗಳಲ್ಲಿ ಮಕ್ಕಳಿಗೆ ವಸ್ತ್ರಸಂಹಿತೆ ವಿಧಿಸುವುದು ತರವಲ್ಲ. ಪರಸ್ಪರ ಒಪ್ಪಿಗೆಯಿಂದಲೆ ನಡೆಯುವಂತಹ ಲಿವ್ ಇನ್ ರಿಲೇಷನ್‌ಶಿಪ್ ಎಂಬ ವಿನೂತನ ಸಂಬಂಧವನ್ನು ಈಗಲೇ ಸಾರಾಸಗಟಾಗಿ ತಿರಸ್ಕರಿಸಿ ಅಂತಹ ಸಂಬಂಧಗಳು ಅಕ್ರಮ ಮತ್ತು ದಂಡನಾರ್ಹವೆಂದು ಸಾರಲು ಮುಂದಾಗುವುದು ಎಷ್ಟರಮಟ್ಟಿಗೆ ಸರಿ ಎಂಬ ಪ್ರಶ್ನೆಯಿದೆ. ಇನ್ನು ಅತ್ಯಾಚಾರಗಳಿಗೆ ಶರಾಬು ಸೇವನೆಯೆ ಮೂಲವೆಂದು ಪ್ರತಿಪಾದಿಸುವುದಕ್ಕೆ ಏನು ಆಧಾರಗಳಿವೆ? ಹೇಗೆ ಅತ್ಯಾಚಾರಿಗಳೆಲ್ಲರೂ ಶರಾಬಿಗಳಲ್ಲವೋ ಹಾಗೇ ಶರಾಬಿಗಳೆಲ್ಲರೂ ಅತ್ಯಾಚಾರಿಗಳಲ್ಲ. ಈ ಸಂದರ್ಭದಲ್ಲಿ ಆರೆಸ್ಸೆಸ್ ಸರಸಂಘಚಾಲಕ ಮತ್ತು ಸಂಘ ಪರಿವಾರದ ಇನ್ನಿತರ ಧುರೀಣರು ಹಾಗೂ ಕೆಲವು ಸ್ವಘೋಷಿತ ಸ್ವಾಮೀಜಿ, ಸ್ವಾಮಿನಿಗಳು ನೀಡಿರುವ ಹೇಳಿಕೆಗಳ ಹಿಂದೆಯೂ ಇದೇ ತೆರನಾದ ಚಿಂತನೆಗಳು ಕೆಲಸ ಮಾಡಿರುವುದನ್ನು ಗಮನಿಸಬಹುದು. ಒಂದು ನಿರ್ದಿಷ್ಟ ಧರ್ಮ ಅಥವಾ ರಾಜಕೀಯ ಸಿದ್ಧಾಂತದ ಸಾಂಪ್ರದಾಯಿಕ ಬೋಧನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದೇ ಮೂಲಭೂತವಾದವಲ್ಲವೇ?

ಜಮಾತೆ ಇಸ್ಲಾಮಿನ ಮೂಲಪುರುಷ ಸೈಯದ್ ಅಬುಲ್ ಆಲಾ ಮೌದೂದಿ ಎಂಬವರು ಇಸ್ಲಾಂ ಸರ್ವಾಧಿಕಾರಿ ಸಿದ್ಧಾಂತದ ಪ್ರತಿಪಾದಕರಾಗಿದ್ದರು ಎನ್ನಲಾಗುತ್ತದೆ. ಕೆಲವು ವಿದ್ವಾಂಸರ ಅಭಿಪ್ರಾಯದಲ್ಲಿ ಮೌದೂದಿ ಸಿದ್ಧಾಂತಕ್ಕೂ ನಾಜಿ, ಸ್ಟಾಲಿನ್ ಸಿದ್ಧಾಂತಗಳಿಗೂ ವಿಶೇಷ ವ್ಯತ್ಯಾಸವಿಲ್ಲ. ಆರಂಭದಲ್ಲಿ ಜಮಾತೆ ಇಸ್ಲಾಮಿ ಹಿಂದ್‌ನ ಮುಖ್ಯ ಉದ್ದೇಶವಿದ್ದುದು ಭಾರತವೆಂಬ ದಾರ್-ಉಲ್-ಕುಫ್ರ್ (ಇಸ್ಲಾಂ ಧರ್ಮವನ್ನು ನಂಬದವರ) ನಾಡನ್ನು ದಾರ್-ಉಲ್-ಇಸ್ಲಾಂ (ಇಸ್ಲಾಮಿನ ನಿವಾಸಸ್ಥಾನ) ಆಗಿ ಪರಿವರ್ತಿಸಿ ಹುಕೂಮತ್-ಎ-ಇಲಾಹಿಯಾ (ಅಲ್ಲಾಹುವಿನ ಸಾಮ್ರಾಜ್ಯ) ಸ್ಥಾಪಿಸುವುದು. ಆದರೆ ಇದಕ್ಕೆ ಊಹಿಸಿದಷ್ಟು ಜನಬೆಂಬಲ ದೊರೆಯದಿದ್ದಾಗ ಅದನ್ನು ಬದಲಾಯಿಸಿ ತನ್ನ ಗುರಿ ಇಖಾಮತ್-ಎ-ದೀನ್ (ಧರ್ಮವನ್ನು ರಾಷ್ಟ್ರೀಯವನ್ನಾಗಿಸುವುದು) ಎಂದು ಘೋಷಿಸಿತು. ಸ್ವಾತಂತ್ರ್ಯ ಸಿಕ್ಕ 65 ವರ್ಷಗಳ ನಂತರ 2012ರಲ್ಲಿ ಅದೀಗ ಪ್ರಜಾತಾಂತ್ರಿಕ ವ್ಯವಸ್ಥೆಯ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ನಿರ್ಧರಿಸಿ ಒಂದು ರಾಜಕೀಯ ಪಕ್ಷವನ್ನೂ ಆರಂಭಿಸಿದೆ. ಹೀಗಿದ್ದರೂ ಮೌದೂದಿಯ ಆ ಸರ್ವಾಧಿಕಾರಿ ಸಿದ್ಧಾಂತವನ್ನು ಅದಿನ್ನೂ ಬಿಟ್ಟುಕೊಟ್ಟಿಲ್ಲ ಎಂಬುದಕ್ಕೆ ಇತ್ತೀಚೆಗೆ ಅದರ ಮುಖವಾಣಿ ಪತ್ರಿಕೆಯಲ್ಲಿ ಪ್ರಕಟಗೊಂಡಿರುವ ಒಂದು ಲೇಖನವೇ ಸಾಕ್ಷಿ. ಅದರಲ್ಲಿ ಮೌದೂದಿಯನ್ನು ಹೊಗಳಿ ಆತನ ಹುಕೂಮತ್-ಎ-ಇಲಾಹಿಯಾ ಸ್ಥಾಪನೆಯ ಸಿದ್ಧಾಂತವನ್ನು ಸಮರ್ಥಿಸಲಾಗಿದೆ. ಪಾಕಿಸ್ತಾನದ ಸರ್ವಾಧಿಕಾರಿ ಅಧ್ಯಕ್ಷ ಜಿಯಾನನ್ನು ಬೆಂಬಲಿಸಿ ಬಾಂಗ್ಲಾದೇಶದಲ್ಲಿ ಸಾವಿರಾರು ಜನರ ಮಾರಣಹೋಮಕ್ಕೆ ಕಾರಣವಾದವರು ಯಾರು?

ತಮ್ಮ ಮಸೀದಿಯಲ್ಲಿ ಮಹಿಳೆಯರಿಗೆ ಪ್ರಾರ್ಥನೆಗೆ ಅವಕಾಶವಿದೆ, ತಮ್ಮವರಾದ ಮೌಲಾನಾ ಸಯ್ಯದ್ ಹಬೀಬುಲ್ಲಾ ಮದನಿ ಕುರ್‌ಆನನ್ನು ಕನ್ನಡಕ್ಕೆ ಭಾಷಾಂತರಿಸಿದ್ದಾರೆ, ತಾವು ಸಮ್ಮಿಳಿತ ಸಂಸ್ಕೃತಿಯ ಪ್ರತೀಕವಾದ ಸೂಫಿಗಳ ದರ್ಗಾಗಳಿಗೂ ಹೋಗುತ್ತೇವೆ; ಅಲ್ಲಿ ತಬರ್ರುಖ್ (ಪ್ರಸಾದ) ಸ್ವೀಕರಿಸುತ್ತೇವೆ ಎಂದು ಸುನ್ನಿಗಳು ಹೇಳುತ್ತಿರುವುದು ನಿಜವೇ? ನಿಜವಾಗಿದ್ದ ಪಕ್ಷದಲ್ಲಿ ಮಹಿಳೆಯರಿಗೆ ಮಸೀದಿ ಪ್ರವೇಶ ನಿರಾಕರಿಸುತ್ತಿರುವುದು ಕೇವಲ ಕೆಲವೆಡೆಗೆ ಸೀಮಿತವಾದ ಸ್ಥಳೀಯ ವಿದ್ಯಮಾನವೇ?

ಆಧಾರ: ಇಸ್ಲಾಂ ಮತ್ತು ಮಹಿಳೆ
- ಡಾ. ಅಸ್ಗರ್ ಅಲಿ ಎಂಜಿನಿಯರ್
ಕಮ್ಯೂನಲಿಸಂ ಕಾಂಬ್ಯಾಟ್, ಜುಲೈ 2012
ಕನ್ನಡಕ್ಕೆ: ಸುರೇಶ್ ಭಟ್ ಬಾಕ್ರಬೈಲು

ಮೀಡಿಯಾ ಮಸಾಲ

ಶಿವಮೊಗ್ಗ ಪತ್ರಕರ್ತನ ಕೈಯಲ್ಲಿ RTI ಪಾಶ!

ಮಾಹಿತಿ ಹಕ್ಕು ಕಾಯ್ದೆ ಜಾರಿಗೆ ಬಂದಿರುವುದು ಸರ್ಕಾರದ ಆಡಳಿತದಲ್ಲಿ ಪಾರದರ್ಶಕತೆ ಬರಲಿ ಎಂದು. ಭ್ರಷ್ಟಾಚಾರ, ಸ್ವಜನಪಕ್ಷಪಾತಗಳು ನಿಂತು ಜನಸಾಮಾನ್ಯರಿಗೂ ಆಡಳಿತ ಯಂತ್ರಾಂಗದ ಆಗುಹೋಗುಗಳ ಬಗ್ಗೆ ಮಾಹಿತಿ ಸಿಗಲಿ ಎಂದಲ್ಲವೆ.

ಇದರಿಂದ ಜನರಿಗೆ ಅನೇಕ ರೀತಿಯಲ್ಲಿ ಉಪಯೋಗವಾಗುತ್ತಿದೆ. ಆದರೆ ಕೆಲವರಿಗೆ ಈ RTI ಎಂಬುದೇ ಒಂದು ದಂಧೆಯಾಗಿ ಹೋಗಿದೆ.



ಶಿವಮೊಗ್ಗೆಯ ತುಂಡು ಪತ್ರಕರ್ತನೊಬ್ಬ ಈ RTI ಅನ್ನೇ ಒಂದು ಪಾಶದಂತೆ ಹಿಡಿದು ಸರ್ಕಾರಿ ಅಧಿಕಾರಿಗಳು, ಕಂಟ್ರಾಕ್ಟುದಾರರನ್ನು ಬೆದರಿಸಿ ಹಣ ಸುಲಿಯುತ್ತಿರುವ ಬಗ್ಗೆ ವಿಪರೀತ ಸುದ್ದಿಗಳು ಹರಿದಾಡುತ್ತಿವೆ.

ಈತನ ವಸೂಲಿ ದಂಧೆ ವಿರುದ್ಧ ಈಗಾಗಲೇ ಕೆಲವರು ತಿರುಗಿ ಬಿದ್ದು ಗಲಾಟೆಗಳೂ ಆಗಿವೆ. ಆದರೂ ಈ ಪತ್ರಕರ್ತ ತನ್ನ `RTI ಜರ್ನಲಿಸಂ' ಬಿಡುತ್ತಿಲ್ಲ!

ಆಕಾಶದಲ್ಲಿ ಸದಾ ಚಂದ್ರನ ಬೆಳದಿಂಗಳು ಇರುವುದಿಲ್ಲ, ಚಂದ್ರೋದಯವಾಗುವಷ್ಟೇ ಸಹಜವಾಗಿ ಅಮಾವಾಸ್ಯೆಯೂ ಆವರಿಸಿಕೊಳ್ಳುತ್ತದೆಂಬುದು ಈ ಪತ್ರಕರ್ತನಿಗೆ ಅರ್ಥವಾದರೆ ಉತ್ತಮ.

ಸೂಚನೆ: ಮೀಡಿಯಾ ಮಸಾಲಾಗೆ ಮಾಹಿತಿ ಕಳುಹಿಸುವವರು ಇನ್ನು ಮುಂದೆ kannadamediamasala@gmail.com (ಕನ್ನಡ ಮೀಡಿಯಾ ಮಸಾಲ)ಗೆ ನೇರವಾಗಿ ಕಳುಹಿಸಲು ಕೋರಿದೆ.

ಬಡವರನ್ನು ಲೆಕ್ಕ...

03 ⏮

ಎಂದು ಘೋಷಿಸುವ ಹುನ್ನಾರ ಇದು.

ಸತತವಾಗಿ ಮೂಲ ಮಾನದಂಡಕ್ಕಿಂತ ಕೆಳಗೆ ಬಡತನದ ರೇಖೆಯನ್ನು ನಿರ್ವಚಿಸುತ್ತಾ ಹೋಗುತ್ತಿರುವುದರಿಂದ, ಅಧಿಕೃತವಾಗಿ ಬಡವರು ಮಾಯವಾಗುವುದರಲ್ಲಿ ಯಾವ ಸಂದೇಹವೂ ಇಲ್ಲ. ವಾಸ್ತವದಲ್ಲಿ ಮಾತ್ರ ಈ ಸಂಖ್ಯೆ ಹೆಚ್ಚುತ್ತಾ ಹೋಗಿರುವುದಂತೂ ಸತ್ಯ.

ಯೋಜನಾ ಆಯೋಗ, 2009-10ರಲ್ಲಿ ದೆಹಲಿಗೆ ನಿಗದಿಪಡಿಸಿದ ಬಡತನರೇಖೆಯ ಮಾಸಿಕ ವೆಚ್ಚ ರೂ.1040. ಇದನ್ನು ಒಪ್ಪಿಕೊಂಡರೆ, ಆಹಾರೇತರ ವೆಚ್ಚ ಹೊರತುಪಡಿಸಿ, ಒಬ್ಬ ಪಡೆಯಬಹುದಾದ ಆಹಾರದ ಪ್ರಮಾಣ ಕೇವಲ 1400 ಕ್ಯಾಲೋರಿ. ಆರೋಗ್ಯ ಮಾನದಂಡವಾದ 2100 ಕ್ಯಾಲೋರಿ ಪಡೆಯಲು ಏನೆಂದರೂ ರೂ. 5000 ನಿಗದಿಯಾಗಬೇಕು. ಇದರ ಪ್ರಕಾರ ಶೇ.90 ಜನ ಬಡತನದ ರೇಖೆಯಡಿ ಬರುತ್ತಾರೆ. 2005-06ರಲ್ಲೇ ಆಹಾರ ಭದ್ರತೆಯ ಮಾನದಂಡದ ಮೇರೆ ನಿಗದಿಪಡಿಸಿದ ಮೊತ್ತ ರೂ. 1150. ಆಗಲೇ, ಈ ಲೆಕ್ಕದ ಪ್ರಕಾರ ಶೇ. 57 ಮಂದಿ ಬಡತನ ರೇಖೆಯ ಕೆಳಗಿದ್ದರು. ಬೆಲೆ ಏರಿಕೆ, ವೈದ್ಯಕೀಯ ವೆಚ್ಚ ಆಹಾರ ಸಾಮಗ್ರಿಯ ಬೆಲೆಯೇರಿಕೆಯಿಂದಾಗಿ ಜನ ಆಹಾರದ ವೆಚ್ಚವನ್ನೇ ಕಡಿತಗೊಳಿಸಿದ್ದರ ಪರಿಣಾಮ ದೆಹಲಿಯ ಕುಟುಂಬಗಳ ತಲಾವಾರು ಕ್ಯಾಲೊರಿ 1756ಕ್ಕೆ ಇಳಿದಿದೆ. ಸಿರಿವಂತ ಕೆಲವರು ಬೇಕುಬೇಕಾದ ಕಾರು, ಐಶಾರಾಮಿ ವಸ್ತುಗಳನ್ನು ಖರೀದಿಸಿ ಸುಖಿಯಾಗಿದ್ದರೆ, ಕಣ್ಣಿಗೆ ಕಾಣದ ಗರೀಬರು ಬದುಕುಳಿಯಲು ಪರದಾಡುತ್ತಿದ್ದಾರೆ. ಐದು ವರ್ಷಗಳ ಹಿಂದೆ 1800 ಕ್ಯಾಲೊರಿ ಆಹಾರ ಹೊಂದಿಸಲು ಒದ್ದಾಡುತ್ತಿದ್ದವರ ಸಂಖ್ಯೆ ಈಗ ನಾಲ್ಕು ಪಟ್ಟು ಹೆಚ್ಚಿದೆ.

ಇಷ್ಟಾಗಿಯೂ ಯೋಜನಾ ಆಯೋಗದ ಅರ್ಥ ಶಾಸ್ತ್ರಜ್ಞರು ಈ ಅಸಂಬದ್ಧ ಮಾದರಿಯನ್ನು ಯಾಕೆ ಬಳಸುತ್ತಿದ್ದಾರೆ? 1040 ರೂಪಾಯಿಯ ಮಾನದಂಡ ಕೇವಲ 1400 ಕ್ಯಾಲೊರಿ ಆಹಾರ ಒದಗಿಸಬಲ್ಲುದು ಎಂದು ಅವರಿಗೆ ಗೊತ್ತಿಲ್ಲವೇ. ಒಂದು ಕಾರಣ ಎಂದರೆ, ಜಾಗತಿಕವಾಗಿ, ವಿಶ್ವ ಬ್ಯಾಂಕಿನ ಅರ್ಥ ಶಾಸ್ತ್ರಜ್ಞರು ಆಯಾ ಬಡದೇಶಗಳ ಸ್ಥಳೀಯ ನಾಣ್ಯದ ಆಧಾರದ ಬಡತನ ಗೆರೆಯನ್ನು ಒಪ್ಪಿಕೊಂಡು ಅಂದಾಜು ಸಿದ್ಧಪಡಿಸುತ್ತಿದ್ದಾರೆ. ಅದಕ್ಕೇ ಏಷ್ಯಾದ ಬಡತನ ನಿವಾರಣೆಯ ವಿಶ್ವಬ್ಯಾಂಕಿನ ಅಂಕಿಅಂಶಗಳೂ ಅಷ್ಟೇ ಪೊಳ್ಳಾಗಿರುವುದು. ಬೆಲೆ ಏರಿಕೆ, ನಿರುದ್ಯೋಗದ ಪರಿಣಾಮವಾಗಿ ಬಡವರ ಸಂಖ್ಯೆ ಹೆಚ್ಚಿದೆ. ಆದರೆ ಇದನ್ನು ಒಪ್ಪಿಕೊಂಡರೆ, ಜಾಗತಿಕ ಬಡತನದ ಅಂದಾಜು ಲೆಕ್ಕ ಹಾಕುತ್ತಿರುವ ಸಾವಿರಾರು ಅರ್ಥಶಾಸ್ತ್ರಜ್ಞರು ಅವರ ಅಂಕಿಅಂಶಗಳೊಂದಿಗೆ ಕುಸಿದು ಬೀಳುತ್ತಾರೆ.

ಆದರೆ ಇದಕ್ಕಿಂತಲೂ ಮುಖ್ಯ ಕಾರಣವೆಂದರೆ ಈ ರೀತಿಯ ಲೆಕ್ಕಾಚಾರದ ಮೂಲಕ ಬಡತನ ರೇಖೆಯ ಕೆಳಗಿರುವವರ ಸಂಖ್ಯೆ ಕಡಿಮೆಯಾಗಿದೆ ಎಂದು ಘೋಷಿಸಿದರೆ, ಜಾಗತೀಕರಣ ಮತ್ತು ತತ್ಸಂಬಂಧೀ ನವ ಉದಾರವಾದೀ ಆರ್ಥಿಕ ನೀತಿಗಳು ಜನೋಪಯೋಗಿ ಆಗಿವೆ ಎಂದು ನಂಬಿಸುವುದು ಸುಲಭ.

ಆದರೆ ಸತ್ಯ ಎಂದಿದ್ದರೂ ಜಾಹೀರಾಗುತ್ತದೆ, ಅದು ಬೇರೆ.

● ಕೆ.ಪಿ.ಸುರೇಶ

ಮೂಲ : ಉತ್ಸಾ ಪಟ್ನಾಯಕ್

ಕೃಪೆ: ದಿ ಹಿಂದೂ ದೈನಿಕ

(ಉತ್ಸಾ ಪಟ್ನಾಯಕ್ ನಮ್ಮ ಬಹುಮುಖ್ಯ ಮಹಿಳಾ ಅಭಿವೃದ್ಧಿ ಚಿಂತಕರು. ಅವರ 'ಹಸಿವಿನ ಗಣರಾಜ್ಯ (Republic of Hunger) ತೀಕ್ಷ್ಣ ಒಳನೋಟಗಳ ಕೃತಿ)

ಬೈ ಎಲೆಕ್ಷನ್- ಬೋರೋ ಬೋರು...!

ಬೆಂಗಳೂರು ಗ್ರಾಮಾಂತರ ಹಾಗೂ ಮಂಡ್ಯ ಲೋಕಸಭಾ ಕ್ಷೇತ್ರಗಳ ಉಪ ಚುನಾವಣೆಗೆ ಚುನಾವಣಾ ಆಯೋಗ ಆಗಸ್ಟ್ 21ರಂದು ಮುಹೂರ್ತ ಫಿಕ್ಸ್ ಮಾಡಿದೆ. ಆದರೆ ರಾಜಕೀಯ ಪಕ್ಷಗಳು ವಿಕಾವಿಕಿ ಡೇಟ್ ಫಿಕ್ಸ್ ಮಾಡಿದ ಆಯೋಗವನ್ನು ಮನಸಾರೆ ಶಪಿಸಿಕೊಂಡೇ ಅನಿವಾರ್ಯವಾಗಿ ಕ್ಯಾಂಡಿಡೇಟ್‌ಗಳನ್ನು ಹುಡುಕಲು ಶುರು ಮಾಡಿವೆ.



ಗ್ರಾಮ ಪಂಚಾಯತಿ ಮೆಂಬರ್ ಎನಿಸಿಕೊಳ್ಳಲಿಕ್ಕೂ ತೀವ್ರ ಪೈಪೋಟಿ ಇರುವ ಈ ಕಾಲದಲ್ಲಿ ಒಂದು ಜಿಲ್ಲೆಯಷ್ಟು ವಿಶಾಲ ವ್ಯಾಪ್ತಿ ಹೊಂದಿರುವ ಲೋಕಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಲು, ರಾಷ್ಟ್ರೀಯ ಪಕ್ಷಗಳಿಗೂ ಅಭ್ಯರ್ಥಿಗಳ ಕೊರತೆ ಕಾಣುತ್ತಿದೆ. ಯಾಕೆಂದರೆ ಬರುವ ಏಳೆಂಟು ತಿಂಗಳಲ್ಲಿ ಸಾರ್ವತ್ರಿಕ ಚುನಾವಣೆ ನಡೆಯಲಿದ್ದು ಈಗ ಗೆದ್ದುಬಂದವನ ಹಣೆಬರಹವೂ ಅಷ್ಟಕ್ಕೇ ಮುಕ್ತಾಯವಾಗಲಿದೆ. ಹೀಗಾಗಿ ದುಡ್ಡು ಬಿಚ್ಚಲು ಯಾರೂ ತಯಾರಿಲ್ಲ; ಈ ಚುನಾವಣೆ ಯಾಕಾದ್ರೂ ಬಂತೋ ಎನ್ನುತ್ತಲೇ ಅನಿವಾರ್ಯವಾಗಿ ಎಲ್ಲರೂ ಸಜ್ಜಾಗುತ್ತಿದ್ದಾರೆ.

ಬೇಡವಾದ ಚುನಾವಣೆಯಾಗಿದ್ದರೂ ಸರಿ; ರಾಜಕೀಯ ಮೊಗಸಾಲೆಯಲ್ಲಿ ಮತ್ತೆ ಒಂದಷ್ಟು ಹೊಸ ಹಕೀಕತ್ತುಗಳು ಪ್ರಾರಂಭವಾಗಿವೆ. ಮುಖ್ಯವಾಗಿ ಬೆಂಗಳೂರು ಗ್ರಾಮಾಂತರ ಕ್ಷೇತ್ರದ ಅಭ್ಯರ್ಥಿಯ ಆಯ್ಕೆಯ ವಿಷಯದಲ್ಲಿ ಬೇರೆಬೇರೆ ಪಕ್ಷದೊಳಗೆ ಬೇರೆಬೇರೆ ರೀತಿಯ ವಿದ್ಯಮಾನಗಳು ಗರಿಗೆದರಿಕೊಳ್ಳುತ್ತಿವೆ.



ಸಿದ್ದು ನೇತೃತ್ವದ ಕಾಂಗ್ರೆಸ್ ಸರ್ಕಾರಕ್ಕೆ ಇದು ಮೊದಲ ಉಪಚುನಾವಣೆ. ಹಾಗಾಗಿ ಈ ಚುನಾವಣೆಯಲ್ಲಿ ಗೆಲ್ಲುವುದು ಕಾಂಗ್ರೆಸ್‌ಗೆ ಪ್ರೆಸ್ಟೀಜ್‌ನ ಪ್ರಶ್ನೆ. ಅದೇ ರೀತಿ ಜೆಡಿಎಸ್‌ಗೆ ಕೂಡ. ಯಾಕೆಂದರೆ ಈ ಎರಡೂ ಕ್ಷೇತ್ರಗಳೂ 2009ರ ಚುನಾವಣೆಯಲ್ಲಿ ಜೆಡಿಎಸ್‌ನ ತೆಕ್ಕೆಗೆ ಸೇರಿದ್ದವು. ಬೆಂ. ಗ್ರಾಮಾಂತರ ಕ್ಷೇತ್ರವನ್ನು ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಪ್ರತಿನಿಧಿಸಿದ್ದರೆ, ಮಂಡ್ಯ ಕ್ಷೇತ್ರವನ್ನು ಚೆಲುವರಾಯಸ್ವಾಮಿ ಪ್ರತಿನಿಧಿಸುತ್ತಿದ್ದರು. ಸಂಸದ ಎನಿಸಿಕೊಂಡರೆ ವಯಾರು ಕಾಸಿಗೂ ಉಪಯೋಗವಿಲ್ಲವೆಂದು ಬಗೆದು ರಾಜೀನಾಮೆ ಗೀಚಿ, ವಿಧಾನಸಭೆಯಲ್ಲಿ ಜಾಗ ಕಾಯಂಮಾಡಿಕೊಂಡಿದ್ದರು. ಆ ಮಾತು ಬೇರೆ.


ಈ ಚುನಾವಣೆ ಕಾಂಗ್ರೆಸ್ ಪಕ್ಷಕ್ಕೆ ಪ್ರೆಸ್ಟೀಜ್ ಪ್ರಶ್ನೆ ಆಗಿದ್ದರೆ, ಮಾನ್ಯ ಡಿಕೆಶಿ ಅವರ ರಾಜಕೀಯ ಭವಿಷ್ಯ ಈ ಚುನಾವಣೆಯ ಸೋಲುಗೆಲುವಿನ ಮೇಲೆ ನಿಂತಿದೆ ಎಂದರೆ ಯಾರಿಗಾದರೂ ವಿಚಿತ್ರವೆನಿಸಬಹುದು. ಆದರೆ ರಾಜಕೀಯದ ಚದುರಂಗದಾಟವೇ ಹಾಗೆ. ಈ ಉಪಚುನಾವಣೆಯಲ್ಲಿ ಡಿಕೆಶಿ ತಮ್ಮ ಡಿ.ಕೆ.ಸುರೇಶ್‌ನನ್ನೇ ಕಾಂಗ್ರೆಸ್ ಅಭ್ಯರ್ಥಿಯನ್ನಾಗಿಸಿ, ಗೆಲ್ಲಿಸಿಕೊಂಡು ಬಂದರೆ ಮಂತ್ರಿ ಸ್ಥಾನ ಕೊಡೋದು ಗ್ಯಾರಂಟಿ ಅಂತ ಹೈಕಮಾಂಡ್‌ನವರು ಡಿಕೆಶಿಗೆ ಕಟ್ಟಪ್ಪಣೆ ಮಾಡಿದ್ದಾರೆಂದು ಕಾಂಗ್ರೆಸ್ ಕಾರ್ಯಕರ್ತರೇ ಹೇಳಿಕೊಂಡು ತಿರುಗುತ್ತಿದ್ದಾರೆ.

ಈ ಊಹಾಪೋಹಗಳು ಏನೇ ಇರಲಿ, ಈ ಉಪಚುನಾವಣೆ ಡಿಕೆಶಿ ಪಾಲಿಗಂತೂ ಒಂದು ರೀತಿಯ ಬಿಸಿತುಪ್ಪ ಆಗಿರುವುದಂತೂ ಸತ್ಯ. ತನ್ನ ತಮ್ಮನನ್ನು ಕಾಂಗ್ರೆಸ್ ಎಂಪಿ ಮಾಡಿಕೊಂಡರೆ ತನ್ನ ರಾಜಕೀಯ ತಳಹದಿ ಮತ್ತಷ್ಟು ವಿಸ್ತಾರವಾಗುತ್ತದೆ; ಜೊತೆಗೆ ಹೈಕಮಾಂಡ್ ಮೆಚ್ಚುಗೆ ಗಳಿಸಿ, ತನ್ನ ಕಾರ್ಯ ಸಾಧಿಸಿಕೊಳ್ಳಲು ಸುಲಭವಾಗುತ್ತದೆ ಎಂಬ ಲೆಕ್ಕಾಚಾರ ಒಂದುಕಡೆ.


ಮತ್ತೊಂದು ಕಡೆ ಉಪಚುನಾವಣೆಯಲ್ಲಿ ಕಾಂಗ್ರೆಸ್ ಗೆದ್ದಿದ್ದೇ ಆದರೆ ಅದರ ಕ್ರೆಡಿಟ್ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಸಹಜವಾಗಿಯೇ ಸಲ್ಲುತ್ತದೆ. ಒಂದು ವೇಳೆ ಪಕ್ಷ ಸೋತರೆ ಸಿದ್ದರಾಮಯ್ಯನವರಿಗೆ ಮುಜುಗರ ಉಂಟುಮಾಡಲಿಕ್ಕೆಂದೇ ಡಿಕೆಶಿ ಪಕ್ಷ ವಿರೋಧಿ ಚಟುವಟಿಕೆ ನಡೆಸಿದರೆಂಬ ಕಳಂಕ ಹೊರಬೇಕಾಗುತ್ತದೆ. ಹೀಗೆ ಡಿಕೆಶಿ ಪಾಲಿಗೆ ಈ ಚುನಾವಣೆಯೊಂದು ಬಿಸಿ ತುಪ್ಪ. ಆದರೂ ಅನಿವಾರ್ಯವಾಗಿ ಕಾಳಗಕ್ಕೆ ರೆಡಿಯಾಗುತ್ತಿದ್ದಾರೆ. ಒಂದು ಕಾಲದಲ್ಲಿ ದೇವೇಗೌಡರ ವಿರುದ್ಧ ಸೆಡ್ಡುಹೊಡೆದು ಆಗ ತನ್ನ ಶಿಷ್ಯೆಯಾಗಿದ್ದ ತೇಜಸ್ವಿನಿಯನ್ನು ನಿಲ್ಲಿಸಿ ಗೆಲ್ಲಿಸಿದ್ದ ಡಿಕೆಶಿ ಎಷ್ಟು ರಭಸವಾಗಿ ನುಗ್ಗುತ್ತಾರೋ ಕಾದು ನೋಡಬೇಕು.

ಮುಂದಿನ ಲೋಕಸಭಾ ಚುನಾವಣೆಯಲ್ಲಿ ದೆಹಲಿ ಗದ್ದುಗೆ ಹಿಡಿಯುವ ಕನಸು ಕಾಣುತ್ತಿರುವ ರಾಷ್ಟ್ರೀಯ ಪಕ್ಷ ಬಿಜೆಪಿಗೆ ಇಲ್ಲಿ ಸೂಕ್ತ ಕ್ಯಾಂಡಿಡೇಟೇ ಇಲ್ಲದಂತಾಗಿದೆ. ಮಾಜಿ ಮಂತ್ರಿ ಆರ್.ಅಶೋಕ್, ಎಂಎಲ್ಎ ಕೃಷ್ಣಪ್ಪ ಮುಂತಾದ ಹೆಸರುಗಳು ಕೇಳಿ ಬರುತ್ತಿವೆಯಾದರೂ ಯಾರಿಗೂ ಈ ಬಗ್ಗೆ ಆಸಕ್ತಿ ಇಲ್ಲ.

ಈ ಎಲ್ಲಾ ಇಕ್ಕಟ್ಟುಗಳ ನಡುವೆ ಜೆಡಿಎಸ್ ತನ್ನದೇ ಗೇಮ್‌ಪ್ಲಾನ್ ಹೆಣೆಯುತ್ತಿದೆ. ಅನಿತಾ ಕುಮಾರಸ್ವಾಮಿಯವರನ್ನು ಕ್ಯಾಂಡಿಡೇಟ್ ಆಗಿಸಲು ಸರ್ವ ಪ್ರಯತ್ನವೂ ತೆರೆಮರೆಯಲ್ಲಿ ಸಾಗಿದೆ.



ಕಳೆದ ವಾರ ಅಧಿವೇಶನ ನಡೆಯುತ್ತಿದ್ದ ಸಂದರ್ಭದಲ್ಲೇ ವಿಧಾನಸೌಧದ ಮೊಗಸಾಲೆಯಲ್ಲೇ ಮತ್ತೊಂದು ಒಳಒಪ್ಪಂದವೂ ನಡೆದಿದೆಯೆಂಬ ಬಗ್ಗೆ ಗುಸುಗುಸು ಕೇಳಿಬರುತ್ತಿದೆ. ಬೆಂಗಳೂರು ಗ್ರಾಮಾಂತರ ಕ್ಷೇತ್ರಕ್ಕೆ ಜೆಡಿಎಸ್-ಬಿಜೆಪಿ-ಕೆಜೆಪಿಗಳು ಒಟ್ಟಾಗಿ ಅಭ್ಯರ್ಥಿಯನ್ನು ಕಣಕ್ಕಿಳಿಸುವ ಬಗ್ಗೆಯೂ ಘಾತುಕತೆಗಳು ಕೇಳಿಬರುತ್ತಿವೆ. ಆದರೆ ಬಿಜೆಪಿ ಜೊತೆ ಸೇರಿದರೆ ಅಲ್ಪಸಂಖ್ಯಾತರಿಂದ ಪರ್ಮನೆಂಟಾಗಿ ದೂರವಾಗಿಬಿಡುವ ಭಯದಲ್ಲಿ ಮಣ್ಣಿನ ಮಕ್ಕಳ ಪಕ್ಷ ಮೀನಮೇಷ ಎಣಿಸುತ್ತಿದೆ. ಮತ್ತೊಂದು ಕಡೆ, ನ್ಯಾಷನಲ್ ಪಾರ್ಟಿ ಎನಿಸಿಕೊಂಡು ಅಭ್ಯರ್ಥಿ ಹಾಕದೆ ಹೋದರೆ ಬಿಜೆಪಿ ಹೈಕಮಾಂಡ್‌ನಿಂದ ಛೀಮಾರಿಗೆ ಒಳಗಾಗುವ ಭಯದಲ್ಲಿ ಬಿಜೆಪಿಗಳು ಒದ್ದಾಡುತ್ತಿದ್ದಾರೆ. ಆದರೆ ಮುಂಬರುವ ಸಾರ್ವತ್ರಿಕ ಚುನಾವಣೆಗೆ ಈ ಮೈತ್ರಿ ಮುನ್ನುಡಿಯಾಗಬಹುದೆಂಬ ಆಸೆ ಬಿಜೆಪಿಯೊಳಗೆ ಚಿಗುರೊಡೆಯುತ್ತಿದೆ.



ಕೊನೆಗೆ ಎಲ್ಲಾ ಅಳೆದೂ ಸುರಿದು ಜೆಡಿಎಸ್ ತನ್ನ ಕ್ಯಾಂಡಿಡೇಟನ್ನು ಕಣಕ್ಕಿಳಿಸಿ, ಬಿಜೆಪಿ, ಕೆಜೆಪಿಗಳು ಹಿಂಬದಿಯ ಬೆಂಬಲ ನೀಡುವಂತೆ ಒಳ ಒಪ್ಪಂದವಾಗುವ ಸಾಧ್ಯತೆಯೇ ಹೆಚ್ಚಾಗಿ ಕಂಡುಬರುತ್ತಿದೆ. ಹೀಗಾಗಿ ನಾಮಪತ್ರ ಸಲ್ಲಿಸಲು ಕೊನೇ ದಿನಾಂಕವಾದ ಆಗಸ್ಟ್ 3ರವರೆಗೂ ಈ ನಾಟಕ ಎಳೆದಾಡುವ ಸಾಧ್ಯತೆಯಿದೆ.

ಬೆಂಗಳೂರು ಜಿಲ್ಲೆ ವ್ಯಾಪ್ತಿಯ ಆನೇಕಲ್, ರಾಜರಾಜೇಶ್ವರಿ ನಗರ, ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರಗಳು ಮತ್ತು ರಾಮನಗರ ಜಿಲ್ಲೆ ವ್ಯಾಪ್ತಿಯ ರಾಮನಗರ, ಕನಕಪುರ, ಚನ್ನಪಟ್ಟಣ, ಮಾಗಡಿ ಕ್ಷೇತ್ರಗಳು ಹಾಗೂ ತುಮಕೂರು ಜಿಲ್ಲೆಗೆ ಸೇರಿದ ಕುಣಿಗಲ್ ಒಳಗೊಂಡು ಒಟ್ಟು 8 ಅಸೆಂಬ್ಲಿ ಕ್ಷೇತ್ರಗಳು ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಬರುತ್ತವೆ.

ಪಕ್ಷವಾರು ಮತಗಳಿಕೆ

ಕ್ಷೇತ್ರ	ಕಾಂಗ್ರೆಸ್	ಜೆಡಿಎಸ್	ಬಿಜೆಪಿ
ಆನೇಕಲ್	1,05,464	7,307	65,282
ಬೆಂಗಳೂರು ದಕ್ಷಿಣ	63,849	72,045	1,02,207
ರಾಜರಾಜೇಶ್ವರಿ ನಗರ	71,064	52,251	50726
ರಾಮನಗರ	58049	83447	1776
ಚನ್ನಪಟ್ಟಣ	8134	73635	1609
ಮಾಗಡಿ	60462	74821	1604
ಕನಕಪುರ	100007	68583	1807
ಕುಣಿಗಲ್	33918	44575	34943
ಒಟ್ಟು	5,00,947	4,76,664	2,59,954

ಬೆಂಗಳೂರು ಗ್ರಾಮಾಂತರ ಕ್ಷೇತ್ರದ ವ್ಯಾಪ್ತಿಯ ವಿಧಾನಸಭಾ ಕ್ಷೇತ್ರಗಳ ಒಟ್ಟಾರೆ ಮತಗಳಿಕೆ ಪ್ರಮಾಣದಲ್ಲಿ ಎಲ್ಲರಿಗಿಂತ ಕಾಂಗ್ರೆಸ್ ಮುಂದಿದೆ. ಜೊತೆಗೆ ಚನ್ನಪಟ್ಟಣದಲ್ಲಿ ಎಚ್‌ಡಿಕೆ ಧರ್ಮಪತ್ನಿ ಅನಿತಾ ಕುಮಾರಸ್ವಾಮಿಯನ್ನು ಪರಾಭವಗೊಳಿಸಿ ಸೈಕಲ್ ಚಿಹ್ನೆಯಿಂದ ಗೆದ್ದುಬಂದು ಕರ್ನಾಟಕದಲ್ಲಿ ಸಮಾಜವಾದಿ ಪಕ್ಷದ ಖಾತೆ ತೆರೆದಿರುವ ಸಿ.ಪಿ.ಯೋಗೇಶ್ವರ್ ಪಡೆದಿದ್ದ ಮತಗಳು ಬರೋಬ್ಬರಿ 80,099 !

ಲೋಕಸಭಾ ಚುನಾವಣೆಯಲ್ಲಿ ಯೋಗೇಶ್ವರ್ ಪಾಳಯದ ಮತಗಳು ಅನಾಯಾಸವಾಗಿ ಕಾಂಗ್ರೆಸ್ ಮಡಿಲಿಗೆ ಬೀಳುವ ಸಾಧ್ಯತೆ ಹೆಚ್ಚು. ಅದಕ್ಕೆ ಸ್ಪಷ್ಟ ಕಾರಣವೂ ಇದೆ. ಕುಖ್ಯಾತ ಮೆಗಾಸಿಟಿ ಯೋಜನೆಯ ಹಗರಣದಲ್ಲಿ ಯೋಗೇಶ್ ರೆಡ್‌ಹ್ಯಾಂಡ್ ಆಗಿ ಸಿಕ್ಕಿಬಿದ್ದಿದ್ದಾನೆ. ಈ ಹಗರಣಕ್ಕೆ ಸಂಬಂಧಿಸಿದ ಫೈಲುಗಳು ಕೇಂದ್ರ ಕಾರ್ಪೊರೇಟ್ ವ್ಯವಹಾರಗಳ ಸಚಿವರ ಟೇಬಲ್ ಮೇಲೆ ಕುಳಿತಿದೆ. ಇಂಥಾ ಸಂದರ್ಭದಲ್ಲಿ ಯೋಗೀಶ್ ಅನಿವಾರ್ಯವಾಗಿ ಕಾಂಗ್ರೆಸ್‌ನವರ ಮರ್ಜಿಯಲ್ಲಿ ಬಾಳಬೇಕಾಗಿದೆಯೆಂಬುದು ಶಾಲಾಬಾಲಕರಿಗೂ ಗೊತ್ತಿರುವ ಸಂಗತಿ.

ಮತ್ತೊಂದೆಡೆ ಮಾಗಡಿಯಲ್ಲಿ ಕಾಂಗ್ರೆಸ್ ಟಿಕೆಟ್‌ಗಾಗಿ ವಿಫಲ ಪ್ರಯತ್ನ ಮಾಡಿ ಕೊನೆಗೆ ಯಡ್ಡಿಯ ತೆಂಗಿನಕಾಯಿ ಚಿಹ್ನೆಯಡಿ ಸ್ಪರ್ಧಿಸಿ 27,143 ಮತಗಳನ್ನು ಗಳಿಸಿದ್ದ ಎಚ್‌ಎಂ ಕೃಷ್ಣಮೂರ್ತಿಯ ಒಲವು ಹೆಚ್ಚಾಗಿ ಕಾಂಗ್ರೆಸ್ ಕಡೆಗೇ ಇದೆಯೆಂದು ಅವರ ಬೆಂಬಲಿಗರೇ ಹೇಳುತ್ತಿದ್ದಾರೆ.

ಒಟ್ಟಾರೆ ವಿಶ್ಲೇಷಣೆಯಲ್ಲಿ ವಿಭಿನ್ನ ಪಕ್ಷಗಳು ಸ್ವತಂತ್ರವಾಗಿ ಸ್ಪರ್ಧಿಸಿದ್ದೇ ಆದಲ್ಲಿ ಆಡಳಿತಾರೂಢ ಕಾಂಗ್ರೆಸ್ ಪಕ್ಷದ ಗೆಲುವು ಅನಾಯಾಸ. ಒಳಒಪ್ಪಂದ- ಜಂಟಿ ಸ್ಪರ್ಧೆಯ ಸನ್ನಿವೇಶ ಸೃಷ್ಟಿಯಾದರೆ ಫಲಿತಾಂಶ ಏನಾಗಬಹುದೆಂದು ತಿಳಿದುಕೊಳ್ಳಲು ಆಗಸ್ಟ್ 24ರವರೆಗೆ ಕಾಯಲೇಬೇಕು.

ದಿನಕ್ಕೊಂದು ಬಣ್ಣ ಪಡೆದುಕೊಳ್ಳುವ ಇಂದಿನ ರಾಜಕೀಯ ಮತ್ಯಾವ ರಂಗು ಪಡೆಯುತ್ತದೋ ಕಾದು ನೋಡಬೇಕಷ್ಟೆ.

• ದೊಡ್ಡಿಪಾಳ್ಯ ನರಸಿಂಹಮೂರ್ತಿ

---

02 ◀◀

ಬಿಡಿಚಿತ್ರಗಳು

ರೈತರಿಗೆ ಅವರ ಶ್ರಮಕ್ಕೆ ತಕ್ಕ ಪ್ರತಿಫಲ ಸಿಗಲೇಬೇಕೆಂದು ಈ ಬಾಲಸುಬ್ರಮಣ್ಯಂ ಹಠಕ್ಕೆ ಬಿದ್ದವರಂತೆ ಓಡಾಡಿ ವ್ಯವಸ್ಥಿತವಾಗಿ ರೇಷ್ಮೆ ಗೂಡಿನ ಮಾರ್ಕೆಟ್‌ಗಳ ಸ್ಥಾಪನೆಗೆ ಕಾರಣರಾದರು.

ಕೊಂಚ ಸಮಾಜವಾದಿ ಅಥವಾ ಸಮಾನತೆಯ ಪರ ಒಲವುಳ್ಳವರೆಂದು ಬೇರೆ ಕಾಮನ್ ಆಫೀಸರ್‌ಗಳಿಗೆ ಬಾಲಸುಬ್ರಮಣ್ಯಂ ಬಗ್ಗೆ ಗುಮಾನಿ ಇತ್ತಂತೆ ಆಗ.

ಈ ರೇಷ್ಮೆ ಗೂಡಿನ ಮಾರಾಟವೆಲ್ಲಾ ವ್ಯವಸ್ಥಿತವಾಗಿ ಚೆಲ್ಲಿನ ಮೋಸವಿಲ್ಲದೆ ನಡೆಯಲು ತೊಡಗಿದ್ದಾಗ ಯಾರೋ ಗೆಳೆಯರು "ನೀವೇಕೆ ಇದನ್ನೊಂದು ಸವಾಲಿನಂತೆ ತಗೊಂಡಿರಿ?" ಅಂತ ಕೇಳಿದರಂತೆ. ಅದಕ್ಕೆ ಬಾಲಸುಬ್ರಮಣ್ಯಂ "ರೇಷ್ಮೆ ಬೆಳೆಯುವುದು ಬಡ ರೈತರಾದರೂ ಅದನ್ನು ಬಳಸುವುದೆಲ್ಲಾ ಶ್ರೀಮಂತರೆ. ಹಾಗಾಗಿ ಈ ಸಾಹುಕಾರರ ಹತ್ತಿರ ಇರೋ ಹಣ ಸ್ವಲ್ಪವಾದರೂ ಬಡ ರೈತರಿಗೆ ಸಿಗಲಿ ಅಂತ" ಅಂದಿದ್ದರು.

ಇದೊಂತರ Missionary zeal!

ಬಾಲಸುಬ್ರಮಣ್ಯಂ ಬಗ್ಗೆ ಭ್ರಷ್ಟ ಸರ್ಕಾರಿ ಅಧಿಕಾರಿಗಳಿಗೆ, ರಾಜಕಾರಣಿ-ಕಂಟ್ರಾಕ್ಟರ್‌ಗಳಿಗೆಲ್ಲಾ ಸದಾ ದುಮ್ಮಿಸಿ ಕೋಪ. ಅಸಹನೆ...!


ಯಾಕೆ ಗೊತ್ತಾ?

ಅವರು ತಮ್ಮಿಡೀ ಸರ್ವೀಸ್‌ನಲ್ಲಿ ಎಂದೂ ಲಂಚದ ಹಣಕ್ಕೆ ಕೈಚಾಚಲಿಲ್ಲ. ಅಷ್ಟೇ ಅಲ್ಲ ಹಣದ ಹಸಿವಿದ್ದ ಬಕಾಸುರರಿಗೆ ಸಾರ್ವಜನಿಕರ ಹಣವನ್ನು ತಿನ್ನಲು ಬಿಡುತ್ತಲೂ ಇರಲಿಲ್ಲ.

ಹೀಗಿದ್ದ ಬಾಲಸುಬ್ರಮಣ್ಯಂರನ್ನು ಯಡಿಯೂರಪ್ಪ ಸರ್ಕಾರ 'ಭೂ ಕಬಳಿಕೆಗೆ ಸಂಬಂಧಿಸಿದಂತೆ ಒಂದು ತನಿಖಾ ವರದಿ ನೀಡುವಂತೆ ಸೂಚಿಸಿ ಅವರನ್ನೇ ಮುಖ್ಯಸ್ಥರನ್ನಾಗಿ ನೇಮಿಸಿತ್ತು, ಈ ಸಮಿತಿಯಲ್ಲಿ ಕಂದಾಯ, ಅರಣ್ಯ ಪಿಡಬ್ಲ್ಯೂಡಿ ಇನ್ನಿತರ ಹದಿನೈದು ಇಲಾಖೆಗಳ ಹಿರಿಯ ಅಧಿಕಾರಿಗಳೂ ಸದಸ್ಯರಾಗಿದ್ದರು.

ಇದಕ್ಕೂ ಹಿಂದೆ ಎ.ಟಿ. ರಾಮಸ್ವಾಮಿ ಸಮಿತಿಯು ಬೆಂಗಳೂರಿನಲ್ಲಿ ಸರ್ಕಾರಿ ಭೂಮಿ ಒತ್ತುವರಿ ಹಾಗೂ ಕಬಳಿಕೆ ಕುರಿತಂತೆ ಪರಿಶೀಲನೆ ನಡೆಸಿ ಒಂದು ವರದಿ ನೀಡಿತ್ತು. ಅಂದಾಜು 34 ಸಾವಿರ ಎಕರೆ ಕಬಳಿಕೆಯಾಗಿರುವುದಾಗಿಯೂ ರಾಮಸ್ವಾಮಿ ವರದಿ ಹೇಳಿತ್ತು.

ಬಹುಶಃ ಸರ್ಕಾರಕ್ಕೆ ಆ ವರದಿಯ ಸತ್ಯಾಂಶ ಇಷ್ಟವಾಗಲಿಲ್ಲವೆಂದು ಕಾಣುತ್ತದೆ. "ಬರಿ ಬೆಂಗಳೂರೇ ಯಾಕೆ, ಇಡೀ ರಾಜ್ಯದಲ್ಲೆಲ್ಲಾ ಎಲ್ಲೆಲ್ಲಿ ಸರ್ಕಾರಿ ಅರಣ್ಯ ಕಂದಾಯ ಭೂಮಿ ಕಬಳಿಕೆಯಾಗಿದೆ ಅನ್ನೋದನ್ನು ತನಿಖೆ ಮಾಡಿಸಿಬಿಡೋಣ" ಎಂದು ಘೋಷಿಸಿಬಿಟ್ಟರು.



ಈ ಬಾಲಸುಬ್ರಮಣ್ಯಂ ತಮಗೊಪ್ಪಿಸಿದ ಕೆಲಸವನ್ನು ಅಚ್ಚುಕಟ್ಟಾಗಿ ಮುಗಿಸಿ ಸರ್ಕಾರಕ್ಕೆ ವರದಿ ನೀಡಿದರು.

ಆದರೆ 2011ರ ಜೂನ್‌ನಲ್ಲಿ ವರದಿ ನೀಡಿದ್ದರೂ ಆ ವರದಿ ಕುರಿತಂತೆ ಇದುವರೆಗೂ ಯಾವ ರಾಜಕಾರಣಿಯೂ ಮಾತನಾಡುತ್ತಿಲ್ಲ.

ಒಂದು ಅಂದಾಜಿನ ಪ್ರಕಾರ ಕರ್ನಾಟಕದಲ್ಲಿ ಒಟ್ಟಾರೆಯಾಗಿ ಹನ್ನೊಂದು ಲಕ್ಷ ಎಕರೆಯಷ್ಟು ಸರ್ಕಾರಿ ಭೂಮಿ ಖಾಸಗಿಯವರಿಂದ ಕಬಳಿಕೆಯಾಗಿದೆ. ಇದರಲ್ಲಿ 9.35 ಲಕ್ಷ ಎಕರೆ ಕಂದಾಯ ಭೂಮಿ, 1.65 ಲಕ್ಷ ಎಕರೆ ಅರಣ್ಯ ಭೂಮಿಯಾಗಿದೆ. ಇದರ ಇಂದಿನ ಮಾರುಕಟ್ಟೆ ಮೌಲ್ಯವೇ ಎರಡು ಲಕ್ಷ ಕೋಟಿ ರೂಪಾಯಿಗೂ ಜಾಸ್ತಿ ಇದೆ.

ಹೀಗೆ ಸರ್ಕಾರಿ ಜಮೀನು ನುಂಗಿ ಕುಳಿತಿರುವವರಲ್ಲಿ ದಳ, ಕಾಂಗ್ರೆಸ್, ಬಿಜೆಪಿ ಎಂಬ ಭೇದವಿಲ್ಲದೆ ಎಲ್ಲಾ ರಾಜಕೀಯ ಪಕ್ಷಗಳ ಜನರೂ ಇದ್ದಾರೆ. ಶ್ರೀಮಂತ ಜಮೀನ್ದಾರರು, ಪ್ಲಾಂಟರ್‌ಗಳು, ಖಾಸಗಿ ಕಂಪನಿಗಳು, ರಿಯಲ್ ಎಸ್ಟೇಟ್ ಖದೀಮರೆಲ್ಲಾ ಖಂಡಿತಾ ಇರುತ್ತಾರೆ.

ಒಬ್ಬ ಬಾಲಸುಬ್ರಮಣ್ಯಂನಿಗಾಗಿ ಇವರಿಗೆಲ್ಲಾ ತೊಂದರೆ ನೀಡಲು, ಕಾನೂನು ಕ್ರಮ ವಹಿಸಲು ಸಾಧ್ಯವೇ?

ಅದರ ಬದಲಾಗಿ ಈ ಬಾಲಸುಬ್ರಮಣ್ಯಂ ಏನೇನು ತಪ್ಪು ಮಾಡಿದ್ದಾರೆಂದು ಅವರ ವಿರುದ್ಧವೇ ವಿಚಾರಣೆ ನಡೆಸುವುದು ಸೂಕ್ತ ಅನಿಸಿರಬೇಕು ನಮ್ಮ ಜನಪ್ರತಿನಿಧಿಗಳಿಗೆ!

ಬಾಲಸುಬ್ರಮಣ್ಯಂ ತರದವರನ್ನು ಹೀಗೆ ಸುಮ್ಮನೆ ಬಿಟ್ಟರೆ ಈ ನಾಡಿನಲ್ಲಿ ನ್ಯಾಯ, ಕಾನೂನು ಪಾಲನೆ ಉಳಿಯುತ್ತದೆಯೇ?

ಈತನನ್ನು 'ದೇಶದ್ರೋಹಿ' ಎಂದು ಸರ್ಕಾರವು ಘೋಷಿಸುವ ಬಗ್ಗೆ ಸಿದ್ದರಾಮಯ್ಯನವರ ಸರ್ಕಾರ ಒಂದು ವಿಶೇಷ ಅಧಿವೇಶನವನ್ನೇ ನಡೆಸಬಾರದೇಕೆ?



ಬನ್ನೇರಘಟ್ಟ ರಸ್ತೆಯಲ್ಲಿ 16 ಎಕರೆ ದೇವಾಲಯ ಸ್ವಾಹಾ!

ಮಠದ ಹೆಸರಲ್ಲಿ ಶೇಖರನ ರಿಯಲ್ ಎಸ್ಟೇಟ್



ಆದಿಚುಂಚನಗಿರಿ ಮಠವನ್ನೇ ಉದ್ದೇಶವಾಗಿಟ್ಟುಕೊಂಡು ಐಟಿ ದಾಳಿ ನಡೆದಿದ್ದರೆ ನಾಗಮಂಗಲದ ಚುಂಚನಗಿರಿ ಬೆಟ್ಟದ ಕಾಲಭೈರವನ ದೇವಾಲಯ, ಬೆಳ್ಳೂರು ಕ್ರಾಸ್‌ನಲ್ಲಿರುವ ಮೆಡಿಕಲ್ ಕಾಲೇಜ್, ಪೀಠಾಧಿಪತಿ ನಿರ್ಮಲನಾಥರ ವಾಸಸ್ಥಾನ, ವಿವಿಧ ಶಾಖಾ ಮಠಗಳು, ಅವುಗಳ ಸ್ವಾಮಿಗಳು ಮೇಲೆಲ್ಲ ಆದಾಯತೆರಿಗೆ ರೇಡು ನಡೆಯಬೇಕಿತ್ತು, ಮಠದ ಪರಮಾಪ್ತರು, ಟ್ರಸ್ಟಿಗಳ ಮೇಲೂ ದಾಳಿಯಾಗಬೇಕಿತ್ತು, ಆದರೆ ಇವ್ಯಾವುದನ್ನೂ ಮುಟ್ಟದ ಐಟಿ ಅಧಿಕಾರಿಗಳು ಕೇವಲ ಶೇಖರಸ್ವಾಮಿ ಉರ್ಫ್ ಪ್ರಕಾಶನಾಥನ ಖಾಸಗಿ ಅಡ್ಡೆಗಳನ್ನಷ್ಟೇ ಹೆಕ್ಕಿ ಹೆಕ್ಕಿ ತಪಾಸಣೆ ನಡೆಸುತ್ತಾರೆಂದರೆ ಬೇರೆಯದೇ ಕಾರಣವಿರಬೇಕಲ್ಲವೆ?

ಆದಿಚುಂಚನಗಿರಿ ಮಠವನ್ನೇ ಉದ್ದೇಶವಾಗಿಟ್ಟುಕೊಂಡು ಐಟಿ ದಾಳಿ ನಡೆದಿದ್ದರೆ ನಾಗಮಂಗಲದ ಚುಂಚನಗಿರಿ ಬೆಟ್ಟದ ಕಾಲಭೈರವನ ದೇವಾಲಯ, ಬೆಳ್ಳೂರು ಕ್ರಾಸ್‌ನಲ್ಲಿರುವ ಮೆಡಿಕಲ್ ಕಾಲೇಜ್, ಪೀಠಾಧಿಪತಿ ನಿರ್ಮಲನಾಥರ ವಾಸಸ್ಥಾನ, ವಿವಿಧ ಶಾಖಾ ಮಠಗಳು, ಅವುಗಳ ಸ್ವಾಮಿಗಳು ಮೇಲೆಲ್ಲ ಆದಾಯತೆರಿಗೆ ರೇಡು ನಡೆಯಬೇಕಿತ್ತು, ಮಠದ ಪರಮಾಪ್ತರು, ಟ್ರಸ್ಟಿಗಳ ಮೇಲೂ ದಾಳಿಯಾಗಬೇಕಿತ್ತು, ಆದರೆ ಇವ್ಯಾವುದನ್ನೂ ಮುಟ್ಟದ ಐಟಿ ಅಧಿಕಾರಿಗಳು ಕೇವಲ ಶೇಖರಸ್ವಾಮಿ ಉರ್ಫ್ ಪ್ರಕಾಶನಾಥನ ಖಾಸಗಿ ಅಡ್ಡೆಗಳನ್ನಷ್ಟೇ ಹೆಕ್ಕಿ ಹೆಕ್ಕಿ ತಪಾಸಣೆ ನಡೆಸುತ್ತಾರೆಂದರೆ ಬೇರೆಯದೇ ಕಾರಣವಿರಬೇಕಲ್ಲವೆ?

ಐಟಿ ದಾಳಿಯ ಹಕೀಕತ್ತು ಖುದ್ದು ಶೇಖರ್‌ಸ್ವಾಮಿಗೆ ಚೆನ್ನಾಗಿ ಗೊತ್ತಿತ್ತು, ಬದುಕಿದ್ದಷ್ಟೂ ದಿನ ಬಾಲಗಂಗಾಧರ ನಾಥರನ್ನು ಬ್ಲ್ಯಾಕ್‌ಮೇಲ್ ಮಾಡಿ ಅವರ ಮೂಲಕವೇ ಸಹಸ್ರಾರು ಕೋಟಿಯ ರಿಯಲ್ ಎಸ್ಟೇಟ್ ವ್ಯವಹಾರಕ್ಕೆ ಕೈಯಿಟ್ಟಿದ್ದ ಪ್ರಕಾಶನಾಥ ಬಾಲಗಂಗಾಧರನಾಥರ ಹೆಸರಲ್ಲೇ ಕಳ್ಳ ದಾಖಲೆಗಳನ್ನೂ ಮಾಡಿದ್ದ ಈ ಬಗ್ಗೆ ಐಟಿ ಅಧಿಕಾರಿಗಳ ಬಳಿ ನಿಖರ ದಾಖಲೆಗಳಿದ್ದವು. ಈ ಪೈಕಿ ಪ್ರಮುಖವಾದದ್ದು ಬನ್ನೇರಘಟ್ಟ ರಸ್ತೆಯ ಹುಳಿಮಾವು ಏರಿಯಾದಲ್ಲಿ ಬಾಲಗಂಗಾಧರನಾಥರನ್ನು ಮುಂದಿಟ್ಟುಕೊಂಡು ಶೇಖರ್ ನಡೆಸಿದ 500 ಕೋಟಿಯ ಭೂ ದರೋಡೆ!

ಅದು ಪುರಾತನ ರಾಮಲಿಂಗೇಶ್ವರ ದೇವಾಲಯವನ್ನೇ ಮಠದ ಹೆಸರಲ್ಲಿ ಕಬಳಿಸಿ ಆನಂತರ ಅದನ್ನು ತನ್ನ ಖಾಸಗಿ ಆಸ್ತಿಯನ್ನಾಗಿಸಿಕೊಂಡ ಶೇಖರನ ಹೈಟೆಕ್ ಭೂದಾಹಾಯಿತಿ. ಇವತ್ತು ಬನ್ನೇರಘಟ್ಟ ರಸ್ತೆಯ ಹುಳಿಮಾವು ಏರಿಯಾದ ಪುರಾತನ ರಾಮಲಿಂಗೇಶ್ವರ ದೇವಾಲಯವೇ ನಾಮಾವಶೇಷವಾಗಿ ಆ ಜಾಗದಲ್ಲಿ ಮೂರ್ನಾಲ್ಕು ಅಪಾರ್ಟ್‌ಮೆಂಟುಗಳೆದ್ದಿವೆ. ಅವೆಲ್ಲವೂ ಬಿಜಿಎಸ್ ಗ್ಲೋಬಲ್ ಸ್ಕೂಲ್, ಬಿಜಿಎಸ್ ನ್ಯಾಷನಲ್ ಪಬ್ಲಿಕ್ ಸ್ಕೂಲ್; ಇತ್ಯಾದಿ ಹೆಸರಲ್ಲಿ ಶೇಖರ್ ಕಟ್ಟಿಸುತ್ತಿರುವ ಡೊನೇಷನ್ ಅಡ್ಡೆಗಳು.

ಹುಳಿಮಾವು ದೇವಾಲಯ

ನಿನ್ನೆಮೊನ್ನೆಯ ತನಕ ಪ್ರವಾಸಿಗರು, ಭಕ್ತಾದಿಗಳಿಂದಲೇ ತುಂಬಿರುತ್ತಿದ್ದ ರಾಮಲಿಂಗೇಶ್ವರ ಗುಹಾಂತರ ದೇವಾಲಯವೆಂದರೆ ಅದಕ್ಕೊಂದು ಪೌರಾಣಿಕ ಪ್ರಾಮುಖ್ಯತೆಯಿತ್ತು. ಅಜಂತಾ, ಎಲ್ಲೋರಾ ಬಿಟ್ಟರೆ ಸರಿಸುಮಾರು ಎರಡೆಕರೆ ವಿಸ್ತಾರದ ದೈತ್ಯ ಗುಹೆ ಮತ್ತು ಅದರೊಳಗೇ ರಾಮಲಿಂಗೇಶ್ವರ ದೇವಾಲಯವಿದ್ದ ಹೆಗ್ಗಳಿಕೆಗೆ ಹುಳಿಮಾವು ಕಾರಣವಾಗಿತ್ತು. 2011ರ ಹೊತ್ತಿಗೆ ದೇವಸ್ಥಾನವನ್ನೇ ಆಕ್ರಮಿಸಿಕೊಂಡಂತೆ ಬೃಹತ್ ಅಪಾರ್ಟ್‌ಮೆಂಟುಗಳೇಳತೊಡಗಿದವು. ಪ್ರಾರಂಭದಲ್ಲಿ ಗುಹೆಯನ್ನೇ ಒತ್ತರಿಸಿ ಶುರುವಾದ ಕಾಂಪ್ಲೆಕ್ಸ್ ಮಾದರಿಯ ಒಂದು ಬಿಲ್ಡಿಂಗ್ 2013ರ ಹೊತ್ತಿಗೆ ಮೂರಾಯಿತು.

ಆ ಹೊತ್ತಿಗೆ ಗುಹಾಂತರ ರಾಮಲಿಂಗೇಶ್ವರ ದೇವಾಲಯದ ದೇಖರೇಕಿ ಮಾಡುತ್ತಿದ್ದವನು ಮರಿಯಪ್ಪಸ್ವಾಮಿ ಎಂಬ ಭಂಗಿ ಸ್ವಾಮೀಜಿ. ಒಂದಾನೊಂದು ಕಾಲಕ್ಕೆ ಲೋಕೋಪಯೋಗಿ ಇಲಾಖೆ ಗುತ್ತಿಗೆದಾರನಾಗಿದ್ದ



ಹಿಂದೆ ಹೀಗಿತ್ತು ರಾಮಲಿಂಗೇಶ್ವರ ದೇವಾಲಯ

ಒಕ್ಕಲಿಗ ಸಮುದಾಯದ ನಾಯಕರಿಗೆ 'ಲಂಕೇಶ್'ನ ಐದು ಪ್ರಶ್ನೆಗಳು





1. ಆದಾಯ ತೆರಿಗೆ ದಾಳಿ ನಡೆದದ್ದು ಆದಿಚುಂಚನಗಿರಿ ಮಠದ ಮೇಲಲ್ಲ, ಬದಲಾಗಿ ಶೇಖರ್ ಸ್ವಾಮಿಯ ಹಣಕಾಸಿನ ಅವ್ಯವಹಾರಗಳಿಗಾಗಿ ಎಂಬುದನ್ನು ಈಗಲಾದರೂ ಒಪ್ಪುತ್ತೀರಾ?
2. ಒಕ್ಕಲಿಗ ಸಮುದಾಯದ ಹಾಗೂ ಈ ನಾಡಿನ ಅನೇಕ ಜನರಿಂದ ದೇಣಿಗೆ ಪಡೆದು ಕಟ್ಟಿರುವ ಆದಿಚುಂಚನಗಿರಿ ಮಠ ಹಾಗೂ ಶಿಕ್ಷಣ ಸಂಸ್ಥೆಗಳು, ಆಸ್ಪತ್ರೆಗ ಪೈಕಿ ಈಗ ಅನೇಕವು ಶೇಖರ್ ಸ್ವಾಮಿ ಉರೂಫ್ ಪ್ರಕಾಶನ ಹತೋಟಿಗೆ ಹೋಗಿದೆ. ಇದು ಯಾಕಾಯಿತು? ಹೇಗಾಯಿತು? ಇದರ ಹಿಂದಿರುವ ಕಾರಣಗಳನ್ನು ಜನಾಂಗದ ಮುಖಂಡರು ಈಗಲಾದರೂ ಪತ್ತೆಹಚ್ಚುವರೆ?
3. ಶೇಖರ್ ಸ್ವಾಮಿ ಈಗ ಆದಿಚುಂಚನಗಿರಿ ಮಠಾಧೀಶನಲ್ಲ, ಆದರೂ ಮಠದ ಹೆಸರಿನಲ್ಲೇ ಮಠದ ಕಚೇರಿಯಲ್ಲೇ ಆತ ಕಳ್ಳ ದಂಧೆಗಳನ್ನು ನಡೆಸಲು ಯಾಕೆ ಅವಕಾಶ ಮಾಡಿಕೊಡಲಾಗುತ್ತಿದೆ? ಇದರಿಂದ ಯಾರಿಗೆ ಲಾಭವಾಗುತ್ತಿದೆ.?
4. ಜೆಡಿಎಸ್‌ನ ಎಚ್.ಡಿ. ಕುಮಾರಸ್ವಾಮಿ, ಕಾಂಗ್ರೆಸ್‌ನ ಡಿ.ಕೆ. ಶಿವಕುಮಾರ್ ಹಾಗೂ ಒಕ್ಕಲಿಗರ ಸಂಘದ ಮುಖಂಡರೆಲ್ಲಾ ಶೇಖರ್ ವಿರುದ್ಧ ನಡೆದ ಐಟಿ ದಾಳಿಯನ್ನು ಒಕ್ಕಲಿಗ ಮಠದ ಮೇಲೆ ನಡೆದ ದಾಳಿ ಎನ್ನುವಂತೆ ಯಾಕೆ ತಿರುಚುತ್ತಿದ್ದಾರೆ? ಇವರೇಕೆ ಶೇಖರ್‌ನನ್ನು ರಕ್ಷಿಸಲು ಯತ್ನಿಸುತ್ತಿದ್ದಾರೆ?
5. ಶೇಖರ್ ಅಲಿಯಾಸ್ ಪ್ರಕಾಶನಾಥನ ಬ್ಲಾಕ್‌ಮನಿ ದಂಧೆಯನ್ನು ಐಟಿ ಇಲಾಖೆ ಪ್ರಶ್ನಿಸಬಾರದೆ? 'ಲಂಕೇಶ್'ನಲ್ಲಿ ಪ್ರಕಟವಾಗುತ್ತಿರುವ ತನಿಖಾ ವರದಿ ಹಾಗೂ ದಾಖಲೆಗಳ ಬಗ್ಗೆ ಈ ಮುಖಂಡರು ಸೂಕ್ತ ಸಮಜಾಯಿಷಿ ನೀಡುವರೆ?

ಒಂದು ಬಹಿರಂಗ ಆಹ್ವಾನ

[illegible]

ನಿರ್ಮಲನಾಥರ ನಿಗೂಢ ಮೌನ



ನಿರ್ಮಲಾನಂದ ಸ್ವಾಮಿ

ಆದಿಚುಂಚನಗಿರಿ ಮಠದ ಮೇಲೆ ಐಟಿ ದಾಳಿ ನಡೆಯಿತೆಂದೂ ಅದು ಒಕ್ಕಲಿಗರ ದಮನ ಯತ್ನವೆಂದೂ ರಾಜ್ಯಾದ್ಯಂತ ಪ್ರತಿಭಟನೆ ನಡೆದದ್ದೇನೊ ಸರಿ. ಏಕೆಂದರೆ ಬೀದಿಗಿಳಿದ ಒಕ್ಕಲಿಗರಿಗೆ ಕೊನೆಗಾಲದಲ್ಲಿ ಬಾಲಗಂಗಾಧರನಾಥರು ಮಾಡಿ ಹೋದ ಅನಾಹುತದ ಅರಿವಿಲ್ಲ, ಅದನ್ನು ವಿವರಿಸಿ ಹೇಳಬೇಕಿದ್ದದ್ದು ಪೀಠಾಧಿಪತಿ ನಿರ್ಮಲನಾಥರ ಆದ್ಯ ಕರ್ತವ್ಯವಾಗಬೇಕಿತ್ತು, ಏಕೆಂದರೆ ಮಠದ ಅಧೀನಕ್ಕೊಳಪಡದ, ಪ್ರತ್ಯೇಕ ಟ್ರಸ್ಟಿಗೆ ಸೇರಿದ, ಮಠ ಅಥವಾ ಒಕ್ಕಲಿಗ ಸಮಾಜದ ನಿಯಂತ್ರಣಕ್ಕೇ ನಿಲುಕದ, ಒಕ್ಕಲಿಗರಿಗೆಂದು ಯಾವುದೇ ಮೀಸಲಾತಿ ರಿಯಾಯಿತಿಯಿಲ್ಲದ ದಂಧೆಕೋರ ಸುಲಿಗೆ ಸಾಮ್ರಾಜ್ಯವೊಂದನ್ನು ಒಕ್ಕಲಿಗರು ತಮಗೆ ಸೇರಿದ್ದೆಂದು ತಪ್ಪಾಗಿ ಗ್ರಹಿಸಿದರೆಂದರೆ ಅದನ್ನು ಸರಿಪಡಿಸಬೇಕಾದದ್ದು ಮಠದ ಹೊಸ ಪೀಠಾಧಿಪತಿ ನಿರ್ಮಲನಾಥರ ಜವಾಬ್ದಾರಿ ಮತ್ತು ಹೊಣೆಗಾರಿಕೆ ಕೂಡ.

ಆದರೆ ಎಲ್ಲಾ ಗೊತ್ತಿದ್ದೂ ನಿರ್ಮಲನಾಥರು ಬಾಯಿಬಿಡುತ್ತಿಲ್ಲ, ಮಠದ ಪೀಠಾಧಿಪತಿಯಾಗಿ ಬೇಡ ಕನಿಷ್ಠ ಓರ್ವ ಜವಾಬ್ದಾರಿಯುತ ವ್ಯಕ್ತಿಯಾಗಿಯಾದರೂ ಐಟಿ ದಾಳಿಗೂ ಮಠಕ್ಕೂ ಸಂಬಂಧವಿಲ್ಲ ಎಂಬುದನ್ನು ಸ್ಪಷ್ಟಪಡಿಸಬೇಕಿತ್ತು.

ಅಂಥಾ ನಿರ್ಮಲನಾಥರೇ ಎಲ್ಲಾ ಗೊತ್ತಿದ್ದೂ ಸುಮ್ಮನಿದ್ದಾರೆಂದರೆ ಅದಕ್ಕೊಂದು ಕಾರಣ ಇರಲೇಬೇಕು. ಒಂದೋ ನಡೆದ ಐಟಿ ದಾಳಿಯ ಹಿಂದೆ ನಿರ್ಮಲನಾಥರ ಕೈವಾಡ ಇರಬೇಕು. ಏಕೆಂದರೆ ಶೇಖರಸ್ವಾಮಿಯ ಕಪಿಮುಷ್ಠಿಯಿಂದ ಮಠವನ್ನು ಮುಕ್ತಗೊಳಿಸಬೇಕೆಂದರೆ ಆತನ ಬ್ಲಾಕ್‌ಮನಿ ಜಾಲದ ಬುಡಕ್ಕೆ ಪೆಟ್ಟು ಹಾಕಲೇಬೇಕು. ತನ್ಮೂಲಕ ಆತನ ಎಲ್ಲಾ ಕರಾಳ ದಂಧೆಗಳ ವಿವರ ಸರ್ಕಾರಕ್ಕೆ ಸಿಗುವಂತಾಗಬೇಕು.

ಇದು ಒಂದು ಸಾಧ್ಯತೆಯಾದರೆ ಮತ್ತೊಂದು ಖುದ್ದು ನಿರ್ಮಲನಾಥರೇ ಶೇಖರ್ ಸ್ವಾಮಿಯ ಕೈಗೊಂಬೆಯಾಗಿರಬೇಕು. ಅಂಥಾ ಬಾಲಗಂಗಾಧರನಾಥರನ್ನೇ ಬ್ಲಾಕ್‌ಮೇಲ್ ಮಾಡಿ ಸಾವಿರ ಕೋಟಿಯ ಸೊತ್ತು ಬರೆಸಿಕೊಂಡ ಶೇಖರನಿಗೆ ತನ್ನ ಕೈಗೊಂಬೆಯೊಬ್ಬನನ್ನು ತಂದು ಬಾಲಗಂಗಾಧರನಾಥರ ಉತ್ತರಾಧಿಕಾರಿ ಮಾಡುವುದು ಯಾವ ಮಹಾ?

ಸದ್ಯ ಆದಿಚುಂಚನಗಿರಿ ಸಂಸ್ಥಾನದ ಬಹುತೇಕ ಸ್ವಾಮಿಗಳು ಶೇಖರನ ವಿರುದ್ಧ ತಿರುಗಿ ಬಿದ್ದಿದ್ದಾರೆ. ಆತನಿಂದ ಮಠವನ್ನು ಮುಕ್ತಗೊಳಿಸುವ ಭೂಮಿಕೆಯೂ ಸದ್ದಿಲ್ಲದೆ ಸಜ್ಜಾಗುತ್ತಿದೆ. ಪ್ರಶ್ನೆಯೆಂದರೆ ಹೊಸ ಪೀಠಾಧಿಪತಿ ನಿರ್ಮಲನಾಥರು ಓರ್ವ ಜವಾಬ್ದಾರಿಯುತ ಸಂತನಂತೆ ವರ್ತಿಸುತ್ತಾರಾ ಅಥವಾ ಬಾಲಗಂಗಾಧರರಂತೆ ಶೇಖರನ ಕೈಗೊಂಬೆಯಾಗಿರುತ್ತಾರಾ ಎಂಬುದು.

ಅವೆಲ್ಲಾ ಐಟಿ ದಾಳಿಯ ಅಸಲಿಯತ್ತೆ ಹೇಳುವ ಮೂಲಕವೇ ಪ್ರಾರಂಭಿಸಬಹುದಲ್ಲವೇ?



ಸ್ವಾಮಿ ಎನ್ನಿಸಿಕೊಂಡು ರಾಮಲಿಂಗೇಶ್ವರ ...ಲಯದಲ್ಲಿ ಪೂಜೆ ಮಾಡಿಕೊಂಡಿದ್ದ ರಮಾನಂದ ...ಗೆ ಈತನೇ ಏಕೈಕ ಶಿಷ್ಯ. ರಮಾನಂದಸ್ವಾಮಿ ...ಷ್ಠಾಗಿ ಸತ್ತ ನಂತರ ಸ್ವಯಂಘೋಷಿತ ಸ್ವಾಮಿಯಾದ ...ಪ್ಪನಿಗೆ ಆ ದೇವಸ್ಥಾನವನ್ನು ಸ್ವಾಮಿ ...ರ್ಪಿತ ಎಂಬಂತೆ ವಹಿಸಿಕೊಟ್ಟಿದ್ದಕ್ಕೂ ...ವಿತ್ತು. ಸಿಕ್ಕಾಪಟ್ಟೆ ದುಡ್ಡಿದ್ದರೂ ...ಇಲ್ಲದ ಮರಿಯಪ್ಪನ ಪತ್ನಿಗೆ ...ಜಿಯ ಪ್ರಯತ್ನ ಮತ್ತು ಆಶೀ...ದ ಫಲವಾಗೇ ಸಂತಾನಪ್ರಾಪ್ತಿ ...ತ್ತಂತೆ!

...ಮುಂದೆ ಮರಿಯಪ್ಪನೇ ಜಿಲ್ಲಾಧಿಕಾರಿ ...ಗೆ ಓಡಾಡಿ 1985ರಲ್ಲಿ 9.31 ... 1987ರಲ್ಲಿ ಮತ್ತೆ 6 ಎಕರೆಯಂತೆ ... 15.31 ಎಕರೆ ಸರ್ಕಾರಿ ...ಮಿಯನ್ನು ದೇವಸ್ಥಾನಕ್ಕೆಂದು ಮಂಜೂರು ...ಸಿಕೊಂಡ. 1990ರಲ್ಲಿ ದೇವಸ್ಥಾನಕ್ಕೆ ನೀರಿನ



ಶ್ರೀನಿವಾಸ್ ಪ್ರಸಾದ್

ಷರತ್ತು ವಿಧಿಸಿತ್ತು. ಆ ಪ್ರಕಾರ ದೇವಾಲಯಕ್ಕೆಂದು ಮಂಜೂರಾದ ಭೂಮಿಯನ್ನು ದೇವಾಲಯದ ಕಾರಣಕ್ಕಲ್ಲದೆ ಬೇರೆ ಉದ್ದೇಶಕ್ಕೆ ಬಳಸುವಂತಿಲ್ಲ, ಅದನ್ನು ಯಾರಿಗೂ ಪರಭಾರೆ ಮಾಡುವಂತಿಲ್ಲ, ಇದಲ್ಲದೆ ಗುತ್ತಿಗೆಗಾಗಲಿ, ದೇಣಿಗೆಯಾಗಿ ಆಗಲಿ ಕೊಡುವುದಕ್ಕೂ ಅವಕಾಶವಿಲ್ಲ, ಹಾಗೊಮ್ಮೆ ಕೊಡಬೇಕೆಂದಾದಲ್ಲಿ ಸರ್ಕಾರದಿಂದ ಅಂದರೆ ಮಂಜೂರಿ ನಿಯಂತ್ರಣಾಧಿಕಾರಿಯಿಂದ ಅನುಮತಿ ಪಡೆಯತಕ್ಕದ್ದು. ಇದು ಸಾರ್ವಜನಿಕ ಸೊತ್ತಾಗಿದ್ದು ಧಾರ್ಮಿಕ-ದತ್ತಿ ಇಲಾಖೆಯ ಆಯುಕ್ತರ ಸುಪರ್ದಿಗೊಳಪಟ್ಟಿರತಕ್ಕದ್ದು. ಸರ್ಕಾರ ವಿಧಿಸಿದ ಇಂಥ ಯಾವುದೇ ಷರತ್ತು, ನಿಬಂಧನೆಯನ್ನು ಉಲ್ಲಂಘಿಸಿದ ಪಕ್ಷದಲ್ಲಿ ಯಾವ ಪರಿಹಾರವನ್ನೂ ನೀಡದೆ ಜಮೀನನ್ನು ಮುಟ್ಟುಗೋಲು ಹಾಕಿಕೊಳ್ಳಲು ಭೂಮಂಜೂರಾತಿ ನಿಯಮ 1969ರ 9ರ ಅಡಿಯಲ್ಲಿ ಸರ್ಕಾರಕ್ಕೆ ಅಧಿಕಾರವಿರುತ್ತದೆ.


ಇದು ಭೂಮಿ ಮಂಜೂರು ಮಾಡುವಾಗಲೇ ಬೆಂಗಳೂರು ನಗರ ಜಿಲ್ಲಾ ವಿಶೇಷ ಜಿಲ್ಲಾಧಿಕಾರಿಗಳು ವಿಧಿಸಿದ ಕಾನೂನುಬದ್ಧ ನಿಬಂಧನೆಯಾಗಿತ್ತು. ವಿಚಿತ್ರವೆಂಬಂತೆ ರಾಮಲಿಂಗೇಶ್ವರ ಸ್ವಾಮಿ ದೇವಾಲಯದ ಹೆಸರಲ್ಲಿದ್ದ ಪಹಣಿ, ಮ್ಯೂಟೇಶನ್‌ಗಳೆಲ್ಲ ಬದಲಾಗಿ ಆ ಜಾಗದಲ್ಲಿ ಆದಿಚುಂಚನಗಿರಿ ಮಹಾಸಂಸ್ಥಾನ ಮಠ ಎಂದಿತ್ತು.


ನಕಲಿ ಅನುಮತಿ

ತಲೆ ಕೆಡಿಸಿಕೊಂಡ ಗ್ರಾಮಸ್ಥರಿಗೆ ಗೊತ್ತಾದ ಮತ್ತೂ ಒಂದು ಸಂಗತಿಯೆಂದರೆ 1997ರ ಏಪ್ರಿಲ್ ಎರಡರಂದು ಕಂದಾಯ ಸಚಿವಾಲಯದ ಅಧೀನ ಕಾರ್ಯದರ್ಶಿಗಳೇ ರಾಮಲಿಂಗೇಶ್ವರ ಸ್ವಾಮಿ


ನ್ಯಾಯ ಕೇಳಿದವನ ಮೇಲೆ ...

ಹುಳಿಮಾವು ಗ್ರಾಮಸ್ಥರ ಪರವಾಗಿ ರಾಮಲಿಂಗೇಶ್ವರ ದೇವಾಲಯವನ್ನು ಉಳಿಸಿಕೊಳ್ಳಲು ಇಷ್ಟರವರೆಗೆ ಹೋರಾಡಿಕೊಂಡು ಬಂದವರು ಮಾಜಿ ಬಿಎಂಪಿ ಕೌನ್ಸಿಲರ್ ಲಕ್ಷ್ಮೀನಾರಾಯಣ. ಮೂಲತಃ ಕಾಂಗ್ರೆಸ್ ಕಾರ್ಯಕರ್ತ ಮತ್ತು ಡಿಕೆ ಬೆಂಬಲಿಗ. ಆದರೆ ಇದ್ದಕ್ಕಿದ್ದಂತೆ 2012ರ ಮಾರ್ಚ್ ತಿಂಗಳಲ್ಲಿ ಹುಳಿಮಾವು ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಬಲರಾಮೇಗೌಡರು ಅವರ ಮೇಲೊಂದು ರೌಡಿಷೀಟ್ ತೆರೆಯುತ್ತಾರೆ.





ಎಂ. ಕೃಷ್ಣಪ್ಪ




...ಶ್ ರೆಡ್ಡಿ

ಯಾವುದೇ ದೂರಿಲ್ಲದೆ, ಯಾವ ಗಲಾಟೆ, ಹೊಡೆದಾಟ, ಜಗಳ ಏನೊಂದೂ ನಡೆಯದೆ ಏಕಾಏಕಿ ತನ್ನ ವಿರುದ್ಧ ರೌಡಿಷೀಟ್ ತೆರೆದ ಹುಳಿಮಾವು ಪೊಲೀಸರ ದೌರ್ಜನ್ಯದ ವಿರುದ್ಧ ಆಗ ಎಸಿಪಿಯಾಗಿದ್ದ ರಾಚಪ್ಪನವರಿಗೆ ಲಕ್ಷ್ಮೀನಾರಾಯಣ್ ದೂರು ಸಲ್ಲಿಸುತ್ತಾರೆ. ಅದಕ್ಕೆ ಎಸಿಪಿ ರಾಚಪ್ಪ 'ಏನಪ್ಪಾ ಮಾಡೋದು? ನಿನ್ನ ಮೇಲೆ ರೌಡಿಷೀಟ್ ಮಾಡದೇ ಇದ್ರೆ ಮೇಲಿನವ್ರು ನಮ್ಮನ್ನ ಎತ್ತಂಗಡಿ ಮಾಡ್ತಾರೆ. ಸ್ವಾಮೀಜಿನ ಎದುರಾಕ್ಕೊಂಡು ನಾವು, ನೀನು ಇರೋಕ್ಕಾಗುತ್ತಾ?' ಎಂದು ಗೋಳಿಡುತ್ತಾರೆ. ಆಗ ಡಿಸಿಪಿಯಾಗಿದ್ದ ಹರ್ಷರದ್ದೂ ಇದೇ ಅಸಹಾಯಕತೆ.

ಅನ್ಯಾಯವಾಗಿ ತನ್ನ ಮೇಲೆ ರೌಡಿಷೀಟ್ ತೆರೆದ ಪೊಲೀಸರ ದೌರ್ಜನ್ಯದ ವಿರುದ್ಧ ರಾಜ್ಯಪಾಲರಿಂದ ಹಿಡಿದು ಬಿಜೆಪಿ ಸರ್ಕಾರದ ಗೃಹಮಂತ್ರಿ ಅಶೋಕ್ ತನಕ ನ್ಯಾಯ ಯಾಚಿಸಿದ ಮಾಜಿ ಕಾರ್ಪೋರೇಟರ್ ಲಕ್ಷ್ಮೀನಾರಾಯಣ್‌ಗೆ ಅಂತಿಮವಾಗಿ ಗೊತ್ತಾಗಿದ್ದೇನೆಂದರೆ; ಇಷ್ಟೆಲ್ಲಕ್ಕೂ ಶೇಖರ್ ಸ್ವಾಮಿಯೇ ಕಾರಣನಾಗಿದ್ದ. ಖುದ್ದು ಗೃಹಮಂತ್ರಿ ಅಶೋಕರೇ ಶೇಖರ್‌ಸ್ವಾಮಿಯ ಸಂತೃಪ್ತಿಗಾಗಿ ಲಕ್ಷ್ಮೀನಾರಾಯಣ್‌ರನ್ನು ಮಟ್ಟಹಾಕಲು ಆದೇಶಿಸಿದ್ದರು. ಬೆಂಗಳೂರು ದಕ್ಷಿಣದ ಬಿಜೆಪಿ ಶಾಸಕ ಎಂ. ಕೃಷ್ಣಪ್ಪ ಮತ್ತು ಬೊಮ್ಮನಹಳ್ಳಿ ಶಾಸಕ ಸತೀಶ್ ರೆಡ್ಡಿ ಕೂಡ ಶೇಖರ್ ಸ್ವಾಮಿಯ ಭೂ ಕಬಳಿಕೆ ರಕ್ಷಣೆಗೆ ನಿಂತು ಲಕ್ಷ್ಮೀನಾರಾಯಣ್‌ರ ಮೇಲೆ ದೌರ್ಜನ್ಯಕ್ಕಿಳಿದಿದ್ದರು.

ತನ್ನ ಲ್ಯಾಂಡ್ ಗ್ರ್ಯಾಬಿಂಗ್ ದಂಧೆಗಾಗಿ ಸರ್ಕಾರ, ಪೊಲೀಸ್, ಶಾಸಕರು, ಮಂತ್ರಿ ಎಲ್ಲರನ್ನೂ ಹೇಗೆ ಮಠದ ಹೆಸರಲ್ಲಿ ಶೇಖರ್‌ಸ್ವಾಮಿ ಭೂ ಬಿಡುತ್ತಾನೆಂಬುದಕ್ಕೆ ಇದೊಂದು ಉದಾಹರಣೆಯಷ್ಟೆ.





ದೇವಾಲಯದ 15.31 ಎಕರೆ ಭೂಮಿಯನ್ನು ಅಂತರರಾಷ್ಟ್ರೀಯ ಧ್ಯಾನ ಕೇಂದ್ರ ಮತ್ತು ಆಯುರ್ವೇದ ಚಿಕಿತ್ಸಾಲಯ ನಿರ್ಮಿಸುವ ಉದ್ದೇಶದಿಂದ ಆದಿಚುಂಚನಗಿರಿ ಮಠಕ್ಕೆ ಹಸ್ತಾಂತರಿಸಲು ಅನುಮತಿ ನೀಡಿದ್ದರು. ಹೀಗೆ ಕಂದಾಯ ಸಚಿವಾಲಯ ನೀಡಿದ ಅನುಮತಿಯನ್ನು ಆಧರಿಸಿಯೇ ಆಗ ಬೆಂಗಳೂರು ನಗರ ವಿಶೇಷ ಜಿಲ್ಲಾಧಿಕಾರಿಯಾಗಿದ್ದ ವೀರಭದ್ರಯ್ಯ ರಾಮಲಿಂಗೇಶ್ವರ ದೇವಸ್ಥಾನ ಟ್ರಸ್ಟ್ ಹೆಸರಿಗಿದ್ದ 15.31 ಎಕರೆ ಭೂಮಿಯನ್ನು ಮಠದ ಹೆಸರಿಗೆ ವರ್ಗಾಯಿಸುವಂತೆ ಆದೇಶಿಸಿದ್ದರು.

ಮೇಲುನೋಟಕ್ಕೆ ಕಾನೂನುಬದ್ಧವಾಗೇ ರಾಮಲಿಂಗೇಶ್ವರ ದೇವಾಲಯದ 15.31 ಎಕರೆ ಸೊತ್ತು ಆದಿಚುಂಚನಗಿರಿ ಮಠಕ್ಕೆ ಹಸ್ತಾಂತರವಾದಂತೆಯೇ ಇತ್ತು. ಸುಬ್ಬಾರೆಡ್ಡಿ, ಮರಿಯಪ್ಪ ಸ್ವಾಮಿ ಮುಂತಾದವರೆಲ್ಲ ಸೇರಿಕೊಂಡೇ ರಾಮಲಿಂಗೇಶ್ವರಸ್ವಾಮಿ ಸೇವಾ ಪ್ರತಿಷ್ಠಾನ ಎಂಬ ಟ್ರಸ್ಟ್ ರಚಿಸಿಕೊಂಡಂತೆ, ಸದರಿ ಟ್ರಸ್ಟ್ ತನಗೆ ಸರ್ಕಾರದಿಂದ ಮಂಜೂರಾದ ಭೂಮಿಯನ್ನು ಸರ್ಕಾರದ ಅನುಮತಿ ಮೇರೆಗೇ ಆದಿಚುಂಚನಗಿರಿ

..12

...ಟಿ ದಾಳಿ ...ಖರ್ ಸ್ವಾಮಿ ...ಸಲಿ ಕಥೆ

...ಗ-2

...ಲವಿಲ್ಲವೆಂದು ಕೊಳವೆಬಾವಿ ಕೊರೆಯಲೆಂದು ...ರ ಮತ್ತೆ 10 ಗುಂಟೆ ಮಂಜೂರು ಮಾಡಿತು. ... ದೇವಸ್ಥಾನದ ಒಟ್ಟು ಆಸ್ತಿ ಹೆಚ್ಚು ಕಮ್ಮಿ 16 ...ರಷ್ಟಾಗಿತ್ತು.

...010ರವರೆಗೆ ಪ್ರವಾಸಿಗರು, ಭಕ್ತಾದಿಗಳಿಂದ ...ಸಲ್ಪಡುತ್ತಿದ್ದ ದೇವಾಲಯದ ಸುತ್ತ ಇದ್ದಕ್ಕಿದ್ದಂತೆ ...ಕ್ಸ್, ಅಪಾರ್ಟ್‌ಮೆಂಟ್ ಶೈಲಿಯ ಬಿಲ್ಡಿಂಗ್ ...ರ್ಣವಾಗತೊಡಗಿದ್ದನ್ನು ಕಂಡ ಹುಳಿಮಾವು ...ಸ್ಥರಿಗೆ ಅಚ್ಚರಿಯಾಗಿತ್ತು. ಏಕಾಏಕಿ ರಾಮಲಿಂಗೇಶ್ವರ ...ಲಯವನ್ನು ಆದಿಚುಂಚನಗಿರಿ ಮಠದವರು ...ಸಿದ್ದಾರೆಂದೂ ಗುಹೆ, ದೇವಾಲಯಗಳನ್ನೆಲ್ಲ ಒತ್ತರಿಸಿ ...ರುವ ಕಟ್ಟಡಗಳೆಲ್ಲ ಶೇಖರ್‌ಸ್ವಾಮಿಯ ಐಷಾರಾಮೀ ...ಮು, ರೆಸಿಡೆನ್ಷಿಯಲ್ ಸ್ಕೂಲುಗಳ ಕಟ್ಟಡಗಳೆಂದೂ ...ಗಿತ್ತು.



ವೀರಭದ್ರಯ್ಯ

...ಯಲ್ ಎಸ್ಟೇಟ್ ಮಾರು...ರಾಲ್ಲಿ ಬನ್ನೇರಘಟ್ಟದ ...ಮಾವು ಏರಿಯಾದಲ್ಲಿ ತಲಾ ... ಐದು ಸಾವಿರಕ್ಕೂ ಅಧಿಕ ...ವಿತ್ತು. ಎಕರೆ ಭೂಮಿಗೆ ...ಯೆಂದರೂ 25 ಕೋಟಿ ...ಯಿಗಳ ದರವಿತ್ತು. 15 ...ಯೆಂದರೆ ಅದೇ ಸರಿಸುಮಾರು ... ಕೋಟಿ ರೂಪಾಯಿಗಳ ...ಗುತ್ತದೆ. ಇನ್ನು ಏಳುತ್ತಿದ್ದ ...ಕ್, ಕಟ್ಟಡಗಳನ್ನು ಲೆಕ್ಕಹಾಕಿದರೆ ಇಡೀ ಪ್ರಾಜೆಕ್ಟಿನ ... ಮೊತ್ತವೇ 500 ಕೋಟಿಯಷ್ಟಾಗುತ್ತದೆ. ಹುಳಿಮಾವು ...ಸ್ಥರ ಸೊತ್ತಾದ, ಪೌರಾಣಿಕ ಹಿನ್ನೆಲೆಯ, ದೇಶದಲ್ಲೇ ...ಕೆ ಅತೀ ದೊಡ್ಡ ಗುಹಾಂತರ ದೇವಾಲಯದ ...ಸರಿಗೆ ಏಕಾಏಕಿ ಕಾಂಪೌಂಡು ನಿರ್ಮಿಸಿದ್ದೂ ಅಲ್ಲದೆ ...ಬಿಲ್ಡಿಂಗುಗಳನ್ನೇಳಿಸುತ್ತಿರುವ ಆದಿಚುಂಚನಗಿರಿ ಮಠಕ್ಕೆ ...ಸುವವನಾಗಲಿ, ಅದರ ಭೂಮಿಯನ್ನಾಗಲಿ ಯಾರು...ಗೂ ಮಾರುವುದೇ ಅಸಾಧ್ಯವಾಗಿತ್ತು.

...ದರೆ ಸರ್ಕಾರ 15.31 ಎಕರೆ ಭೂಮಿಯನ್ನು ...ಗಕ್ಕೆಂದು ಮಂಜೂರು ಮಾಡುವಾಗಲೇ ವಿಧಿಬದ್ಧ

ನಾಲ್ಕು ಪೆಟ್ಟಿಗೆ ಚಿನ್ನ, ಕಪಾಟು ತುಂಬ ಅಗ್ರಿಮೆಂಟ್, ಮೊಬೈಲ್‌ನಲ್ಲಿ ಅಪ್ಸರೆಯರು!

ಐಟಿ ಅಧಿಕಾರಿಗಳ ತಂಡ ವಿಜಯನಗರದ ಶಾಖಾ ಮಠದತನಕ ಶೇಖರಸ್ವಾಮಿಯನ್ನು ಬೆನ್ನಟ್ಟಿ ಬರುವುದಕ್ಕೂ ಮತ್ತೊಂದು ಕಾರಣವಿದೆ:

ಜುಲೈ 18 ರ ಬೆಳಗ್ಗೆ ಮೊದಲು ಕುಂಬಳಗೋಡಿನ ಬಿಜಿಎಸ್ ಗ್ಲೋಬಲ್ ಇನ್ಸ್‌ಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್ ಕಾಲೇಜಿಗೆ ಐಟಿ ಅಧಿಕಾರಿಗಳು ನುಗ್ಗಿದ್ದೇ ಅಲ್ಲಿದ್ದ ಶೇಖರಸ್ವಾಮಿ ಎದ್ದೂ ಬಿದ್ದವನೇ ವಿಜಯನಗರದ ಶಾಖಾ ಮಠಕ್ಕೆ ಪರಾರಿಯಾಗಿದ್ದಾನೆ. ಮಠದ ಮೇಲೆ ರೇಡಾಗುವುದಿಲ್ಲ ಎಂಬ ಆತನ ನಂಬಿಕೆ ಕೆಲವೇ ಕ್ಷಣದಲ್ಲಿ ಹುಸಿಯಾಗಿದೆ.

ಶೇಖರನನ್ನು ಬೆನ್ನಟ್ಟಿ ಬಂದ ಐಟಿ ಅಧಿಕಾರಿಗಳ ತಂಡ ನೇರವಾಗಿ ಬಿಜಿಎಸ್ ಟ್ರಸ್ಟ್‌ನ ಕೋಣೆ ಹೊಕ್ಕು ಮ್ಯಾನೇಜರ್ ಶಿವರಾಮನನ್ನು ಸುತ್ತುವರಿದಿದೆ. ಆತ 'ತಿಜೋರಿಯ ಕೀ ಗೊಂಚಲು ತನ್ನ ಬಳಿಯಿಲ್ಲ, ಅದೆಲ್ಲಾ ಶೇಖರ್‌ಸ್ವಾಮಿಯ ವಶದಲ್ಲೇ ಇದೆ' ಎಂದು ಥರಗುಡುತ್ತಿದ್ದ. ಅದೇ ಹೊತ್ತಿಗೆ ಮತ್ತೊಂದು ತಂಡ ಶೇಖರನನ್ನು ಸುತ್ತುವರಿದು ಮೊದಲು ಆತನ ದುಬಾರಿಯ ಸೆಲ್ ಫೋನನ್ನು ಕಿತ್ತುಕೊಂಡಿದೆ. ಏನೇ ಮಾಡಿದರೂ ತಿಜೋರಿಗಳ ಕೀ ತನ್ನ ಬಳಿಯಿಲ್ಲ ಎಂದು ಶೇಖರ್ ಹಟಕ್ಕೆ ಬಿದ್ದಿದ್ದ.

ಮೂರು ಗಂಟೆಗಳ ತನಕ ಕೀ ಕೊಡದೇ ಐಟಿ ಅಧಿಕಾರಿಗಳನ್ನು ಸತಾಯಿಸುತ್ತಿದ್ದನು ಮತ್ತೊಂದೆಡೆ ಜನರನ್ನು ಕರೆಸಿ ಗಲಾಟೆ ಮಾಡಿಸುವಂತೆ ತನ್ನ ಪರಮಾಪ್ತ ಓರಾಟಗಾರನೊಬ್ಬನಿಗೆ ದುಂಬಾಲುಬಿದ್ದಿದ್ದ.

ಎಷ್ಟೇ ಕಾಡಿಬೇಡಿದರೂ ಮಠದ ನಿಜ ಭಕ್ತಾದಿಗಳ್ಯಾರೂ ಪ್ರತಿಭಟನೆಗಿಳಿಯಲೇ ಇಲ್ಲ. ಬಂದವರೆಲ್ಲ ಶೇಖರ್‌ಸ್ವಾಮಿಯ ಬಾಡಿಗೆ ಬಂಟರು ಮತ್ತು ರಿಯಲ್ ಎಸ್ಟೇಟ್ ಬ್ರೋಕರುಗಳು. ಏಕೆಂದರೆ ಶೇಖರ್ ಸ್ವಾಮಿಯ ಅಸಲೀ ಮುಖ ಮಠದ ಭಕ್ತರಿಗೆ ಯಾವತ್ತೋ ಗೊತ್ತಾಗಿತ್ತು. ಒಂದಷ್ಟು ಮಂದಿ ಶೇಖರನ ಬಂಟರು ಮಠದ ಬಾಗಿಲಲ್ಲಿ ಸೇರಿ ಗಲಾಟೆಗೆ ಯತ್ನಿಸಿದರಾದರೂ ಅವರನ್ನೆಲ್ಲ ಡಿಸಿಪಿ ರಾಜಪ್ಪರೇ ನಿಂತು ಹೊಡೆದೋಡಿಸಿಬಿಟ್ಟರು.

ಇಷ್ಟಾಗುತ್ತಿದ್ದಂತೆ ಐಟಿ ಅಧಿಕಾರಿಗಳಿಗೆ ತಲೆ ಕೆಟ್ಟಿದೆ. ಶೇಖರನ ಸೆಲ್ ಫೋನಿನ ವೀಡಿಯೋ ಗ್ಯಾಲರಿ, ಫೋಟೋ ಆಲ್ಬಮ್ಮುಗಳನ್ನೆಲ್ಲ ಒಂದೊಂದಾಗಿ ಬಿಡಿಸಿ ನೋಡುತ್ತಿದ್ದ ಐಟಿ ಅಧಿಕಾರಿಯೊಬ್ಬನಿಗೆ ಎಂಥಾ ಆಘಾತ ಕಾದಿತ್ತೆಂದರೆ ಶೇಖರನ ಮೊಬೈಲಿನಲ್ಲಿ ಎಂತೆಂಥದೋ ದೇವರ ಚಿತ್ರಗಳು, ನೀಲಿ ನಕ್ಷೆಗಳು, ದಿಗಂಬರ ರಹಸ್ಯಗಳು, ಬಿಡಿಬಿಡಿ ದೇವಕನ್ನಿಕೆಯರು, ಯಕ್ಷಿಣಿಯರು, ರಂಭೆ, ಮೇನಕೆ, ತಿಲೋತ್ತಮೆಯರನ್ನೂ ಮೀರಿಸುವ ಅಪ್ಸರೆಯರ ಚಿತ್ರಗಳಿದ್ದವು. ಮೂರು ಗಂಟೆಗಳಾದರೂ ತಿಜೋರಿಯ ಕೀ ಕೊಡದಿದ್ದ ಪ್ರಕಾಶನಾಥನಿಗೆ ಸರಿಯಾದ ಮದ್ದೆಂದರೆ ಆತನ ಸೆಲ್ ಫೋನು ಎಂಬುದನ್ನು ಅರ್ಥಮಾಡಿಕೊಂಡ ಹಿರಿಯ ಐಟಿ ಅಧಿಕಾರಿಯೊಬ್ಬ ಹೊರಗೆ ನಿಂತಿದ್ದ ಮಠದ ಮ್ಯಾನೇಜರ್‌ಗಳನ್ನು ಕರೆದಿದ್ದೇ 'ನೋಡ್ರೀ, ನೀವು ಇವನನ್ನ ಸ್ವಾಮೀಜಿ ಅಂತೀರಿ ತಾನೆ? ಇವನ ಹಣೆಬರಹ ನೋಡಿ....!' ಎಂದಿದ್ದೇ ಆತನ ಮೊಬೈಲಿನಲ್ಲಿದ್ದ ವೀಡಿಯೋ ತುಣುಕೊಂದನ್ನು ತೋರಿಸಲಾರಂಭಿಸಿದ್ದೇ ಶೇಖರ್‌ಸ್ವಾಮಿ ಗೊಳೋ ಎಂದು ಅಳುತ್ತ ಆ ಅಧಿಕಾರಿಯ ಕಾಲಿಗೆ ಬಿದ್ದು ಗೋಳಾಡಲಾರಂಭಿಸಿದ.

ಅದನ್ನೇ ಕಾದಿದ್ದ ಆ ಐಟಿ ಅಧಿಕಾರಿ 'ಇದೆಲ್ಲ ಲೀಕ್ ಆಗಬಾರ್ದು ಎಂದರೆ ಮೊದಲು ತಿಜೋರಿ ಕೀ ಕೊಡು' ಎನ್ನುತ್ತಿದ್ದಂತೆ ಶೇಖರ್‌ಸ್ವಾಮಿ ತನ್ನ ಡ್ರೈವರ್ ಮೂಲಕ ಕೀ ತರಿಸಿದ್ದಾನೆ. ಕೀ ತೆರೆದು ನೋಡಿದರೆ ಅಲ್ಲಿದ್ದದ್ದು, ನಾಲ್ಕು ಪೆಟ್ಟಿಗೆಗಳ ತುಂಬ ಚಿನ್ನ, ಒಂದು ಪೆಟ್ಟಿಗೆ ತುಂಬ ಜೋಡಿಸಿಟ್ಟಿದ್ದ ಖಾಲಿ ಛಾಪಾ ಕಾಗದ. ಖಾಲಿ ಚೆಕ್ಕುಗಳು, ವಿವಿಧ ಜಮೀನುಗಳ ಅಗ್ರಿಮೆಂಟ್, ಚಿತ್ರವಿಚಿತ್ರ ಫೋಟೋಗಳು, ಪ್ರಮುಖ ಸ್ವಾಮೀಜಿಯೊಬ್ಬನಿಗೆ ಸಂಬಂಧಪಟ್ಟ ವೀಡಿಯೋ- ಫೋಟೋಗಳು ಮತ್ತು ಸ್ಟ್ರಾಂಗ್ ಬಾಕ್ಸ್ ಒಂದರ ತುಂಬ ಜೋಡಿಸಿಟ್ಟಿದ್ದ ಪ್ಲಾಟಿನಂ ಆಭರಣಗಳ ರಾಶಿ!

ಇದೆಲ್ಲವೂ ಈಗ ಐಟಿ ಅಧಿಕಾರಿಗಳ ಕೈ ಸೇರಿದೆ.

ಆ ಮೂಲಕ ಇಡೀ ಆದಿಚುಂಚನಗಿರಿ ಸಾಮ್ರಾಜ್ಯದಲ್ಲಿ ಕಳೆದೈದು ದಶಕದಿಂದ ನಡೆದ ಭಾನಗಡಿ, ಲೇವಾದೇವಿ, ಬ್ಲ್ಯಾಕ್‌ಮೇಲ್, ರಿಯಲ್ ಎಸ್ಟೇಟ್, ಬ್ಲ್ಯಾಕ್ ಮನಿ, ಬಡ್ಡಿ ದಂಧೆ ಎಲ್ಲವೂ ಐಟಿ ಅಧಿಕಾರಿಗಳೆದುರು ದಾಖಲೆ ಸಮೇತ ರಾಶಿ ಬಿದ್ದಿದೆ.

ಶೇಖರ್ ಎಂಬ ಸೋಕಾಲ್ಡ್ ಪ್ರಕಾಶನಾಥ ಯಾರೇ ಸ್ವಾಮೀಜಿ ಹೇಗೆ ಒಳಗಿನ ... ಅವರ ಆಧ್ಯಾತ್ಮಿಕ ದೌರ್ಬಲ್ಯವನ್ನೂ ಬ್ಲ್ಯಾಕ್‌ಮೇಲ್ ಮಾಡಿ ಕೋಟಿಯ ವಿವರಗಳನ್ನೂ ಬಯಲಾಗುತ್ತಿದೆ. ಅದು ನೂರಾರು ಕೋಟಿ ಮತ್ತು ಭಯಾನಕ ವೃತ್ತಾಂತವನ್ನೇ ತೆರೆದಿಡಲಿದೆ.

ಶೇಖರ್ ಸ್ವಾಮಿ ಅಸಲಿ ಕಥೆ...

[illegible] ಸಾರ್ವಜನಿಕ [illegible]

1) [illegible]

2) [illegible]

1969ರ ನಿಯಮ 9ರ ಅಡಿಯಲ್ಲಿ ಕ್ರಮ ಕೈಗೊಳ್ಳಲಾಗುವುದು.

(ಸಹಿ)
ವಿಶೇಷ ಜಿಲ್ಲಾಧಿಕಾರಿಗಳು
ಬೆಂಗಳೂರು ಜಿಲ್ಲೆ.

15-1-1997

ಆರ್‌ಡಿ 234 ಎಲ್‌ಜಿಬಿ 96

ಮಾನ್ಯ ಶ್ರೀ [illegible]ಗೌಡರವರೆ,

ವಿಷಯ: ಆನೇಕಲ್ ತಾಲ್ಲೂಕು, ಅತ್ತಿಬೆಲೆ ಹೋಬಳಿ, ಹೆಬ್ಬಗೋಡಿ ಗ್ರಾಮದ ಸರ್ವೆ ನಂ. 60:14, 60:9, 60:10, 60:11 ರಲ್ಲಿ ಭೂ ಪರಿವರ್ತನೆ ಬಗ್ಗೆ ಕರ್ನಾಟಕ ಮೇಲ್ಮನವಿ ಪ್ರಾಧಿಕಾರದ ಅಪೀಲು ನಂ.214, 215 ಮತ್ತು 216:96 ರ ದಿ.28-6-96ರ ಆದೇಶದ ವಿರುದ್ಧ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸುವ ಬಗ್ಗೆ.

ಉಲ್ಲೇಖ: ಪತ್ರ ಸಂಖ್ಯೆ: ಎಲ್‌ಎನ್‌ಎ–ಎಸ್‌ಆರ್(ಎ)64–95-96, 65 – 95-96, ದಿನಾಂಕ 5-9-96 ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ಇವರಿಂದ.

ಮಠಕ್ಕೆ ವರ್ಗಾಯಿಸಿದಂತೆ, ಅದನ್ನು ವಿಶೇಷ ಜಿಲ್ಲಾಧಿಕಾರಿಗಳು ಸಮ್ಮತಿಸಿ ಪಹಣಿ ಮ್ಯುಟೇಶನ್ನುಗಳನ್ನು ಮಠದ ಹೆಸರಿಗೆ ಮಾಡಿಕೊಟ್ಟಂತಿತ್ತು.

ಈ ರೀತಿ ಮಠದ ಹೆಸರಿಗೆ ದೇವಾಲಯದ ಆಸ್ತಿ ವರ್ಗಾಯಿಸುವಲ್ಲಿ ದಿನಾಂಕ 2.4.1997ರಂದು ಸರ್ಕಾರ ನೀಡಿದ ಅನುಮತಿಯ ಆದೇಶ ಸಂಖ್ಯೆಯನ್ನು **RD 234 LGB 96** ಎಂದು ನಮೂದಿಸಲಾಗಿತ್ತು. ಇದರರ್ಥ ಜೆ.ಹೆಚ್. ಪಟೇಲ್ ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ ಸಚಿವ ಸಂಪುಟವೇ ನಿರ್ಣಯ ಕೈಗೊಂಡು ಅದನ್ನು ರಾಜ್ಯಪಾಲರು ಅನುಮೋದಿಸಿ ತದನಂತರ ಕಂದಾಯ ಸಚಿವಾಲಯ ಈ ಬಗ್ಗೆ ಆದೇಶ ಹೊರಡಿಸಿದ್ದರ ಮೇರೆಗೆ ಆಗ ಬೆಂಗಳೂರು ನಗರದ ವಿಶೇಷ ಜಿಲ್ಲಾಧಿಕಾರಿಗಳೂ, ಸದ್ಯ ಮಧುಗಿರಿಗೆ ಜೆಡಿಎಸ್ ಅಭ್ಯರ್ಥಿಯೂ ಆಗಿದ್ದ ವೀರಭದ್ರಯ್ಯ ರಾಮಲಿಂಗೇಶ್ವರ ದೇವಸ್ಥಾನವೂ ಸೇರಿದಂತೆ ಕಂದಾಯ ಸಚಿವಾಲಯದ ಆದೇಶಕ್ಕೂ, ಹುಳಿಮಾವಿನ ರಾಮಲಿಂಗೇಶ್ವರ ದೇವಾಲಯಕ್ಕೂ ಏನೇನೂ ಸಂಬಂಧವಿರಲಿಲ್ಲ. **RD234 LGB96** ಎಂಬ ಆದೇಶ ಸಂಖ್ಯೆಯು ವಾಸ್ತವವಾಗಿ ಆನೇಕಲ್ ತಾಲ್ಲೂಕು ಅತ್ತಿಬೆಲೆ ಹೋಬಳಿಯ ಹೆಬ್ಬಗೋಡಿ ಗ್ರಾಮದ ಖಾಸಗಿ ವ್ಯಕ್ತಿಗಳ ಸೊತ್ತಿನ ಭೂಪರಿವರ್ತನೆಗೆ ಸಂಬಂಧಿಸಿದ್ದಾಗಿತ್ತು!

ಆನೇಕಲ್ ತಾಲ್ಲೂಕು ಹೆಬ್ಬಗೋಡಿಯ ವಿವಿಧ ಸರ್ವೇ ನಂಬರುಗಳ ಭೂಮಿಯನ್ನು ಭೂಪರಿವರ್ತನೆ ಮಾಡುವಂತೆ ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣ (ಕೆಎಟಿ) ನೀಡಿದ ಆದೇಶದ ವಿರುದ್ಧ ಹೈಕೋರ್ಟಿನಲ್ಲಿ ಮೇಲ್ಮನವಿ ಸಲ್ಲಿಸಲು ಕೈಗೊಳ್ಳಬೇಕಾದ ಕ್ರಮಗಳ ಕುರಿತು ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಬೆಂಗಳೂರು ನಗರ ಜಿಲ್ಲೆಯ ವಿಶೇಷ ಜಿಲ್ಲಾಧಿಕಾರಿಗಳಿಗೆ ನೀಡಿದ ಆದೇಶದ ಸಂಖ್ಯೆಯೇ **RD234 LGB96** ಆಗಿತ್ತು.

ಸೃಷ್ಟಿಸಿ, ಅದನ್ನೇ ಬಳಸಿ ಆಸ್ತಿ ಲಪಟಾಯಿಸಲಾಗಿತ್ತು.

ಇದಕ್ಕೂ ಮುನ್ನ ರಾಮಲಿಂಗೇಶ್ವರ ಸೇವಾ ಪ್ರತಿಷ್ಠಾನವೆಂಬ ನಕಲಿ ಟ್ರಸ್ಟ್, ಆ ಟ್ರಸ್ಟ್ ಮಠಕ್ಕೆ ವಹಿಸಿಕೊಡುವ ನಿರ್ಣಯ; ಎಲ್ಲವೂ ನಕಲಿ ದಾಖಲೆಗಳಾಗಿದ್ದುವು. ಹಾಗೊಮ್ಮೆ ಟ್ರಸ್ಟ್ ಅಸ್ತಿತ್ವದಲ್ಲಿದ್ದಿದ್ದರೆ ಅದರ ಜನರಲ್ ಬಾಡಿ ಮೀಟಿಂಗ್ ನಡೆಸಿ ಅಲ್ಲಿ ನಿರ್ಣಯ ಅಂಗೀಕರಿಸಬೇಕಿತ್ತು. ವಾಸ್ತವವಾಗಿ ಅಸ್ತಿತ್ವದಲ್ಲಿದ್ದದ್ದು ರಾಮಲಿಂಗೇಶ್ವರ ಸ್ವಾಮಿ ದೇವಾಲಯದ ಜೀರ್ಣೋದ್ಧಾರ ಟ್ರಸ್ಟ್. ಅದಕ್ಕೆ ಅಧ್ಯಕ್ಷರಾಗಿದ್ದದ್ದು ಆರ್.ಶ್ರೀನಿವಾಸಮೂರ್ತಿ ಎಂಬ ಹುಳಿಮಾವಿನ ಹಿರೀಕ ಮತ್ತು ಟ್ರಸ್ಟ್ ಕಾರ್ಯದರ್ಶಿಯಾಗಿದ್ದದ್ದು ಮಾಜಿ ಕಾರ್ಪೊರೇಟರ್ ಲಕ್ಷ್ಮೀನಾರಾಯಣ.

ನರಸತ್ತ ಸರ್ಕಾರ

ಅಸಲಿ ಟ್ರಸ್ಟ್ ಅನ್ನೇ ಧಿಕ್ಕರಿಸಿ, ಹುಳಿಮಾವು ನಾಮಾವಶೇಷವಾಗಿದೆ. ಅಲ್ಲೀಗ ಶೇಖರ್ ಅಲಿಯಾಸ್ ಪ್ರಕಾಶನಾಥನ ಕಾಂಪ್ಲೆಕ್ಸ್, ಅಪಾರ್ಟ್‌ಮೆಂಟುಗಳು ಮತ್ತು ಕಾನ್ವೆಂಟ್ ಕಟ್ಟಡಗಳು ತಲೆ ಎತ್ತುತ್ತಿವೆ. ಕಳ್ಳ ದಾಖಲೆಗಳನ್ನೇ ಬಳಸಿಕೊಂಡು ಶೇಖರ್‌ಸ್ವಾಮಿ ಆ ಜಾಗದಲ್ಲಿ ಇಂಗ್ಲಿಷ್ ಕಾನ್ವೆಂಟ್ ರೆಸಿಡೆನ್ಷಿಯಲ್ ಸ್ಕೂಲುಗಳನ್ನು ನಡೆಸಲು ಸರ್ಕಾರದಿಂದ ಪರವಾನಗಿಯನ್ನೂ ಪಡೆದಿದ್ದಾನೆ. ಇನ್ನೂ ದುರಂತವೆಂದರೆ ಪೌರಾಣಿಕ ಪ್ರಸಿದ್ಧಿಯ ರಾಮಲಿಂಗೇಶ್ವರ ದೇವಸ್ಥಾನದ ಹೆಬ್ಬಾಗಿಲಿಗೇ ಬೀಗ ಜಡಿದು ದೇವಾಲಯವನ್ನೇ ಮುಚ್ಚಿದ್ದಾರೆ. ನಡೆಯುತ್ತಿದ್ದ ಪೂಜೆ ಪುನಸ್ಕಾರಗಳೆಲ್ಲ ಯಾವುದೋ ಕಾಲಕ್ಕೆ ಸ್ಥಗಿತಗೊಂಡಿವೆ.

ದೇವಾಲಯವನ್ನೇ ಕಬಳಿಸಿ, ಅದರ ಸೊತ್ತನ್ನು ಆಕ್ರಮಿಸಿ, ಅಲ್ಲೀಗ ಡೊನೇಷನ್ ಅಡ್ಡೆಗಳನ್ನು ಕಟ್ಟಿಸುತ್ತಿರುವ ಶೇಖರ್‌ಸ್ವಾಮಿಗೆ ಕನಿಷ್ಠ ದೇವರ ಬಗ್ಗೆಯೂ ಭಕ್ತಿಯಿದ್ದಂತಿಲ್ಲ. ಹಾಳಾಗಲಿ ಮಠದ ಬಗ್ಗೆಯಾದರೂ ನಿಯತ್ತಿದ್ದರೆ ಅದನ್ನು

4) [illegible] ಉತ್ತರಹಳ್ಳಿ [illegible] ಸಾರ್ವಜನಿಕ [illegible] ಆಧ್ಯಾತ್ಮಿಕ [illegible]

5) [illegible]

ವಿಶೇಷ ಜಿಲ್ಲಾಧಿಕಾರಿಗಳು
ಬೆಂಗಳೂರು ಜಿಲ್ಲೆ. 16/4

ಪ್ರತಿಯನ್ನು:—

[illegible] ಹುಳಿಮಾವು [illegible]
3 / 96-97
ಬೆಂಗಳೂರು ಪ್ರಾಂತ ಜಿಲ್ಲಾಧಿಕಾರಿಗಳ ನಂ. LND. SR. [illegible] 96-97 ದಿ.16-4-97 [illegible]
[illegible] 89 [illegible] 15-31 [illegible]
ಸ.ನಂ. 89. ವಿಸ್ತೀರ್ಣ 15-31
[illegible]

ಶೇಖರನ ಭೂ ಡಕಾಯಿತಿಯ ದಾಖಲೆಗಳು .....

ಆದರ 15.31 ಎಕರೆ ಭೂಮಿಯನ್ನು ಆದಿಚುಂಚನಗಿರಿ ಮಠದ ಹೆಸರಿಗೆ ವರ್ಗಾಯಿಸಿದ್ದಾರೆ!

ಆದರೆ ಈಗ ಪತ್ರಿಕೆಗೆ ಸಿಕ್ಕ ದಾಖಲೆಗಳು ಮತ್ತು ಮಾಹಿತಿಯೇ ಇದೆಂಥಾ ಮೋಸವಾಗಿತ್ತೆಂಬುದನ್ನು ಬಯಲಿಗೆಳೆಯುತ್ತವೆ.

ಡೀಸಿಯ ಕರಾಮತ್ತು

ವಾಸ್ತವವಾಗಿ 1997ರ ಏಪ್ರಿಲ್ 3ರಂದು ವಿಶೇಷ ಜಿಲ್ಲಾಧಿಕಾರಿಗಳು ರಾಮಲಿಂಗೇಶ್ವರ ದೇವಸ್ಥಾನವನ್ನು ಆದಿಚುಂಚನಗಿರಿ ಮಠದ ಸುಪರ್ದಿಗೆ ಒಳಪಡಿಸಿದ್ದೇ ಮಹಾಮೋಸವಾಗಿತ್ತು. **RD 234 LGB 96**ನಂಬರಿನ

ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ ವಿಶೇಷ ಜಿಲ್ಲಾಧಿಕಾರಿಯಾಗಿದ್ದ ವೀರಭದ್ರಯ್ಯನವರನ್ನು ಬಳಸಿಕೊಂಡು, ಕಂದಾಯ ಸಚಿವಾಲಯದ ಬೇರೆ ಯಾವುದೋ ಆದೇಶದ ಸಂಖ್ಯೆಯನ್ನು ನಮೂದಿಸಿಕೊಂಡು, ಆ ಸಂಖ್ಯೆಯ ಆದೇಶದ ಫೋರ್ಜರಿ ದಾಖಲೆಯೊಂದನ್ನು ಸೃಷ್ಟಿಸಿ ಅದನ್ನೇ ಕಂದಾಯ ಸಚಿವಾಲಯದ ಆದೇಶವೆಂಬಂತೆ ಯಾಮಾರಿಸಿ ಇಡೀ ರಾಮಲಿಂಗೇಶ್ವರ ದೇವಾಲಯದ ಸೊತ್ತನ್ನು ಕಬಳಿಸಲಾಗಿತ್ತು. ಈ ಬಗ್ಗೆ ಸಚಿವಸಂಪುಟದ ನಿರ್ಣಯವಾಗಲಿ, ಕಂದಾಯ ಸಚಿವಾಲಯದ ಆದೇಶವಾಗಲಿ ಇರಲೇ ಇಲ್ಲ. ವಾಸ್ತವವಾಗಿ ಕಂದಾಯ ಸಚಿವಾಲಯದ ಗಮನಕ್ಕೇ ಇದ್ಯಾವುದೂ ಬಂದಿರಲಿಲ್ಲ. ಅಂದರೆ ವಿಶೇಷ ಜಿಲ್ಲಾಧಿಕಾರಿ ವೀರಭದ್ರಯ್ಯ ಮತ್ತು ಶೇಖರ್‌ಸ್ವಾಮಿ ಸೇರಿಕೊಂಡೇ ನಕಲಿ ದಾಖಲೆ ಗ್ರಾಮಸ್ಥರನ್ನೇ ಯಾಮಾರಿಸಿ, ಆಗ ಬಿಜೆಪಿ ಸಂಸದರಾಗಿದ್ದ ಶ್ರೀನಿವಾಸ್‌ರನ್ನು ಮುಂದಿಟ್ಟುಕೊಂಡು ನೂರಾರು ರೌಡಿಗಳನ್ನು ಸೇರಿಸಿ ಕಾಂಪೌಂಡ್ ಗೋಡೆ ಕಟ್ಟಿಸಿದ ಶೇಖರ್‌ಸ್ವಾಮಿ ಇದಕ್ಕೆಂದು ಮಠದ ಹೆಸರನ್ನೂ, ಆಗ ಬದುಕಿದ್ದ ಆದಿಚುಂಚನಗಿರಿ ಬಾಲಗಂಗಾಧರನಾಥರನ್ನೂ ಬಳಸಿಕೊಂಡಿದ್ದ. ವಿಕಟವೆಂದರೆ ಮಠದ ಹೆಸರಲ್ಲಿ ಕಬಳಿಸಿದ ಇಡೀ ರಾಮಲಿಂಗೇಶ್ವರ ದೇವಾಲಯ ಮತ್ತದರ 15.31 ಎಕರೆ ಸೊತ್ತು 2011ರಲ್ಲಿ ಬಜಿಎಸ್ ಗ್ಲೋಬಲ್ ಟ್ರಸ್ಟ್ ಪಾಲಾಗುವ ಮೂಲಕ ಖದೀಮ ಶೇಖರನ ಖಾಸಗಿ ಸೊತ್ತಾಗಿ ಪರಿವರ್ತನೆಗೊಂಡಿತ್ತು.

ಈಗ ರಾಮಲಿಂಗೇಶ್ವರ ಗುಹಾಂತರ ದೇವಾಲಯವೇ ಮಠದ ಸೊತ್ತಾಗಿ ಉಳಿಸಬೇಕಿತ್ತಲ್ಲವೇ? ಅಲ್ಲೊಂದು ಶಾಖಾ ಮಠವಾದರೂ ಬರುತ್ತಿತ್ತು. ಒಕ್ಕಲಿಗ ಜನಾಂಗಕ್ಕೆ ಬಳಕೆಯಾಗುತ್ತಿತ್ತು.

ಒಕ್ಕಲಿಗರು, ಮಠ, ಸ್ವಾಮಿ, ದೇವರು, ಗ್ರಾಮಸ್ಥರು, ಸರ್ಕಾರ, ಭಕ್ತಾದಿಗಳು, ಕಾನೂನು, ಕೋರ್ಟು ಎಲ್ಲರನ್ನೂ ಒಟ್ಟೊಟ್ಟಿಗೇ ಯಾಮಾರಿಸಿ ನೂರಾರು ಕೋಟಿಯ ಸೊತ್ತನ್ನು ತನ್ನ ಡೊನೇಷನ್ ದಂಧೆಗಾಗಿ ಕಬಳಿಸಿದ ಶೇಖರ್‌ಸ್ವಾಮಿ ಉರ್ಫ್ ಪ್ರಕಾಶ್‌ನಾಥನಿಗೆ ಯಾವ ಶಿಕ್ಷೆಯೂ ಸಾಧ್ಯವಿಲ್ಲವೇ? ಸರ್ಕಾರ, ಕೋರ್ಟು, ಕಾನೂನುಗಳೆಲ್ಲ ಆತನ ಮುಂದೆ ದುರ್ಬಲರೆ?

(ಮುಂದಿನ ವಾರಕ್ಕೆ

ಜಾತಿಮುಕ್ತ ಸಂಬಂಧ ವೇದಿಕೆಯ ಮೊದಲ ವಾರ್ಷಿಕ ಸಮಾವೇಶ

ಉಡುಪಿಯಲ್ಲಿ ಜಾತಿಮುಕ್ತ ಸಂಬಂಧ ವೇದಿಕೆ ಅಸ್ತಿತ್ವಕ್ಕೆ ಬಂದು ಆಗಸ್ಟ್ 12ಕ್ಕೆ ಪೂರ್ತಿ ಒಂದು ವರ್ಷವಾಗಲಿದೆ. ಅಮಾನವೀಯ ಜಾತಿ ಪದ್ಧತಿಯನ್ನು ತಿರಸ್ಕರಿಸಿ, ಪರಸ್ಪರ ಪ್ರೇಮಿಸಿ ವಿವಾಹವಾಗುವ ಮತ್ತು ವಿವಾಹವಾಗಬಯಸುವ ಪ್ರಗತಿಪರರ ವೇದಿಕೆ ಇದು. ಅಂತರ್‌ಜಾತಿ/ಮತ ವಿವಾಹಿತರ ಮತ್ತು ವಿವಾಹವಾಗಲಿಚ್ಛಿಸುವವರ ಕಷ್ಟಸುಖಗಳಿಗೆ ಸ್ಪಂದಿಸುವುದು ಈ ವೇದಿಕೆಯ ಮೂಲ ಉದ್ದೇಶ.

ಕಳೆದ ವರ್ಷ 12.08.2012ರಂದು ಉಡುಪಿಯ ಎಂ.ಜಿ.ಎಂ. ಕಾಲೇಜಿನಲ್ಲಿ ಸ್ಥಾಪನಾ ಸಮಾವೇಶ ನಡೆದಾಗ ಇನ್ನೂರಕ್ಕೂ ಹೆಚ್ಚು ಜಾತಿ ಮುಕ್ತ ಬಂಧುಗಳು ಭಾಗವಹಿಸಿದ್ದರು. ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಗಳ ಜನರಲ್ಲದೆ, ಕೇರಳದ ತಲಶ್ಶೇರಿ, ಶಿವಮೊಗ್ಗ, ಬೆಂಗಳೂರು, ಚಿಕ್ಕಮಗಳೂರು, ಮೈಸೂರು, ತೀರ್ಥಹಳ್ಳಿ, ದಾವಣಗೆರೆ, ಸಾಗರಗಳಿಂದ ಜಾತಿಮುಕ್ತ ಬಂಧುಗಳು ಬಂದು ಸಮಾವೇಶದ ಯಶಸ್ಸಿಗೆ ಕಾರಣರಾಗಿದ್ದರು. ಸ್ವತಃ ಅಂತರ್‌ಜಾತಿ ವಿವಾಹಿತರಾಗಿರುವ ಪ್ರೊ. ರವಿವರ್ಮ ಕುಮಾರ್ ಆಶಯ ಭಾಷಣ ಮಾಡಿದ್ದರು. ಪ್ರೊ. ಹೆಚ್.ಎಲ್.ಕೇಶವಮೂರ್ತಿ ಸಮಾರೋಪ ಭಾಷಣ ಮಾಡಿದ್ದರು. ಕೋಮು ಸೌಹಾರ್ದ ವೇದಿಕೆಯ ಕಾರ್ಯದರ್ಶಿ ಕೆ.ಎಲ್. ಅಶೋಕ್ ಮುಖ್ಯ ಅತಿಥಿ ಆಗಿದ್ದರು.

ನಂತರ 20.12.2012ರಂದು ಡಾ. ಯು.ಆರ್. ಅನಂತಮೂರ್ತಿಯವರು 'ಭಾರತದಲ್ಲಿ ಜಾತಿ ಬಿಟ್ಟು ಬದುಕಲು ಸಾಧ್ಯವೇ?' ವಿಷಯದ ಬಗ್ಗೆ ಭಾಷಣ ಮಾಡಿದ್ದರು.

27.1.2013 ಮಡೆಸ್ನಾನ, ಪಂಕ್ತಿಭೇದದ ಬಗ್ಗೆ ಮುಕ್ತ ಸಂವಾದ ನಡೆದಿತ್ತು.

14.04.2013ರಂದು ಆನಂದ ಪಟವರ್ಧನ್ ನಿರ್ದೇಶನದ 'ಜೈ ಭೀಮ್ ಕಾಮ್ರೇಡ್' ಸಿನಿಮಾ ಪ್ರದರ್ಶನ ಮತ್ತು ಆ ಬಗ್ಗೆ ಚರ್ಚೆ ನಡೆಯಿತು.

ಹೀಗೆ ವರ್ಷಪೂರ್ತಿ ಕಾರ್ಯಕ್ರಮ ಹಮ್ಮಿಕೊಂಡಿದ್ದ ವೇದಿಕೆ ಈಗ ತನ್ನ ಮೊದಲ ವರ್ಷದ ಸಮಾವೇಶವನ್ನು ಆಗಸ್ಟ್ 18ರಂದು ಉಡುಪಿಯ ಎಂಜಿಎಂ ಕಾಲೇಜಿನ ನೂತನ ರವೀಂದ್ರ ಮಂಟಪದಲ್ಲಿ ಆಯೋಜಿಸುವ ತಯಾರಿ ನಡೆಸುತ್ತಿದೆ. ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಗಳ ಜಾತಿ ಮುಕ್ತ ಬಂಧುಗಳಲ್ಲದೆ, ಕರ್ನಾಟಕದ ಎಲ್ಲಾ ಭಾಗಗಳಲ್ಲಿರುವ 'ಸಮಾನ ಮನಸ್ಕರು' ಈ ವಾರ್ಷಿಕ ಸಮಾವೇಶದಲ್ಲಿ ಭಾಗವಹಿಸಬೇಕೆಂಬುದು ವೇದಿಕೆಯ ಸದಸ್ಯರೆಲ್ಲರ ಹಂಬಲ. ಜಾತ್ಯತೀತ ಸಮಾಜ ಸ್ಥಾಪನೆಗಾಗಿ ತುಡಿಯುವ ಬಂಧುಗಳಿಗೆಲ್ಲ ಇದು ಮುಕ್ತ ಆಹ್ವಾನ. ಆಗಸ್ಟ್ 18ರಂದು ಉಡುಪಿಗೆ ಬನ್ನಿ. ನಮ್ಮ ಹಿಂದಿನ ವರ್ಷದ ನಡೆಯನ್ನು ವಿಮರ್ಶಿಸೋಣ. ನಮ್ಮ ಮುಂದಿನ ವರ್ಷಗಳ ನಡೆಯನ್ನು ಚರ್ಚಿಸೋಣ, ಜಾತಿ, ಮತಗಳ ಎಲ್ಲೆ ಮೀರಿ ಚಿಂತಿಸೋಣ, ಬದುಕೋಣ.

- ಡಾ. ಹಯವದನ ಮುಡುಸಗ್ರಿ
ಸಂಚಾಲಕರು

ಸಂಪಾದಕರೊಂದಿಗೆ ಒಂದು ತಕರಾರು

...ವನ್ನು ಬರೆಯಲು ಕೂತಾಗ ಟಿವಿ ಚಾನೆಲ್ ...ದಲ್ಲಿ ಪತ್ನಿಯನ್ನು ಹೊಡೆದು ಕೊಂದ ಪತಿ ಎಂಬ ... ಬರುತ್ತಿದೆ. ಹೊಡೆದು ಕೊಂದದ್ದರಿಂದ ಮಾತ್ರ ... ಸುದ್ದಿಯಾಗಿದೆ ಎಂಬುದು ನಮಗೆ ಗೊತ್ತು, ಗಂಡ ...ತಿಗೆ ಹೊಡೆಯುವುದು ಸುದ್ದಿ ಹೇಗಾದೀತು? ಅದು ... ಕುಡಿದಷ್ಟು, ಊಟ ಮಾಡಿದಷ್ಟು ಇನ್ನೂ ...ಬೇಕೆಂದರೆ ಉಸಿರಾಡಿದಷ್ಟು ಸಹಜವಾದ ಸುದ್ದಿ ...ಊ ಹೌದು. 'ಗಂಡ ತಾನೇ ಹೊಡೆದದ್ದು?' ಎಂಬಷ್ಟು ...ದು. ಇನ್ನು, ಗಂಡಿನ ಅಹಂಕಾರದ ಸೂಕ್ಷ್ಮ ಅಭಿವ್ಯಕ್ತಿಯ ...ನಾರು ರೂಪಗಳನ್ನು ಅನುಭವಿಸದ ಒಬ್ಬಳೇ ಒಬ್ಬ... ಈ ಭೂಮಿಯ ಮೇಲೆ ಇರಲಿಕ್ಕಿಲ್ಲ. ಆದರೂ ...ಬ್ಬಳು ತನ್ನ ಗಂಡನನ್ನು 'ಡಾಮಿನೇಟ್' ಮಾಡಿದರೆ ... ಬಹಳ ದೊಡ್ಡ ವಿಚಾರವಾಗುವುದು ಹೊಸದೇನಲ್ಲ. ...ಮನೆಯಲ್ಲಿ ಅಡುಗೆ ಮಾಡುವ ಗಂಡಸರ ಕುರಿತು ... ನಿಯತಕಾಲಿಕಗಳಲ್ಲಿ ಅದೆಷ್ಟು ಸಾವಿರ ವ್ಯಂಗ್ಯಚಿತ್ರಗಳು, ...ಕುಗಳು' ಬಂದುಹೋಗಿವೆಯೋ ಗೊತ್ತಿಲ್ಲ. ಆದರೂ ... ಮತ್ತೆ ಮತ್ತೆ ಬರುತ್ತಲೇ ಇವೆ. ಈ ರೀತಿ ಅವುಗಳು ...ರಾವರ್ತನೆಯಾಗುತ್ತಿರುವುದಕ್ಕೆ ಬೇರೇನೂ ಕಾರಣವಿಲ್ಲ. ...ಸಮಾಜದಲ್ಲಿ ಪ್ರಧಾನವಾದ, ಅತ್ಯಂತ ಪ್ರಧಾನವಾದ ...ಷ ಮೇಲಾಳ್ವಿಕೆಯು ತನ್ನತನವನ್ನು ಸಮರ್ಥಿಸಿಕೊಳ್ಳ... ...ಸುವ ಹೆಣ್ಣನ್ನು ಸಹಿಸುವುದಿಲ್ಲ ಮತ್ತು ನಮ್ಮ ಮಾಧ್ಯಮ ... ಪುರುಷಪರವಾದ ಪೂರ್ವಗ್ರಹದಿಂದ ಹೊರತಾಗಿಲ್ಲ.

ಆದರೆ ಗೌರಿ 'ಲಂಕೇಶ್' ಪತ್ರಿಕೆಯು ಪತ್ನಿ ಪೀಡಿತ ...ಷರ ಕಥೆಯನ್ನು ಧಾರಾವಾಹಿಯಾಗಿ ಪ್ರಕಟಿಸ...ರಟಿರುವುದು ಆಶ್ಚರ್ಯವನ್ನೂ, ಆಘಾತವನ್ನೂ ...ಡಿಸಿದೆ. ಸದಾ ದಮನಿತರ ಪರ ನಿಲುವನ್ನು ತಾಳುತ್ತಾ ...ರುವ ಮತ್ತು ಸಾಮಾಜಿಕ ಜವಾಬ್ದಾರಿಯೊಂದಿಗೆ ...ನಿರ್ವಹಿಸುತ್ತಿರುವ ಪತ್ರಿಕೆಯಲ್ಲಿ ಇದು ಹೇಗೆ ...ವಾಯಿತು? ಮಹಿಳೆಯರು ಪಿತೃ ಪ್ರಧಾನ ...ಲ್ಯಗಳನ್ನು ಹೊಂದಿರುವುದು ಆಶ್ಚರ್ಯವನ್ನೇನೂ ...ವುದಿಲ್ಲವಾದರೂ ರಾಜಲಕ್ಷ್ಮಿ ಅಂಕಲಗಿಯಂತಹವರು ...ನ್ನು ಬರೆಯಲು ಹೊರಟಿದ್ದು ಏಕೆ? ಇದು ಖಂಡಿತಾ ...ಗಳ ಒಟ್ಟಾರೆ ಮೌಲ್ಯಪ್ರಜ್ಞೆಯಲ್ಲೇ ದೊಡ್ಡ ಬದಲಾವಣೆ ...ರುವುದನ್ನೇನೂ ತೋರುವುದಿಲ್ಲವಾದರೂ, ಬಿಡಿ ...ನೆಗಳ (ಅವು ಅದೆಷ್ಟೋ ಸಂಖ್ಯೆಯಲ್ಲಿವೆ ಎಂದು ... ಅಂಶಗಳಿಂದ ಸಾಧಿಸಬಹುದಾದರೂ) ಅನುಭವವನ್ನು ...ತ್ರಿಕಗೊಳಿಸಲು ಹೊರಡುವಾಗ ಕಳೆದುಕೊಂಡ ...ರವಾದ ಸಾಮಾಜಿಕ ಎಚ್ಚರದ ಸ್ಥಿತಿಯನ್ನಂತೂ ...ಸುತ್ತದೆ.

...ಸಮಾಜದಲ್ಲಿ ಒಂದು ಮೌಲ್ಯವಾಗಿ ಐತಿಹಾಸಿಕವಾಗಿ ...ತವಾಗಿರುವ ಒಂದು ಶೋಷಣೆಗೆ ನೂರಾರು ...ಯಾಮಗಳಿರುತ್ತವೆ. ಅದು ಸಾಮಾಜಿಕವಾಗಿ, ಆರ್ಥಿಕವಾಗಿ, ...ಸ್ಕೃತಿಕವಾಗಿ, ಭಾಷೆಯಲ್ಲಿ, ಉಡುಗೆಯಲ್ಲಿ, ಸಾರ್ವಜನಿಕ ...ಯಗಳಲ್ಲಿ ಭಾಗಿಯಾಗುವಲ್ಲಿ, ರಾಜಕೀಯವಾಗಿ ಎಲ್ಲಾ ... ಅದರ ಪ್ರತಿಬಿಂಬ ಹಲವು ರೂಪಗಳಲ್ಲಿರುತ್ತದೆ. ...ಷೆಯಲ್ಲಿ ಅಥವಾ ಸಾಂಸ್ಕೃತಿಕವಾಗಿ ಅಂದಾಗ ಶೋಷಕ ...ಮುದಾಯಗಳನ್ನು ಕೀಳುಗೈಯ್ಯುವ ಮಾತುಗಳು, ...ಕ್‌ಗಳು, ಚಿಂತನೆಗಳು ಆ ಸಮಾಜದಲ್ಲಿ ...ಹೊಕ್ಕಾಗಿರುತ್ತದೆ. ಹೆಣ್ಣಿನ ಶ್ರೇಷ್ಠತೆಯನ್ನು (ಅಂದರೆ ...ಳು ತ್ಯಾಗವನ್ನು ವೈಭವೀಕರಿಸುವ) ಕಥೆಗಳು, ...ಗಟ್ಟುಗಳು ಚಾಲ್ತಿಯಲ್ಲಿವೆ ಎಂಬುದೇನೋ ನಿಜ. ...ರೆ ಆಕೆಯನ್ನು ಕೀಳೆಂದು ಹೇಳುವ ಅದೆಷ್ಟೋ ...ತುಗಳು ಭಾಷಾ ಸಂಪತ್ತಿನ ಭಾಗವಾಗಿಬಿಟ್ಟಿವೆ. ರೈತ ...ವಾಗ, ಕಾರ್ಮಿಕ ಅಂದಾಗ, ದಲಿತ ಅಂದಾಗ ನಮಗೆ ...ಷಿಷ ಚಿತ್ರಣ ಬರುತ್ತದೆ ಮಾತ್ರವಲ್ಲ, ಈ ಪದಗಳೆಲ್ಲಾ ...ಲಿಂಗ ಪದಗಳಾಗಿಯೇ ಬಳಕೆಯಲ್ಲಿವೆ. ಆದರೆ ಗಂಡನ್ನು ...ಂದು ಜರಿಯುವ ಒಂದೇ ಒಂದು ನುಡಿಮುತ್ತೂ ... ಭಾಷೆಯಲ್ಲಿಲ್ಲ ಎಂಬುದನ್ನು ಗಮನಿಸಬೇಕು.

ಅದೇರೀತಿ ಗಾದೆ ಮಾತುಗಳಲ್ಲಿ ಮತ್ತು ಸಾರ್ವಜನಿಕ ...ಯಲ್ಲಿ ಶೋಷಿತ ಜಾತಿಗಳನ್ನು ಹೀಯಾಳಿಸುವ ಎಷ್ಟೋ ...ಗಟ್ಟುಗಳು ಚಾಲ್ತಿಯಲ್ಲಿವೆ. ಅದೇ ಸಂದರ್ಭದಲ್ಲಿ ...ಜಾತಿಗಳನ್ನು ಕೀಳೆಂದು ಹೇಳುವವು ಇಲ್ಲವೇ ಇಲ್ಲ, ...ಜಾತಿಗಳನ್ನು, ಅದರಲ್ಲೂ ಬ್ರಾಹ್ಮಣರನ್ನು ಲೇವಡಿ ...ಡುವ ಕೆಲವು ಮಾತುಗಳು ಈಚೆಗೆ ಚಾಲ್ತಿ ಬಂದಿವೆ ...

...ಭಾಷೆಯಲ್ಲೇ ಈ ಪರಿ ಇದೆಯೆಂದರೆ ಏನರ್ಥ? ...ರೆಂದು ಗುರುತಿಸಲ್ಪಟ್ಟ ಸಮುದಾಯಗಳು ಸಮಾಜದಲ್ಲಿ ...ಥ ರೂಪಗಳಲ್ಲಿ ಅನುಕೂಲಗಳನ್ನೂ, ಕೀಳೆಂದು ...ಗುರುತಿಸಲ್ಪಟ್ಟವು ಸಂಕಷ್ಟವನ್ನೂ, ಶೋಷಣೆಯನ್ನೂ, ...ಮಾನವನ್ನೂ ಅನುಭವಿಸುತ್ತಿವೆ ಎಂದರ್ಥ. ವಾಸ್ತವದಲ್ಲಿ ...ಷ್ಟು ಜಾಡೆಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ...ಕೊಂಡೂ ಇದ್ದೇವೆ. ಉದಾಹರಣೆಗೆ ಹೆಣ್ಣಿನ ವಿಚಾರದಲ್ಲಿ ...ಳು ಹೆಂಡತಿ ಮಾತು ಕೇಳುವ ವಿಚಾರದಲ್ಲಿ ಅತ್ಯಂತ ...ತಿಕರ ಎನಿಸಿಕೊಂಡರೂ ಸಹಜವೆಂಬಂತೆ ಜೋಕ್

ಮಾಡುತ್ತಾರೆ. ಅದೃಷ್ಟವಶಾತ್ ಸಾರ್ವಜನಿಕವಾಗಿ ಜಾತಿಯ ವಿಚಾರದಲ್ಲಿ ಪ್ರಗತಿಪರರು ಅದನ್ನು ಮಾಡುವುದು ಕಡಿಮೆ.

ಈ ಮಟ್ಟಿಗೆ ಹೆಣ್ಣು ಎರಡನೆ ದರ್ಜೆಯವಳಾಗಿರುವ ಈ ಸಮಾಜದಲ್ಲಿ ಅತ್ಯಂತ ಕಡಿಮೆ ಪ್ರಮಾಣದಲ್ಲಿ ಕೆಲವು ಮಹಿಳೆಯರು ಪುರುಷರನ್ನು ಡಾಮಿನೇಟ್ ಮಾಡಿದರೆ ಅದು ಬಹಳ ದೊಡ್ಡ ವಿಷಯವಾಗಿ ಕಾಣಬೇಕಾ? ಅಮ್ಮಾವ್ರ ಗಂಡ, ಹೆನ್‌ಪೆಕ್ಡ್ ಹಸ್ಬೆಂಡ್ ಇತ್ಯಾದಿ ಹೆಸರುಗಳಲ್ಲಿ ಅಂತಹ ಸಂಬಂಧವನ್ನು ಆಡಿಕೊಳ್ಳಲು ಬಳಕೆಗೆ ಬಂದು ಬಹಳ ಕಾಲವಾಗಿದೆ. ಗಂಡ ಹಾಕಿದ ಗೆರೆಯನ್ನು ದಾಟದ ಹೆಣ್ಣು, ಗಂಡನ ಸೇವೆಯನ್ನು ನಿಷ್ಠೆಯಿಂದ ಮಾಡುವ ಹೆಣ್ಣು ಎನ್ನುವುದು ಎಲ್ಲೂ ಅವಹೇಳನಕಾರಿಯಾಗಿ ಕೇಳುವುದೇ ಇಲ್ಲ. ಹೀಗಿದ್ದೂ ಪತ್ನಿಯಿಂದ ಪೀಡಿತರಾದ ಪತಿಗಳು ಬಹಳ ಎನ್ನುವಂತೆ ನಮ್ಮ ಸಮಾಜದಲ್ಲಿ ಮಾತುಗಳು



ಚಾಲ್ತಿಯಲ್ಲಿರುವುದು ಏಕೆ?

ಪತಿಪತ್ನಿಯರ ಸಂಬಂಧವು ಸಂಕೀರ್ಣವಾದ ಸಂಬಂಧವಾಗಿದೆ. ಅತ್ಯಂತ ಅನ್ಯೋನ್ಯ ಅದೇ ಸಂದರ್ಭದಲ್ಲಿ ಸಂಘರ್ಷಯುತ ಸಂಬಂಧ. ಸಂಬಂಧದಲ್ಲಿ ಸಮತೋಲನ ತಪ್ಪಿಹೋಗಿ ಅನ್ಯೋನ್ಯತೆಗಿಂತ ಸಂಘರ್ಷ ಪ್ರಧಾನವಾದಾಗ ಬದುಕು ನರಕವಾಗುತ್ತದೆ. ನಮ್ಮ ಸಮಾಜದ ದೊಡ್ಡ ಸಂಖ್ಯೆಯ ಕುಟುಂಬಗಳು ಕೌಟುಂಬಿಕ ಕಲಹಗಳಿಂದ ನರಳುತ್ತಿವೆ. ಈ ಸಾಮಾಜಿಕ ಪಿಡುಗಿನ ಬೇರುಗಳು ಎಲ್ಲಿ ಅಡಗಿವೆ? ವ್ಯಕ್ತಿಗಳ ಸ್ವಭಾವದೊಳಗಿನ ಸಂಘರ್ಷಗಳಾಗಿ ಇದು ಅಭಿವ್ಯಕ್ತಗೊಂಡರೂ ವ್ಯಕ್ತಿತ್ವವನ್ನು ರೂಪಿಸುವ ಹಿಂದೆ ಒಂದು ಸಾಮಾಜಿಕ ವಾಸ್ತವ ಕೆಲಸ ಮಾಡುತ್ತಿರುತ್ತದೆ. ಇದರಲ್ಲಿ ಗಂಡು ಮೇಲು - ಹೆಣ್ಣು ಕೀಳು ಎಂಬ ಸಾಮಾಜಿಕ ಚಿಂತನೆ, ಮೌಲ್ಯ, ಸಂಸ್ಕೃತಿ, ಸಂಪ್ರದಾಯ, ನಡವಳಿಕೆ ಗಂಡು ಹೆಣ್ಣಿನ ಸಂಬಂಧಕ್ಕೆ ಅಪ್ರಜಾತಾಂತ್ರಿಕ ಬುನಾದಿಯನ್ನು ಹಾಕಿಕೊಡುವುದರಲ್ಲಿ ಪ್ರಧಾನ ಪಾತ್ರ ವಹಿಸುತ್ತದೆ. ಆದರೆ ಎಲ್ಲಾ ಕುಟುಂಬ ಕಲಹಗಳಿಗೂ ಇದೇ ಮೂಲಕಾರಣವಾಗಿರುತ್ತದೆ ಎಂದು ಹೇಳಲು ಬರುವುದಿಲ್ಲ. ನಮ್ಮ ಸಮಾಜದಲ್ಲಿ ಪುರುಷ ಮೇಲಾಧಿಪತ್ಯ ಮಾತ್ರವಲ್ಲದೇ ವರ್ಗ, ಜಾತಿ, ಅಧಿಕಾರ ಸಂಸ್ಕೃತಿ ಮುಂತಾದವುಗಳ ಮೇಲಾಧಿಪತ್ಯಗಳೂ ಬಲವಾಗಿವೆ. ಕುಟುಂಬ ಸಂಬಂಧದ ಮೇಲೆ ಇವೂ ಸಹ ಪರಿಣಾಮ ಬೀರುತ್ತವೆ. ಕೆಲವು ಸಂಬಂಧಗಳಲ್ಲಿ ಪುರುಷಾಧಿಪತ್ಯಕ್ಕಿಂತ ಹೆಚ್ಚಿನ ಪಾತ್ರವನ್ನು ಇತರೆ ಮೂಲದ ಸಾಮಾಜಿಕ ಕಾರಣಗಳು ವಹಿಸುತ್ತವೆ. ಗಂಡಿಗಿಂತ ಹೆಚ್ಚಿನ ಅಂತಸ್ತು ಅಧಿಕಾರ, ಸಾಂಸ್ಕೃತಿಕ ಹಿನ್ನೆಲೆಯಿಂದ ಬಂದಿರುವ ಮಹಿಳೆಯರು ಗಂಡಸಿನ ಮೇಲೆ ದಬ್ಬಾಳಿಕೆಯನ್ನೂ ನಡೆಸುವುದೂ ಇದೆ. ಬಲವಂತರು ಬಲಹೀನರ ಮೇಲೆ ದಬ್ಬಾಳಿಕೆ ನಡೆಸುವುದು ಸಮಾಜದೊಳಗೆ ಅಂತರ್ಗತವಾಗಿಹೋಗಿರುವ ವಾಸ್ತವ. ಗಂಡು-ಹೆಣ್ಣಿನ ಸಂಬಂಧದಲ್ಲೂ ಅಷ್ಟೇ. ಬಹುತೇಕ ಕುಟುಂಬಗಳಲ್ಲಿ ಪುರುಷರೇ ಬಲಶಾಲಿಗಳಾವಾಗಿ ರುವುದರಿಂದ ಕೌಟುಂಬಿಕ ಹಿಂಸೆಯಲ್ಲಿ ಅವರೇ ಪ್ರಧಾನ ಪಾತ್ರ ವಹಿಸುತ್ತಾರೆ. ಕೆಲವು ಕುಟುಂಬಗಳಲ್ಲಿ ಹೆಣ್ಣು ಗಂಡಿಗಿಂತ 'ಬಲ'ವನ್ನು ಹೊಂದಿದ್ದರೆ ಆ ಹಿಂಸೆಯಲ್ಲಿ ಆಕೆಯ ಪಾತ್ರ ಪ್ರಧಾನವಾಗಿರುತ್ತದೆ.

ಕೌಟುಂಬಿಕ ಕಲಹಗಳಿಗೆ ಕಾರಣಗಳನ್ನು ಮೂರು ರೀತಿಯಲ್ಲಿ ವರ್ಗೀಕರಿಸಬಹುದು. ಪ್ರಧಾನವಾಗಿ ಪುರುಷ ಮೇಲಾಧಿಪತ್ಯದಿಂದ ಹುಟ್ಟುತ್ತಿರುವ ಕಲಹಗಳು, ಇಬ್ಬರೂ ಪರಸ್ಪರ ಅರ್ಥಮಾಡಿಕೊಳ್ಳದೇ ಹುಟ್ಟುತ್ತಿರುವ ಕಲಹಗಳು ಹಾಗೂ ಹೆಣ್ಣಿನ ಮೇಲಾಧಿಪತ್ಯದಿಂದ ಹುಟ್ಟುತ್ತಿರುವ ಕಲಹಗಳು. ಇವುಗಳಲ್ಲಿ ಮೊದಲನೆಯದು ಅತೀ ದೊಡ್ಡ ಕಾರಣವಾದರೆ, ಎರಡನೆಯದು ಗಣನೀಯ ಮಟ್ಟದಲ್ಲಿದೆ ಮತ್ತು ಮೂರನೆಯದೂ ಗಮನಿಸುವ ಮಟ್ಟದಲ್ಲಿದೆ. ಕೌಟುಂಬಿಕ ಕಲಹಕ್ಕೆ ಪ್ರತಿಕ್ರಿಯಿಸುವ ಯಾರೇ ಆದರೂ


ಈ ಮೂರೂ ಮುಖಗಳನ್ನು ಅವುಗಳ ಅನುಪಾತಕ್ಕನುಗುಣವಾಗಿ ವಿಶ್ಲೇಷಿಸಿದರೆ ಅದರಲ್ಲಿ ಏನೂ ಸಮಸ್ಯೆಯಿಲ್ಲ. ಆದರೆ ನಮ್ಮ ಸಮಾಜದ ದುರಂತವೆಂದರೆ ಪ್ರಧಾನವನ್ನು ಸಹಜವೆಂಬಂತೆ ಸ್ವೀಕರಿಸುವುದು, ಅಪ್ರಧಾನವಾದದ್ದನ್ನು ಆಡಿಕೊಳ್ಳುವುದು. ಮಾಧ್ಯಮಗಳು ಈ ಕ್ರೂರ ಹಾಸ್ಯದ ವಾಹಕಗಳಾಗಿವೆ.

ಪ್ರತಿನಿತ್ಯ ಕೋಟ್ಯಾಂತರ ಕುಟುಂಬಗಳಲ್ಲಿ ಗಂಡಸರು ಮಹಿಳೆಯರನ್ನು ನಿರ್ಲಕ್ಷಿಸುತ್ತಿದ್ದರೂ, ಅವಮಾನಿಸುತ್ತಿದ್ದರೂ, ಹೊಡೆಯುತ್ತಿದ್ದರೂ, ಕೈ ಹಿಡಿದವರನ್ನೇ ರೇಪ್ ಮಾಡುತ್ತಿದ್ದರೂ, ಕುಡಿದು ದುಡಿಮೆಯನ್ನು ಹಾಳು ಮಾಡುತ್ತಿದ್ದರೂ, ಬೇಜವಾಬ್ದಾರಿಯಿಂದ ನಡೆದುಕೊಳ್ಳುತ್ತಿದ್ದರೂ, ಕೊನೆಗೆ ಕ್ರೂರವಾಗಿ ಕೊಲ್ಲುವ ಬರ್ಬರ ಕೃತ್ಯಗಳಿಗೆ ಕೈಹಾಕುತ್ತಿದ್ದರೂ ಮಾಧ್ಯಮಗಳ ಸಂವೇದನೆ ಎಲ್ಲಿ ಸತ್ತುಹೋಗಿದೆ? ಪುರುಷ ಸಮಾಜದ ದಬ್ಬಾಳಿಕೆ ವಿರುದ್ಧ ಎಷ್ಟು ಬಲವಾಗಿ ದನಿ ಎತ್ತಿವೆ? ಮಹಿಳೆಯರ ಹೋರಾಟಕ್ಕೆ ಎಷ್ಟು ಪ್ರಚಾರ ನೀಡಿವೆ? ಎಷ್ಟು ಪತ್ರಿಕೆಗಳಲ್ಲಿ ಅದು ಧಾರಾವಾಹಿಯಾಗಿ ಬಂದಿದೆ? ಮಹಿಳೆಯರ ಕಣ್ಣೀರಿಗೆ ಮಾರ್ಕೆಟ್ ಇಲ್ಲ, ಅತ್ಯಾಚಾರಕ್ಕೆ ಮಾರ್ಕೆಟ್ ಇರುವುದರಿಂದ, ಸಾಮಾಜಿಕ ಸಂಚಲನೆಯನ್ನೂ ಮೂಡಿಸುವುದರಿಂದ ಮಾತ್ರ ಅವು ಸುದ್ದಿಯಾಗುತ್ತವೆ.

ಮಹಿಳೆಯರನ್ನು ಶತ್ರು ಸ್ಥಾನದಲ್ಲಿ ನಿಲ್ಲಿಸುವ 'ಪತ್ನಿ ಪೀಡಿತ ಪತಿಗಳ' ಸಂಘವನ್ನು ಸ್ಥಾಪಿಸಲಾಗುತ್ತಿದೆ. ಆದರೆ ಇತಿಹಾಸದಲ್ಲಿ ಮಹಿಳೆಯರೆಂದೂ 'ಪತಿ ಪೀಡಿತ ಪತ್ನಿ'ಯರ ಸಂಘವನ್ನು ಕಟ್ಟಿಕೊಂಡಿಲ್ಲ. ಮಹಿಳಾ ಸಂಘಟನೆಗಳು ಸಾಮಾಜಿಕ ವಿಷವಾದ ಪುರುಷಾಧಿಪತ್ಯ ಮೌಲ್ಯದ ವಿರುದ್ಧ ಕೆಲಸ ಮಾಡುತ್ತಾ ಬಂದಿವೆ.

ಮುಖ್ಯವಾಹಿನಿ ಪತ್ರಿಕೆಗಳಲ್ಲಿ ಇದು ಬಂದಿದ್ದರೆ

ಅಂಚಿನಿಂದ...



ಆಶ್ಚರ್ಯವೇನೂ ಇಲ್ಲ, ಆದರೆ ಇದು ನಮ್ಮ ಪತ್ರಿಕೆಯಲ್ಲಿ ಹೇಗೆ ಸಾಧ್ಯ? ಕೌಟುಂಬಿಕ ಕಲಹಕ್ಕೆ ಹೀಗೂ ಒಂದು ಮುಖ ಇರುವುದರಿಂದ ಇದನ್ನು ಪ್ರಕಟಿಸಲಾಗುತ್ತಿದೆ ಎಂಬುದರಲ್ಲಿ ಅನುಮಾನವಿಲ್ಲ, ಆದರೆ ಪ್ರಸ್ತುತ ಸಾಮಾಜಿಕ ಪರಿಸ್ಥಿತಿಯಲ್ಲಿ ಇದರ ಪರಿಣಾಮವೇನು? ಇದು ಸಾರಾಂಶದಲ್ಲಿ ದಮನಿತರ ವಿರುದ್ಧವಿರುತ್ತದೆ. ಪ್ರಗತಿಪರ ಪತ್ರಿಕೆಯಲ್ಲಿ ಹರಿದುಬರುವ ಈ ರೀತಿಯ ಚಿಂತನೆ ತಪ್ಪು ಸಾಮಾಜಿಕ ಮೌಲ್ಯವನ್ನು ಬೆಳೆಸುತ್ತದೆ. ಪತ್ರಿಕೆಯಾದರೂ ಕೌಟುಂಬಿಕ ಸಂಬಂಧದಲ್ಲಿ ಮಹಿಳೆಯರು ಎದುರಿಸುತ್ತಿರುವ ಸಂಕಷ್ಟವನ್ನು ಬಿಚ್ಚಿಡಲು ಎಷ್ಟು ಸ್ಪೇಸ್ ಕೊಟ್ಟಿದೆ ಎಂಬ ಪ್ರಶ್ನೆ ಏಳುತ್ತದೆ. ಯಾವ ಅಸಮತೋಲನವನ್ನು ಸರಿದೂಗಿಸುವ ಉದ್ದೇಶವನ್ನು ಈ ಲೇಖನಮಾಲೆ ಹೊಂದಿದೆ?

ಪುರುಷ ಮೇಲಾಧಿಪತ್ಯವೇ ಪ್ರಧಾನ ಧಾರೆಯಾಗಿದ್ದಾಗ್ಲೂ ಗಂಡಂದಿರನ್ನು ಗೋಳಾಡಿಸುತ್ತಿರುವ ಮಹಿಳೆಯರೂ, ಸುಳ್ಳು ವರದಕ್ಷಿಣೆ ಕೇಸು ಹಾಕಿರುವವರೂ, ಅದರಿಂದ ಗಂಡನ ಮನೆಯವರ ಬಾಳು ವಿನಾಕಾರಣ ನರಕವಾಗಿರುವುದೂ ವಾಸ್ತವ. ಹಾಗೆಯೇ ಮೇಲ್ಜಾತಿಯವರ ಮೇಲೆ ಸುಳ್ಳು ಅಟ್ರಾಸಿಟಿ ಕೇಸು ಹಾಕಿ ಸತಾಯಿಸುವ ದಲಿತ ವ್ಯಕ್ತಿಗಳೂ ಇದ್ದಾರೆ. ಹಾಗೆಂದು 'ದಲಿತಪೀಡಿತ ಬ್ರಾಹ್ಮಣ'ರ ಸಂಘಟನೆ ಕಟ್ಟಿದರೆ ಅದಕ್ಕೆ ನಮ್ಮ ಪ್ರತಿಕ್ರಿಯೆಯೇನು? ಅವನ್ನು ಧಾರಾವಾಹಿಯಾಗಿ ಪ್ರಕಟಿಸಬಹುದಾ? ಅವು ಸಮಾಜದಲ್ಲಿ ಈಗಾಗಲೇ ಉಪೇಕ್ಷೆಗೊಳಗಾಗಿರುವ ಪ್ರಧಾನ ಸಮಸ್ಯೆಯನ್ನು ಮತ್ತಷ್ಟು ಹಗುರಗೊಳಿಸುತ್ತವೆ. ಪೂರ್ವಗ್ರಹಗಳನ್ನು ಬಲಪಡಿಸುತ್ತವೆ. ಪ್ರತಿಗಾಮಿ ಚಿಂತನೆಗಳಿಗೆ ಪರೋಕ್ಷ ರೀತಿಯಲ್ಲಿ ಸಮರ್ಥನೆ ಒದಗಿಸುತ್ತವೆ. ನೊಂದಿರುವ ದಮನಿತ ಸಮುದಾಯಗಳನ್ನೇ ದಮನಕ ಶಕ್ತಿಗಳನ್ನಾಗಿ ಚಿತ್ರಿಸುತ್ತವೆ.

ಹಾಗಾಗಿ ಸಂಪಾದಕರಿಗೆ ಹಾಗೂ ಲೇಖಕಿಯ ಮುಂದೆ ಈ ತಕರಾರನ್ನು ಮಂಡಿಸಲೇಬೇಕಿದೆ. ಏನೇ ಸದುದ್ದೇಶದಿಂದ ಇದನ್ನು ಪ್ರಾರಂಭಿಸಿದ್ದರೂ ಇದು ಒಳ್ಳೆಯ ಪರಿಣಾಮವನ್ನು ಬೀರುವುದಿಲ್ಲ. ಹಾಗಾಗಿ ದಯವಿಟ್ಟು ಈ ಲೇಖನಮಾಲೆಯನ್ನು ನಿಲ್ಲಿಸಿ ಅಥವಾ ಇದನ್ನೊಂದು ಸಮಗ್ರ ಹಾಗೂ ಸಂಕೀರ್ಣ ಆಯಾಮಗಳನ್ನು ಪರಿಚಯಿಸುವ ಲೇಖನ ಮಾಲೆಯನ್ನಾಗಿ ಪರಿವರ್ತಿಸುವುದು ಅತ್ಯಂತ ಅಗತ್ಯ. ●

ಓದುಗರಲ್ಲಿ ಒಂದು ಮನವಿ...

'ನಮಗೆ ಪತ್ರಿಕೆ ಸರಿಯಾಗಿ ಸಿಗುತ್ತಿಲ್ಲ' ಎಂಬ ಕೆಲ ಓದುಗರ ಆಕ್ಷೇಪಗಳು ಆಗಾಗ್ಗೆ ನಮ್ಮ ಕಚೇರಿತನಕ ತಲುಪುತ್ತಿದೆ. ಲಂಕೇಶ್‌ಗೆ ಎಲ್ಲಾ ಜಿಲ್ಲಾ, ತಾಲ್ಲೂಕು ಹಾಗೂ ಪುಟ್ಟ ಟೌನ್ ಸೆಂಟರ್‌ಗಳೂ ಸೇರಿದಂತೆ ಇನ್ನೂರೈವತ್ತಕ್ಕೂ ಹೆಚ್ಚು ವಿತರಣಾ ಏಜೆಂಟರಿದ್ದಾರೆ. ಅಂತಹ ಸ್ಥಳಗಳಲ್ಲಿ ಓದುಗರಿಗೆ ಪತ್ರಿಕೆ ಸುಲಭ ವಾಗಿ ಲಭ್ಯವಿದೆ. ಆದರೆ ಪೇಟೆಗಳಿಂದ ಕೊಂಚ ದೂರವಿರು ವವರಿಗೆ ಹಾಗೂ ಆಗಾಗ್ಗೆ ಪೇಟೆಯತ್ತ ಬರಲಾಗದ, ಕೊಂಚ ಇಂಟೀರಿಯರ್ ಏರಿಯಾಗಳಲ್ಲಿ ಇರುವವರಿಗೆ ನಿಯಮಿತವಾಗಿ 'ಲಂಕೇಶ್' ಪಡೆಯುವುದು ಸ್ವಲ್ಪ ಕಷ್ಟವಾಗುತ್ತಿರಲೂಬಹುದು.

ಇದಲ್ಲದೆ ಅನೇಕ ಊರುಗಳಲ್ಲಿ ಬಸ್ ಸ್ಟ್ಯಾಂಡ್ ನವೀಕರಣ, ಹೊಸ ನಿಲ್ದಾಣಗಳ ನಿರ್ಮಾಣದಿಂದಾಗಿ ಅಲ್ಲಿದ್ದ ಪತ್ರಿಕಾ ಸ್ಟಾಲ್‌ಗಳೂ ಕಾಣೆಯಾಗಿವೆ. ಇದರಿಂದಾಗಿ ಕೆಲ ಪುಟ್ಟ ಪಟ್ಟಣಗಳಲ್ಲೂ ತಾತ್ಕಾಲಿಕವಾಗಿ 'ಲಂಕೇಶ್' ವಿತರಣೆಗೆ ಅಡಚಣೆಯಾಗುತ್ತಿದೆ.

ಇದಕ್ಕಿರುವ ಸದ್ಯದ ಪರಿಹಾರವೆಂದರೆ ಪತ್ರಿಕೆಯ ಚಂದಾದಾರರಾಗುವುದು.

ಚಂದಾ ವಿವರ

ವಾರ್ಷಿಕ	ರೂ. 700
ಒಂದೂವರೆ ವರ್ಷಕ್ಕೆ	ರೂ. 1000
ಎರಡು ವರ್ಷಕ್ಕೆ	ರೂ. 1400

- ಹೀಗೆ ಚಂದಾ ಹಣವನ್ನು 'ಲಂಕೇಶ್ ಮೀಡಿಯಾ' ಹೆಸರಲ್ಲಿ ಡಿಡಿ/ಚೆಕ್/ಎಂಓ ಮೂಲಕ ಕಳುಹಿಸಿದರೆ 'ಲಂಕೇಶ್' ಅನ್ನು ನಾವೇ ಕಚೇರಿಯಿಂದ ನೇರವಾಗಿ ಓದುಗರಿಗೆ ಅಂಚೆ ಮೂಲಕ ತಲುಪಿಸುತ್ತೇವೆ. ನಿತ್ಯದ ಕೆಲಸಗಳ ಗಡಿಬಿಡಿಯಲ್ಲಿ ಮ್ಯಾಗಜಿನ್ ಸ್ಟಾಲ್ ಹುಡುಕಿಕೊಂಡು ಹೋಗಲಾಗದ ಓದುಗರೂ ಈ ಸೌಲಭ್ಯ ಬಳಸಿಕೊಳ್ಳಬಹುದು.

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ ವ್ಯವಸ್ಥಾಪಕರು: 9880302817 080-26676427 ಅನ್ನು ಸಂಪರ್ಕಿಸಿ. ಚಂದಾ ಹಣ ಕಳುಹಿಸುವಾಗ ನಿಮ್ಮ ಹೆಸರು, ವಿಳಾಸ, ಫೋನ್ ನಂಬರ್ ಅನ್ನು ಸ್ಪಷ್ಟವಾಗಿ ಬರೆಯಿರಿ.

- ವ್ಯವಸ್ಥಾಪಕರು,


ಸುದ್ದಿಗನ್ನಡಿ

ಸುಕೃತಿ-ಕಲಾವಿದ-ಚಿಂತಕರ

ಸಂದರ್ಶನ

● ಕೆ.ಎಲ್.ಚಂದ್ರಶೇಖರ್ ಐಜೂರ್

ಜಗತ್ತಿನ ಬೌದ್ಧಿಕ ವ್ಯಾಪಾರಗಳಿಗೂ ತನಗೂ ಸಂಬಂಧವೇ ಇಲ್ಲ ಅನ್ನುವಂತೆ ಇದ್ದುಬಿಟ್ಟಿರುವ ಕೋಟಿಗಾನಹಳ್ಳಿ, ತಮ್ಮ ಸುತ್ತಲ ದುಃಖ ಸಂಕಟಗಳ ಕಂಡು ತಮ್ಮೊಳಗೆ ನವೆಯುತ್ತಲೇ ಅವನ್ನು ಪ್ರತಿಕ್ಷಣ ತಮ್ಮ ಜೀವನ ಪ್ರೀತಿಯಿಂದಲೇ ಎದುರುಗೊಳ್ಳಲು ಹವಣಿಸುತ್ತಾರೆ. ಉಳಿವಿನ ಪಠ್ಯದ ಮೂಲಕ ಹೊಸ ಪೆಡಾಗಜಿ(ಶೈಕ್ಷಣಿಕ ತರಬೇತಿ)ಯೊಂದನ್ನು ಹುಟ್ಟುಹಾಕಲು ಹೊರಟಿರುವ ರಾಮಯ್ಯ ನಮ್ಮ ತರಗತಿಯ ಸಾಂಪ್ರದಾಯಿಕ ಪಾಠಗಳನ್ನು ಮುರಿದು ಅದಕ್ಕೊಂದು ಪರ್ಯಾಯ ಪಠ್ಯರೂಪಿಸಿ ಬಯಲಿಗೆ ತರಬೇಕು ಎಂಬ ನಿಲುವುಳ್ಳವರು. ಕೋಲಾರದ ಅಂತರಗಂಗೆಯಲ್ಲಿರುವ 'ಆದಿಮ'ದ ಬೆನ್ನೆಲುಬಾಗಿರುವ ರಾಮಯ್ಯನವರೊಂದಿಗೆ ನಡೆಸಿದ ಸಂದರ್ಶನದ ಪೂರ್ಣಪಾಠ ಇಲ್ಲಿದೆ.



ರಾಮಯ್ಯ

ಲೇಸರ್ ಲೈಟ್ ಕಾಲದಲ್ಲಿ ಬುಡ್ಡಿದೀಪ ಹಿಡಿದು ನಡೆಯುತ್ತಿದ್ದೇನೆ....

- ಕೋಟಿಗಾನಹಳ್ಳಿ ರಾಮಯ್ಯ

ಪ್ರಶ್ನೆ: ಇಂಗ್ಲಿಷ್ ಭಾಷೆಯನ್ನು ಶೋಷಣೆಯ ವಿಮೋಚಕ ಎಂದೇ ತಿಳಿಯಲಾಗಿತ್ತು ಆದರೆ ಇವತ್ತು ಅದೇ ಇಂಗ್ಲಿಷ್ ಉಳ್ಳವರ ಸ್ವತ್ತಾಗಿ ಸಾಮಾಜಿಕ ಅಸಮಾನತೆಗೆ ಕಾರಣವಾಗಿದೆ. ನಮ್ಮ ಶಿಕ್ಷಣ ವ್ಯವಸ್ಥೆ ದಾರಿ ತಪ್ಪಿದ್ದಾದರೂ ಎಲ್ಲಿ?



ಐಜೂರ್

ರಾಮಯ್ಯ: ನಮ್ಮ ಇವತ್ತಿನ ಶಿಕ್ಷಣ ವ್ಯವಸ್ಥೆ ಇದೆಯಲ್ಲ ಇದು ಬ್ರಿಟಿಷರ ಅರಿಸ್ಟೋಕ್ರಸಿಯ ಮುಂದುವರಿಕೆ ಯಂತೆಯೇ ಚಲಿಸುತ್ತಿದೆ. ನಮ್ಮಲ್ಲಿ ಜಾತಿ ವ್ಯವಸ್ಥೆ ಇರುವಂತೆ ಬ್ರಿಟಿಷರಲ್ಲಿ ವರ್ಗವ್ಯವಸ್ಥೆ ಇತ್ತು. ರಾಜಮನೆತನಕ್ಕೆ ಆಪ್ತರಾಗಿದ್ದ ಅಂತಃಪುರ ನಿವಾಸಿಗಳಿಂದ ಹಿಡಿದು ಸೈನಿಕರು, ಗುಲಾಮರತನಕ ಬ್ರಿಟನ್ ರಾಣಿ ನಿಯಂತ್ರಣ ಸಾಧಿಸಬೇಕಿತ್ತು, ಹೀಗಾಗಿ ಅವರು ಇಂಗ್ಲಿಷ್ ಶಿಕ್ಷಣವನ್ನು ಕಂಟ್ರೋಲಿಂಗ್ ಟೂಲ್ ತರಹ ಇಂಗ್ಲೆಂಡ್‌ನಲ್ಲಿ ಬಳಸಿದಂತೆ ಭಾರತದಲ್ಲೂ ಎಲ್ಲರನ್ನು ತಮ್ಮ ನಿಯಂತ್ರಣದಲ್ಲಿಟ್ಟುಕೊಳ್ಳುವ ಸಲುವಾಗಿ ಪರಿಚಯಿಸಿದರು. ಜಾತಿ ವ್ಯವಸ್ಥೆಯನ್ನು ಮೊದಲೇ ಒಪ್ಪಿಕೊಂಡಿದ್ದ ಈ ದೇಶಕ್ಕೆ ಬ್ರಿಟಿಷರ ಅರಿಸ್ಟೋಕ್ರ್ಯಾಟ್ ಶಿಕ್ಷಣವನ್ನು ಒಪ್ಪಿಕೊಳ್ಳಲು ಕಷ್ಟವೇನೂ ಆಗಲಿಲ್ಲ. ಬ್ರಿಟಿಷರು ತಮ್ಮ ಆಡಳಿತದ ಅನುಕೂಲಕ್ಕೋಸ್ಕರ ಇಂಗ್ಲಿಷ್ ಭಾಷೆಯನ್ನು ಭಾರತಕ್ಕೆ ತಂದರೆ ಹೊರತು ಇಲ್ಲಿನ ಶೋಷಿತರ ವಿಮೋಚನೆಗಲ್ಲ ಎಂಬ ಸತ್ಯವನ್ನು ನಾವು ಅರಿಯಬೇಕಿದೆ. ಆದರೆ ಈ ಇಂಗ್ಲಿಷ್ ಇಲ್ಲಿನ ಶೋಷಿತರಿಗೆ ವಿಮೋಚನೆಯ ದಾರಿಗಳಿಗಿಂತ ಸಾಮಾಜಿಕ ಅಸಮಾನತೆಯನ್ನು ಹೆಚ್ಚಿಸುತ್ತಾ ಹೋಗಿದೆ.

ಪ್ರಶ್ನೆ: ಅಂಬೇಡ್ಕರ್ ಈ ನೆಲದಲ್ಲಿ ಹುಟ್ಟದೇ ಇದ್ದಿದ್ದರೆ...

ಒಬ್ಬೊಬ್ಬರನ್ನು ನಿಂದ್ಯಾವ ಜಾತಿ ನಿಂದ್ಯಾವ ಜಾತಿ ಎಂದು ಕೇಳಿ ಹೊಲೆಮಾದಿಗರೇನಾದರೂ ಅಪ್ಪಿತಪ್ಪಿ ಮನೆಮುಂದೆ ನಿಂತಿದ್ದಾರೇನೋ ಎಂದು ಆತಂಕಗೊಂಡಿದ್ದಳು. ಆ ಮುದುಕಿಯ ಪ್ರಶ್ನೆಗೆ ಬೇಸತ್ತು ಅಲ್ಲಿ ಅನೇಕರು ಆ ಮಳೆಯನ್ನು ಲೆಕ್ಕಿಸದೆ ಹೊರನಡೆದರು. ಪರಮೇಶ್ವರರೂ ಅಲ್ಲಿ ಹೆಚ್ಚುಹೊತ್ತು ನಿಲ್ಲದೆ ಮಳೆಯಲ್ಲಿ ನೆನೆಯುತ್ತಲೇ ಮುಂದೆಹೋಗಿ ನಿಂತರು. ಜನ ದೀಪದ ಕುರಿತು ಜ್ಯೋತಿಯ ಕುರಿತು ಎಂತೆಂಥವೋ ಉನ್ನತ ಲಾವಣಿ ಹಾಡುಗಳನ್ನು ಕಟ್ಟಿ ಹಾಡಿದ್ದನ್ನು ಕಂಡಿದ್ದೇವೆ. ಪರಮೇಶ್ವರ ಈ ಘಟನೆ ಹೇಳಿದಾಗ 'ಜ್ಯೋತಿ ಹಿಡಿದು ಜಾತಿ ಕೇಳಿದರು' ಎಂಬ ರೂಪಕವೊಂದು ಹುಟ್ಟಿಕೊಂಡು ಅದು 'ಸುದ್ದಿ ಸಂಗಾತಿ'ಯಲ್ಲಿ ಪ್ರಕಟವಾಯಿತು.

ಪ್ರಶ್ನೆ: ಒಂದ್ವೇಳೆ ಅಂಬೇಡ್ಕರ್ ಇಂಗ್ಲಿಷ್ ಶಿಕ್ಷಣಕ್ಕೆ ತೆತ್ತುಕೊಳ್ಳದೆ ಒಬ್ಬ ಸೃಜನಶೀಲ ಲೇಖಕರಾಗಿ ಮಾತ್ರ ಉಳಿದುಬಿಟ್ಟದ್ದಿದ್ದರೆ ಹೇಗಿರುತ್ತಿತ್ತು?

ರಾಮಯ್ಯ: ನೂರು ಕುವೆಂಪು ಆಗಬಹುದಿತ್ತು! ಅಂಬೇಡ್ಕರ್ ಸೃಜನಶೀಲ ಲೇಖಕರಾಗದೆ ಹೋದದ್ದೇ ಒಳ್ಳೆಯದಾಯಿತು ಎಂದು ನಾನು ಅನೇಕ ಸಲ ಅಂದುಕೊಂಡಿದ್ದೇನೆ. ಅಂಬೇಡ್ಕರ್ ಬರಹಗಳಲ್ಲಿ ಕಾಣುವ ರ್‍ಯಾಷನಲ್ ಸ್ಪಾರ್ಕ್ ಕತೆ ಕವನ ಕಾದಂಬರಿ ಬರೆಯುವ ಸಾಹಿತಿ ಅಂಬೇಡ್ಕರ್ ಅವರಲ್ಲಿ ಅಷ್ಟು ಕಾಣುತ್ತಿರಲಿಲ್ಲವೇನೋ. ನೋಡಿ, ಅಂಬೇಡ್ಕರ್ ಬರುವ ತನಕ ಯಾರಿಗೂ ಜಾತಿಯನ್ನು ಸಾಮಾಜಿಕ ಪ್ಯಾರಾಮೀಟರ್‌ನಲ್ಲಿ ನೋಡಬೇಕು ಎಂಬುದು ಗೊತ್ತೇ ಇರಲಿಲ್ಲ, ಜಾತಿ ಶ್ರೇಣೀಕರಣಗಳನ್ನು ಅಂಬೇಡ್ಕರ್ ಬಯಲು ಮಾಡದ ಹೊರತು ಈ ದೇಶದ ಯಾವ ಸಮಾಜಶಾಸ್ತ್ರಜ್ಞ ನಮ್ಮ ಶಿಕ್ಷಣಕ್ಕೆ ಹೇಗೆ ಅನಿವಾರ್ಯ?

ರಾಮಯ್ಯ: ನಮಗೊಂದು ಪೆಡಾಗಜಿ(ಶೈಕ್ಷಣಿಕ ತರಬೇತಿ)ಯ ಅಗತ್ಯವಿದೆ. ಈಗಿರುವ ನಮ್ಮ ಸಿದ್ಧಪಠ್ಯಗಳು ನಮ್ಮ ಮಕ್ಕಳ ಉಳಿವಿನ ಪಠ್ಯಗಳಾಗಲಾರವು. ಈ ಉಳಿವಿನ ಪಠ್ಯಗಳನ್ನು ಕಂಡುಕೊಳ್ಳದಿದ್ದರೆ ನಾವು ಭ್ರೂಣದಲ್ಲೇ ತೀರಿಕೊಳ್ಳುತ್ತೇವೆ. ಶಿಕ್ಷಣದಲ್ಲಿ ಖಾಸಗಿ ವಲಯ, ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ನಿಯಂತ್ರಿಸಲಿಕ್ಕಾಗದೆ ನಮ್ಮ ಸರ್ಕಾರವೇ ಅಸಹಾಯಕ ಸ್ಥಿತಿ ತಲುಪಿದೆ. ಸರ್ಕಾರಿ ಪಾಲಿಟೆಕ್ನಿಕ್, ಐಟಿಐ ಕಾಲೇಜುಗಳಲ್ಲಿ ಕಲಿಯುವ ವಿದ್ಯಾರ್ಥಿಗಳು ಲೆಕ್ಕಕ್ಕೆ ಇಲ್ಲ ಅನ್ನುವಂತೆ ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳು ವರ್ತಿಸುತ್ತಿವೆ. ದುಡ್ಡು ಚೆಲ್ಲದಿದ್ದರೆ ಕ್ವಾಲಿಟಿ ಎಜುಕೇಶನ್ ಪಡೆಯಲು ಸಾಧ್ಯವೇ ಇಲ್ಲ ಅನ್ನುವ ಸ್ಥಿತಿ ಈಗ ಎದುರಾಗಿದೆ. ದುಡ್ಡಿಲ್ಲದವರು ಇಂಥ ಶಿಕ್ಷಣ ಸಂಸ್ಥೆಗಳ ಗೇಟಿನ ಮುಂದೆಯೂ ನಿಲ್ಲುವಂತಿಲ್ಲ, ಹೀಗಿದೆ ಇವತ್ತಿನ ನಮ್ಮ ಶಿಕ್ಷಣದ ಪೆಡಾಗಜಿ.

ಪ್ರಶ್ನೆ: ಒಂದು ದೊಡ್ಡ ತಂಡವಿಲ್ಲದೆ ನಿಮ್ಮ ಉಳಿವಿನ ಪಠ್ಯವನ್ನು ಹೇಗೆ ಕಾರ್ಯರೂಪಕ್ಕೆ ತರುತ್ತೀರಿ? ಇದು ಸಾಧ್ಯವೇ?

ರಾಮಯ್ಯ: ಒಂದೈದು ವರ್ಷ ಉಳಿವಿನ ಪಠ್ಯ ರೂಪಿಸುವತ್ತಲೇ ತಲೆಕೆಡಿಸಿಕೊಳ್ಳಬೇಕು ಎಂದುಕೊಂಡಿದ್ದೇನೆ. ಇಲ್ಲಿ ನನ್ನೊಂದಿಗೆ ಯಾರಿರುತ್ತಾರೆ ಇರುವುದಿಲ್ಲ ಎಂಬುದು ನನಗೀಗ ಮುಖ್ಯವಲ್ಲ. ಪ್ರಾಯೋಗಿಕವಾಗಿ ನಾನಿದನ್ನು ಚಾಲನೆಗೆ ತರಲೇಬೇಕಿದೆ. ಈಗಿರುವ ನಮ್ಮ ಶಿಕ್ಷಣ ವ್ಯವಸ್ಥೆ ಮತ್ತು ಪಠ್ಯಗಳು ನಮ್ಮ ಮಕ್ಕಳನ್ನು ನಾಶ ಮಾಡುವುದಂತೂ ನಿಜ. ನಾಲ್ಕು ಗೋಡೆಗಳ ಮಧ್ಯೆ ಮಕ್ಕಳನ್ನು ಕೂರಿಸಿ ಪಾಠಮಾಡುವ ಪ್ರಕ್ರಿಯೆಗಳನ್ನು ನಾವು ಇನ್ನಾದರೂ ಮುರಿಯಬೇಕಿದೆ. ತರಗತಿಗಳಾಚೆ ದಾಟಿ ಬಯಲಿಗೆ ಬಂದು ಕಲಿಯುವುದೇ ನಮ್ಮ ಪೆಡಾಗಜಿಯಾಗಬೇಕಿದೆ.

ಸರ್ಕ್ಯೂಲೇಟ್ ಆಗಬೇಕು ಎಂಬ ತುಡಿತವಿದೆ. ಇದನ್ನು ಮುಂದಕ್ಕೆ ಕೊಂಡೊಯ್ಯಲು ಆದಿಮಕ್ಕೊಂದು ಪುಟ್ಟ ತಂಡದ ಅಗತ್ಯವಿದೆ.

ಪ್ರಶ್ನೆ: ಈ ನಿಟ್ಟಿನಲ್ಲಿ ಅಜೀಮ್ ಪ್ರೇಮ್‌ಜಿ ವಿಶ್ವವಿದ್ಯಾಲಯದಂತಹ ಖಾಸಗಿ ಸಂಸ್ಥೆಗಳು ಸಾಮಾಜಿಕ ನ್ಯಾಯದ ಪರ ನಿಲ್ಲಬಲ್ಲವೇ? ಬಡಮಕ್ಕಳಿಗೆ ಪ್ರವೇಶ ನೀಡದ ಕಾರಣ ರಾಜ್ಯಪಾಲರೇ ಮೊನ್ನೆ ಅಜೀಮ್ ಪ್ರೇಮ್‌ಜಿ ವಿಶ್ವವಿದ್ಯಾಲಯವನ್ನು ತರಾಟೆಗೆ ತೆಗೆದುಕೊಂಡಿದ್ದರಲ್ಲ...

ರಾಮಯ್ಯ: ನಿಮ್ಮಂತೆ ನನಗೂ ಆ ಅನುಮಾನವಿದೆ. ಹೊಸ ಐಡಿಯಾಗಳ ಬಗ್ಗೆ ಆಸಕ್ತಿ ತೋರಿಸುವ ಖಾಸಗಿ ವಲಯಗಳು ಸಾಮಾಜಿಕ ನ್ಯಾಯದ ಪ್ರಶ್ನೆಗಳು ಬಂದಾಗ ಹೇಗೆ ವರ್ತಿಸುತ್ತವೆ ಎಂಬುದು ಎಲ್ಲರಿಗೂ ಗೊತ್ತಿರುವಂಥದ್ದೇ. ಶೋಷಿತ ಮಕ್ಕಳನ್ನು ಒಳಗೊಳ್ಳುವ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಮಾತ್ರ ನಮ್ಮ ಪೆಡಾಗಜಿ ಪರಿಕಲ್ಪನೆಗಳು ಅರ್ಥವಾಗಬಲ್ಲವು. ಅಜೀಮ್ ಪ್ರೇಮ್‌ಜಿ ವಿಶ್ವವಿದ್ಯಾಲಯದ ಕೆಲವು ಶಿಕ್ಷಕರು ನಮ್ಮ ವಿಚಾರಗಳಿಗೆ ಸಮ್ಮತಿ ಸೂಚಿಸಿಯೇ ಅದಕ್ಕೊಂದು ಶೇಪ್ ಕೊಡಲು ಮುಂದಾಗಿದ್ದಾರೆ. ಮುಂದಿನ ದಿನಗಳಲ್ಲಿ ಇದಕ್ಕೊಂದು ಖಚಿತ ರೂಪ ಸಿಗಬಹುದೆಂಬ ನಿರೀಕ್ಷೆ ನನಗಿದೆ.

ಪ್ರಶ್ನೆ: ನಿಮ್ಮ ತಾರುಣ್ಯದ ಹೋರಾಟದ ಮೊದಲ ದಿನದಿಂದ ಮೊದಲ್ಗೊಂಡು ಇವತ್ತಿನ ಈ ಕ್ಷಣದವರೆವಿಗೂ ನಮ್ಮ ಸಾಮಾಜಿಕ ಚಲನೆಯಲ್ಲಿ ಶೋಷಿತರು ಮತ್ತು ಬ್ರಾಹ್ಮಣರ ನಡುವೆ ಏನಾದರೂ ವ್ಯತ್ಯಾಸಗಳು, ಸಾಮರಸ್ಯದ ಚಲನೆಗಳು ಕಾಣುತ್ತಿವೆಯೇ?

ರಾಮಯ್ಯ: (ನಗು...) 'ನಾವು ಅಸ್ಪೃಶ್ಯರನ್ನು ಮನೆಯೊಳ







ಆದಿಮದಲ್ಲಿ ಕೋಟಿಗಾನಹಳ್ಳಿ ರಾಮಯ್ಯ

ರಾಮಯ್ಯ: ಆಗಲೂ ನಾವು ಬದುಕುತ್ತಿದ್ದೆವು ನಮ್ಮ ನಮ್ಮ ಅವಮಾನಗಳ ಕೇರಿಗಳಲ್ಲಿ, ಆದರೆ ನಮ್ಮನ್ನು ಹೊಲೆಮಾದಿಗರ ಕೇರಿಗಳಿಂದಾಚೆ ದಾಟಿ ಬರದಂತೆ ದೊಡ್ಡದೊಡ್ಡ ತಡೆಗೋಡೆಗಳು ನಿರ್ಮಿಸಲ್ಪಡುತ್ತಿದ್ದವು. ಶೋಷಿತರು ನಾಗರಿಕ ಜಗತ್ತಿಗೆ ಪ್ರವೇಶ ಪಡೆಯದಂತೆ ಕಾನೂನು ಸಂವಿಧಾನಗಳು ಜಾರಿಗೊಳ್ಳುತ್ತಿದ್ದವು. ಒಂದು ಘಟನೆ ಹೇಳ್ತೀನಿ: ಕೆಲ ವರ್ಷಗಳ ಹಿಂದೆ ಮಿತ್ರ ಪರಮೇಶ್ವರ ಗ. ಸ್ವಾಮಿ ಅವರ ಮಿತ್ರ ಅಪ್ಪಾಜಿಗೌಡರ ಮನೆ ಕಡೆ ಬಸ್ಸಿನಲ್ಲಿ ಪ್ರಯಾಣ ಮಾಡುವಾಗ ತಾವು ಇಳಿಯುವ ಸ್ಥಳ ಹತ್ತಿರ ಬರುತ್ತಿದ್ದಂತೆ ಮಳೆಯೂ ಜೋರಾಯಿತು. ಕತ್ತಲ ರಾತ್ರಿ ಬೇರೆ, ಬಸ್ಸಿನಿಂದಿಳಿದವರೆ ಪರಮೇಶ್ವರ ಅಲ್ಲೇ ನಿಲ್ದಾಣದ ಎದುರೇ ಕಾಣುತ್ತಿದ್ದ ಮನೆಯೊಂದರ ಪಡಸಾಲೆಯ ಬಳಿ ಹೋಗಿ ನಿಂತರು. ಅಲ್ಲಿ ಇವರಂತೆ ಅನೇಕರು ಮಳೆಯ ಕಾರಣ ಆ ಮನೆಮುಂದಿನ ಪಡಸಾಲೆಯಲ್ಲಿ ನಿಂತಿದ್ದರು. ಕೆಲಹೊತ್ತಿನ ನಂತರ ಆ ಮನೆಯ ಹಿರಿಯಳಂತಿದ್ದ ಮುದುಕಿಯೊಬ್ಬಳು ದೀಪವಿಡಿದು

ಜಾತಿ ಕ್ರೌರ್ಯಗಳನ್ನು ಬಿಚ್ಚಿಡುತ್ತಿದ್ದ.

ಪ್ರಶ್ನೆ: ಇಂಗ್ಲಿಷನ್ನು ಬಿಡುಗಡೆಯ ಭಾಷೆ ಎಂದು ಕರೆಯುವುದಿದೆಯಲ್ಲ...

ರಾಮಯ್ಯ: ಇವತ್ತಿನ ಇಂಗ್ಲಿಷ್ ಶಿಕ್ಷಣವಿದೆಯಲ್ಲ ಇದು ಯಾವತ್ತೂ ನಮ್ಮ ಉಳಿವಿನ ಶಿಕ್ಷಣವಾಗಲಾರದು. ತಕ್ಷಣಕ್ಕೊಂದು ಕೆಲಸ ಹುಡುಕಿಕೊಳ್ಳಲು, ಒಂದಿಷ್ಟು ಹಣ ಸಂಪಾದಿಸಲಷ್ಟೇ ಈ ಇಂಗ್ಲಿಷ್ ನಮ್ಮೊಂದಿಗಿದೆ. ಈ ಕಾರ್ಪೋರೇಟ್ ಜಗತ್ತಿಗೆ ಬೇಕಿರುವ ನಾಜೂಕಿನ ಇಂಗ್ಲಿಷ್ ಕಲಿಸುವುದಷ್ಟೇ ನಮ್ಮ ವಿಶ್ವವಿದ್ಯಾಲಯ, ಕಾಲೇಜುಗಳ ಕೆಲಸವಾಗಿದೆ. ಇವತ್ತಿನ ವೇಗಕ್ಕೆ ತಕ್ಕಂತೆ ಇಂಗ್ಲಿಷನ್ನು ಪಠ್ಯವಾಗಿಸಿ ಶಿಕ್ಷಣವಾಗಿಸುವುದಾದರೇ ಅದನ್ನು ಹೇಗೆ ತಾನೆ ಬಿಡುಗಡೆಯ ಭಾಷೆ ಎನ್ನಲು ಸಾಧ್ಯ?

ಪ್ರಶ್ನೆ: ಈಗ ಹೊಸದೊಂದು ಪೆಡಾಗಜಿಯನ್ನು ಕಂಡುಕೊಳ್ಳುವ ಮೂಲಕ ಉಳಿವಿನ ಪಠ್ಯದ ಬಗ್ಗೆ ಹೆಚ್ಚು ತಲೆಕೆಡಿಸಿಕೊಂಡಂತೆ ಕಾಣುತ್ತಿದ್ದೀರಿ. ಈ ಉಳಿವಿನ ಪಠ್ಯ

ನಮ್ಮ ಸಾರ್ವತ್ರಿಕ ಶಿಕ್ಷಣ ವ್ಯವಸ್ಥೆಯೇ ಇವತ್ತು ದೊಡ್ಡ ಕ್ರೈಸಿಸ್‌ನಲ್ಲಿದೆ. ನಮ್ಮ ಪೆಡಾಗಜಿ ಪರಿಕಲ್ಪನೆಗಳನ್ನು, ಉಳಿವಿನ ಪಠ್ಯಗಳನ್ನು ಖಾಸಗಿ ಶಿಕ್ಷಣ ಸಂಸ್ಥೆಗಳು ಯಾವ ಕಾರಣಕ್ಕೂ ಒಪ್ಪುವುದಿಲ್ಲ. ನಿಮ್ಮ ಶಾಲೆಯಲ್ಲಿ ಕಡ್ಡಾಯವಾಗಿ ಬಡಮಕ್ಕಳಿಗೆ ಪ್ರವೇಶ ನೀಡಬೇಕು ಎಂದು ಸರ್ಕಾರ ಆದೇಶ ನೀಡಿದ ತಕ್ಷಣವೇ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಇಡೀ ಡೆಮಾಕ್ರಸಿಯ ಮೇಲೆ ಸಿಟ್ಟು ಬಂದುಬಿಡುತ್ತದೆ. ಭಾರತ ಡೆಮಾಕ್ರಸಿಯಾಗಿರುವುದು ಕೂಡ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ದೊಡ್ಡ ಸಮಸ್ಯೆಯಾಗಿಬಿಟ್ಟಿದೆ. ಹೀಗಿರುವಾಗ ನಮ್ಮ ಉಳಿವಿನ ಪಠ್ಯಗಳ ಬಗ್ಗೆ ಆಸಕ್ತಿ ತೋರುವ ಸಮಾನಮನಸ್ಕರೊಂದಿಗೆ ಚರ್ಚಿಸಿ ಅದಕ್ಕೊಂದು ರೂಪಕೊಡುವ ಕೆಲಸಗಳು ಆದಿಮದಿಂದಲೇ ಶುರುವಾಗಲಿದೆ. ಅಜೀಮ್ ಪ್ರೇಮ್‌ಜಿ ವಿಶ್ವವಿದ್ಯಾಲಯ ನಮ್ಮ ಉಳಿವಿನ ಪಠ್ಯಾಧಾರಿತ ಶಿಕ್ಷಣದ ಬಗ್ಗೆ ಆಸಕ್ತಿ ತೋರಿಸಿ ಈ ಹೊಸಬಗೆಯ ಪೆಡಾಗಜಿಯತ್ತ ಕುತೂಹಲ ತಾಳಿದೆ. ನನಗೂ ಕೂಡ ನಮ್ಮ ಐಡಿಯಾ ಎಲ್ಲ ಕಡೆಯೂ

ಬಿಟ್ಟುಕೊಳ್ಳುವುದಿಲ್ಲ, ಫಿಜಿಕಲ್ಲಾಗಂತೂ ನಿಮ್ಮನ್ನ ಮುಟ್ಟಿಸಿಕೊಳ್ಳುವುದಿಲ್ಲ, ಆದರೆ ನಿಮ್ಮ ನೋವು ಸಂಕಟಗಳನ್ನು ಕತೆ ಕವನ ಕಾದಂಬರಿಗಳಾಗಿಸಿ ಪುಸ್ತ ತನ್ನಿ ಅದನ್ನು ದೇವರ ಮನೆಯಲ್ಲಿಟ್ಟು ಪೂಜೆ ಮಾಡ್ತೀ 'ಎದೆಗೆ ಬಿದ್ದ ಅಕ್ಷರ'ಕ್ಕಿಂತಲೂ ಇನ್ನೂ ದೊಡ್ಡ ಮೆರವಣಿ ಮಾಡುತ್ತೇವೆ' -ಇದು ಬ್ರಾಹ್ಮಣ್ಯದ ಮನಸ್ಥಿತಿ. ಈ ಸುದೀರ್ಘ ಸಾಮಾಜಿಕ ಚಲನೆಯಲ್ಲಿ ಶೋಷಿತರು ಮತ್ತು ಬ್ರಾಹ್ಮಣ ನಡುವೆ ಸಾಮರಸ್ಯಕ್ಕಿಂಥ ಅಂತರವೇ ಹೆಚ್ಚು ಕಾಣುತ್ತಿ

ಪ್ರಶ್ನೆ: ಹಾಗಿದ್ದರೆ ಶೋಷಿತ ಸಮುದಾಯಗಳ ಮೇ ಬದಲಾವಣೆಯ ಗಾಳಿಯೇ ಬೀಸಿಲ್ಲವೇ?

ರಾಮಯ್ಯ: ನಾಲ್ಕು ದಶಕಗಳ ಹಿಂದೆ ನಮಗೆಲ್ಲ ಒಂ ಸಾಮಾಜಿಕ ಹಾತಾಳಿ ಇತ್ತು, ಅವತ್ತೂ ಕೂಡ ದಲಿತ ಮೇಲೆ ಭೀಕರ ಅನ್ನಿಸುವ ಬರ್ಬರ ಕ್ರೌರ್ಯಗ ಜರುಗುತ್ತಿದ್ದವು. ಅವತ್ತಿನ ಕೊಲೆ ಅತ್ಯಾಚಾರದಂತ ಕ್ರೌರ್ಯಗಳಿಗೆ ಎದುರಾಗಿ ನಿಂತ ನಮ್ಮನ್ನೆಲ್ಲ ಒಬ್ಬರನ್ನೊಬ್

...ಳಿಳ್ಳಿದಂತೆ 'ಜೀವಸೆಲೆ' ಎಂಬುದು ...ದಿಯುತ್ತಿತ್ತು. ಅನ್ನ, ಹಸಿವು, ಬದುಕು ಎಂಬ ...ಪ್ರಶ್ನೆಗಳೇ ನಮ್ಮ ಬಹುದೊಡ್ಡ ಸಮಸ್ಯೆಗಳು. ...ಮ್ಮ ಹೋರಾಟಗಳ ಅಂತಃಸತ್ವವನ್ನು ನಿರ್ಧರಿಸುವ ...ರಣದ ಪ್ರಶ್ನೆಗಳಾಗಿದ್ದವು. ಇವತ್ತು ಇಂತಹ ...ಳು ನಮ್ಮೆದುರು ಇಲ್ಲ. ಈಗ ಕ್ರೌರ್ಯದ ಸ್ವರೂಪ ...ಗಿದೆ. ಇವತ್ತು ಯಾವ ದಲಿತನು ಹಸಿವು ...ಳಿಂದ ಸಾಯುತ್ತಿಲ್ಲ. ಅನ್ನಕ್ಕಾಗಿ ಹಪಹಪಿಸಬೇಕಾದ ... ನೀವು ಸುಮ್ಮನೆ ದಲಿತ ವಿದ್ಯಾರ್ಥಿನಿಲಯಗಳಿಗೆ ...ಟ್ಟು ನೋಡಿ ಅಲ್ಲೆಷ್ಟು ಅನ್ನವನ್ನು ಬೀದಿಗೆ ...ಲಾಗುತ್ತಿದೆ ಎಂಬುದು ಗೊತ್ತಾಗುತ್ತದೆ. ತಮ್ಮ ... ದಿನದ ಜೀವನಾವಶ್ಯಕ ವಸ್ತುಗಳಿಗಾಗಿ ಹಣ ...ಸುವ ಕೆಲಸ ಕಸುಬುದಾರಿಕೆಗಳು ಇವತ್ತಿನ ...ಲ್ಲಿದೆ. ಇವರ ನಡುವೆಯೇ ದಿನಕ್ಕೆ ಎರಡು ...ಯಿಗಳನ್ನು ದುಡಿಯಲಾಗದ ಶೋಷಿತ ವರ್ಗವೂ ...ನಡುವೆಯೇ ಜೀವಂತವಾಗಿದೆ. ಈ ಅಸಹಾಯಕ ...ಸರ್ಕಾರದ ಯಾವ ಆರ್ಥಿಕ ಪಾಲಿಸಿಗಳಿಗೂ ...ವುದಿಲ್ಲ. ಇಂತಹ ವರ್ಗಗಳನ್ನು ಗುರುತಿಸುವ ...ರ್ಕಾರಿ ಮಾನದಂಡಗಳೇ ವಿಚಿತ್ರವಾಗಿವೆ. ಎಸ್ಸಿ ...ಉಪಜಾತಿಗಳ ಪ್ಯಾರಾಮೀಟರ್‌ಗಳನ್ನು ...ಕೊಂಡು ಈ ವರ್ಗಗಳನ್ನು ನಮ್ಮ ಸರ್ಕಾರಿ ...ಗಳು ಗುರುತಿಸಲು ಹೊರಡುತ್ತಾರೆ.

...ಶ್ನೆ: ಈ ಹೊಸ ಸರ್ಕಾರದ ಸಂದರ್ಭದಲ್ಲಿ ದಲಿತ ...ರಣೆಗಳು ಮತ್ತು ದಲಿತ ಚಳವಳಿಗಳ ನಾಯಕರು ...ಬೇಕೆಂದು ಬಯಸುವಿರಿ?

...ಮಯ್ಯ: ನನಗೆ ಇವತ್ತಿನ ರಾಜಕಾರಣದ ಬಗ್ಗೆ ...ಆಸಕ್ತಿಯಿಲ್ಲ ಅಥವಾ ಅದರ ಬಗ್ಗೆ ನನಗೇನೂ ...ಲ್ಲ ಎಂದು ಹೇಳುವುದು ಹೆಚ್ಚು ಸರಿಯೆನ್ನಿಸುತ್ತದೆ. ... ದಲಿತ ರಾಜಕಾರಣಿಗಳು ಮತ್ತು ದಲಿತ ಚಳವಳಿಗಳ ...ರು ಹೇಗಿರಬೇಕು ಅನ್ನುವುದಕ್ಕಿಂಥ ಕಳೆದ ಐವತ್ತು ...ಗಳಲ್ಲಿ ನಮ್ಮ ಪ್ರತಿನಿಧಿಗಳಾಗಿದ್ದ ಇವರ ...ormance ಹೇಗಿತ್ತು ಹೇಗಿದೆ ಎಂಬುದನ್ನು ...ಬೇಕಾದ ತುರ್ತಿದೆ, ಅಷ್ಟೇ.

...ಶ್ನೆ: ಇವತ್ತಿನ ಕನ್ನಡದ ಸಾಂಸ್ಕೃತಿಕ ಮತ್ತು ಸಾಹಿತ್ಯಕ ...ರ್ಶೆಗಳನ್ನು ಕಂಡು ಏನನ್ನಿಸುತ್ತಿದೆ?

...ಮಯ್ಯ: ಇವತ್ತು ಕಲ್ಚರಲ್ ಡಿಸ್ಕೋರ್ಸ್‌ಗಳು ಎಲ್ಲಿ ...ುತ್ತಿವೆ? ನಡೆಯುತ್ತಿರುವುದೆಲ್ಲ ಬರೀ ಭಟ್ಟಂಗಿತನದ ...ಗಳು. ಇದು ಭಟ್ಟಂಗಿತನದ ಕಾಲ. ಎಲ್ಲರೂ ...ಗಿತನದ ಗೂಡುಗಳನ್ನು ಕಟ್ಟಿಕೊಂಡು ತಮಗೆ ...ಮರ-ಭಜನೆ ಕೀರ್ತನೆಗಳಲ್ಲಿ ಮುಳುಗಿ ಹೋಗಿದ್ದಾರೆ. ... ಪುಸ್ತಕಕ್ಕೆ ಅವನ ವಿಮರ್ಶೆ; ಅವನ ಪುಸ್ತಕಕ್ಕೆ ... ಮೆಚ್ಚುಗೆ' -ಕನ್ನಡ ಸಾಹಿತ್ಯದಲ್ಲಿ ಇವತ್ತು ...ುತ್ತಿರುವುದು ಇದೊಂದೇ. ಒಂದೇ ಕುಟುಂಬದ ..., ಒಂದೇ ಜಾತಿಗೆ ಸೇರಿದ ಆಪ್ತರು ನೈತಿಕವಾಗಿ ... ಪುಸ್ತಕ ವಿಮರ್ಶೆಗಳಲ್ಲಿ ತೊಡಗಬಾರದು. ಆದರೆ ... ಸಾಹಿತ್ಯವನ್ನು ಅನೈತಿಕತೆ ಎಂಬುದು ಯಾವತ್ತೋ ... ಮುಗಿಸಿದೆ. ಇಲ್ಲಿ ದಲ್ಲಾಳಿಗಿರಿ ಪೌರೋಹಿತ್ಯ ಬಿಟ್ಟರೆ ...ವ ಘನಂದಾರಿ ಸಾಹಿತ್ಯ ಸೃಷ್ಟಿಯೂ ಆಗ್ತಿಲ್ಲ.

... ಪ್ರಶ್ನೆ: ಎಲ್ಲಾ ದಿಕ್ಕಲ್ಲೂ ನೀವು ಏಕಾಂಗಿ ...ತ್ತಿದೆಯಲ್ಲ...

...ಾಮಯ್ಯ: ಲೇಸರ್ ಲೈಟ್ ಇರುವ ಈ ಕಾಲದಲ್ಲಿ ... ಬುಡ್ಡಿದೀಪಗಳನ್ನು ಹಿಡಿದು ನಡೆಯುತ್ತಿದ್ದೇನೆ. ಈ ... ನನಗೆ ಫಿಲಾಸಫಿಕಲ್‌ನಂತೆ ಕಾಣುತ್ತಿದೆ. ಈ ...ದೀಪವಿಡಲು ಒಂದು ಸಣ್ಣ ಆಧಾರ ಬೇಕಲ್ಲ, ಅದಕ್ಕಾಗಿ ...ಡುತ್ತಿದ್ದೇನೆ. ಆ ಆಧಾರ ನ್ಯಾಯವಂತದ್ದಾಗಿದ್ದರೆ ಮಾತ್ರ ...ಬುಡ್ಡಿದೀಪವನ್ನು ಅದರ ಮೇಲಿಟ್ಟು ಬೆಳಕು ಕಾಣಲು ...ವೆಂದು ನಂಬಿರುವವನು ನಾನು. ನಮ್ಮ ಸಂವಿಧಾನ ...ಹ ಆಧಾರ ಆಗಬಹುದು.

...ಶ್ನೆ: ಆದಿಮದ ಮುಂದಿನ ನಡೆಗಳು...

...ಾಮಯ್ಯ: ಆದಿಮಕ್ಕೆ ಈಗ ಹದಿನಾರರ ಪ್ರಾಯ. ...ೀ ನಡೆಯುತ್ತಿದೆ. ಮಹಾರಾಷ್ಟ್ರದ ಕಬೀರ್ ಕಲಾ ...ನ ಹನ್ನೊಂದು ಹುಡುಗರನ್ನು ಆದಿಮಕ್ಕೆ ಕರೆಸಿ ...ರ್ಶನ ಮಾಡಬೇಕೆಂದುಕೊಂಡಿದ್ದೇನೆ. ದುರಂತ ... ಈ ಹನ್ನೊಂದು ಹುಡುಗರನ್ನು ನಕ್ಸಲರೆಂಬ ...ಪಣೆ ಮಾಡಿ ಮಹಾರಾಷ್ಟ್ರ ಸರ್ಕಾರ ಜೈಲಿನಲ್ಲಿಟ್ಟಿದೆ. ...ರ್ ಕಲಾ ಮಂಚ್ ತಂಡದಲ್ಲಿರುವ ಶೀತಲ್ ಸಾಥೆ ... ಹುಡುಗಿ ತುಂಬು ಗರ್ಭಿಣಿ, ಅವಳನ್ನು ಆಕೆಯ ...ಕೊಂದಿಗೆ ಬಂಧಿಸಿ ಜೈಲಿನಲ್ಲಿಡಲಾಗಿದೆ. ಸಾಮಾಜಿಕ ...ರಾಟಗಾರ ಎಂದರೆ ಪ್ರಭುತ್ವಕ್ಕೆ ಕೊಲ್ಲುವುದು ಕಷ್ಟ. ...ೆ, ಮಾವೋ ಎಂದು ಬ್ರಾಂಡ್ ಮಾಡಿಬಿಟ್ಟರೆ ...ಸ್ತದು ಸುಲಭ. ಕಬೀರ್ ಕಲಾ ಮಂಚ್‌ನ ...ರನ್ನು, ಗಾಯಕರನ್ನು ಭೇಟಿಯಾಗುತ್ತಿದ್ದೇನೆ. ಅವರು ...ದ ಹೊರಬಂದ ಕೂಡಲೇ ಆದಿಮಕ್ಕೆ ಕರೆಸುವ ...ತ್ತಗಳನ್ನು ಮಾಡುವೆ. ■

ಅಮೆರಿಕೆಯಲ್ಲಿ ಫ್ಯಾಸಿಸಂ ಸಂಗತಿ ಏನು...



ಟ್ರೈವೋನ್

ಫ್ಲೋರಿಡ ಅಮೆರಿಕ ಸಂಯುಕ್ತ ಸಂಸ್ಥಾನದ (USA) ಪಶ್ಚಿಮದ ಒಂದು ರಾಜ್ಯ. ಈ ರಾಜ್ಯದಲ್ಲಿರುವ ಸ್ಯಾನ್ಫೋರ್ಡ್ ನಗರದ ಟ್ವಿನ್ಲೇಕ್ ಎಂಬ ಪ್ರದೇಶದಲ್ಲಿ 26... ಮನೆಗಳ ವಸತಿ ಸಮುಚ್ಚಯ (ಟೌನ್‌ಶಿಪ್) ಇದೆ. ಸುತ್ತಲೂ ಗಡಿ ಬೇಲಿಗಳನ್ನು ಹಾಕಿ, ಪ್ರದೇಶದ ಒಳಗೆ ಹೊರಗೆ ಓಡಾಡುವವರ ತಪಾಸಣೆ ನಡೆಸುವ ಭದ್ರತಾ ವ್ಯವಸ್ಥೆಯುಳ್ಳ ವಸತಿ ಪ್ರದೇಶಗಳನ್ನು ಗೇಟೆಡ್ ಕಮ್ಯುನಿಟಿ (ದಿಡ್ಡಿ ಬಾಗಿಲುಗಳ ಒಳಗೆ ಸುರಕ್ಷಿತವಾಗಿರುವ ಜನಸಮುದಾಯ) ಎನ್ನುತ್ತಾರೆ. ಟ್ವಿನ್ಲೇಕ್ ಅಂತಹ ಒಂದು ಗೇಟೆಡ್ ಕಮ್ಯುನಿಟಿ. ಅಲ್ಲಿನ ಮನೆಗಳಲ್ಲಿ ಶೇ.20ರಷ್ಟು ಕಪ್ಪು ಚರ್ಮದ ಆಫ್ರೋ ಅಮೆರಿಕನ್ನರೂ (ಇವರು ಅಮೆರಿಕೆಯಲ್ಲಿ ನಮ್ಮ ದಲಿತರ ಹಾಗೆ), 23ರಷ್ಟು ದಕ್ಷಿಣ ಅಮೆರಿಕಾ (ಲ್ಯಾಟಿನ್ ಅಮೆರಿಕ) ದೇಶಗಳ ಮೂಲದವರಾದ ಕಂದು ಬಣ್ಣದ ಹಿಸ್ಪಿಯಾನಿಕರೂ, 5 ರಷ್ಟು ಏಶಿಯಾ ಮೂಲದವರು (ಈ ಎರಡೂ ಸಮುದಾಯಗಳೂ ಅಲ್ಲಿ ನಮ್ಮ ಶೂದ್ರ ಸಮುದಾಯಗಳ ಥರ) ಹಾಗು 49ರಷ್ಟು ಬಿಳಿ ತೊಗಲಿನ ಅಮೆರಿಕನ್ನರೂ (ನಮ್ಮ ದೇಶದ ಮೇಲ್ಜಾತಿ ಮಂದಿ ಹಾಗೆ ಇರುವವರು) ವಾಸಿಸುತ್ತಿದ್ದಾರೆ. ಕಳೆದ ಕೆಲವು ವರ್ಷಗಳಲ್ಲಿ, ಆ ವಸತಿ ಪ್ರದೇಶದಲ್ಲಿ ಹಲವಾರು ಕಳವಿನ ಪ್ರಕರಣಗಳೂ, ಒಂದು ಗುಂಡಿಟ್ಟು ಕೊಂದ ಪ್ರಕರಣವೂ ನಡೆದಿದ್ದವು. ಈ ಹಿನ್ನೆಲೆಯಲ್ಲಿ ಸ್ಯಾನ್ಫೋರ್ಡಿನ ಪೊಲೀಸರ ಸಮ್ಮತಿಯ ಮೇರೆಗೆ, ವಸತಿ ಪ್ರದೇಶದ ನಿವಾಸಿಗಳು ಒಂದು 'ಕಾವಲು ಪಡೆ' ಕಟ್ಟಿಕೊಂಡಿದ್ದರು.

ಟ್ರೈವೋನ್ ಮಾರ್ಟಿನ್ 17 ವರ್ಷದ ಹೈಸ್ಕೂಲ್ ಓದುತ್ತಿದ್ದ ಕಪ್ಪು ಹುಡುಗ. ಅವನ ತಂದೆ ಟ್ರೇಸಿ ಮಾರ್ಟಿನ್ ಮತ್ತು ತಾಯಿ ಸೆಬ್ರಿನಾ ವಿಚ್ಛೇದನ ಪಡೆದಿದ್ದರು. ಟ್ರೈವೋನ್ ಅಮ್ಮನ ಜೊತೆ ಫ್ಲೋರಿಡದ ಮಿಯಾಮಿ ಗಾರ್ಡನ್ಸ್ ಎನ್ನುವಲ್ಲಿ ಇರುತ್ತಿದ್ದ. ಅವನ ಅಪ್ಪ ಮದುವೆಯಾಗಲು ಇಚ್ಛಿಸಿದ್ದ ಮಹಿಳೆ ಟ್ವಿನ್ಲೇಕ್ ವಸತಿ ಸಮುಚ್ಚಯದಲ್ಲಿ ವಾಸಿಸುತ್ತಿದ್ದಳು. 2012ರ ಫೆಬ್ರವರಿ ತಿಂಗಳಲ್ಲಿ ಅಪ್ಪನ ಜೊತೆ ಅವನು ಅಲ್ಲಿಗೆ ಬಂದಿದ್ದ. ಜಾರ್ಜ್ ಜಿಮ್ಮರ್ಮಾನ್ 27 ವರ್ಷದ ಒಬ್ಬ ಹಿಸ್ಪಿಯಾನಿಕ್. ಅವನು ತಾನು ಮದುವೆಯಾಗಲಿದ್ದ ಮಹಿಳೆಯ ಜೊತೆ ಆ ಹೊತ್ತಿಗೆ ಅಲ್ಲಿ ಮನೆ ಬಾಡಿಗೆಗೆ ತೆಗೆದುಕೊಂಡಿದ್ದ. ಆತ ಅಲ್ಲಿನ 'ಕಾವಲು ಪಡೆ'ಯ ಒಬ್ಬ ಸದಸ್ಯನಾಗಿದ್ದ. ಫೆಬ್ರವರಿ 26ರ ಸಂಜೆ 7.30 ರ ಹೊತ್ತಿಗೆ, ಜಿಮ್ಮರ್ಮಾನ್ ತನ್ನ ಜೀಪಿನಲ್ಲಿ ಬರುತ್ತಿರುವಾಗ ಆ ಹೈಸ್ಕೂಲ್ ಹುಡುಗ ಟ್ರೈವೋನ್ ಮನೆಗಳ ನಡುವೆ ನಡೆದುಕೊಂಡು ಹೋಗುತ್ತಿದ್ದುದ್ದನ್ನು ಕಂಡ. ಅವನಿಗೆ ಟ್ರೈವೋನ್ ಕಳ್ಳಕಾಕನಿರಬಹುದು ಅನಿಸಿತಂತೆ. ಸ್ಯಾನ್ಫೋರ್ಡಿನ ಪೊಲೀಸರಿಗೆ ಫೋನು ಮಾಡಿದ. ಅವರು "ಆಯ್ತು, ನೀನು ಏನು ಮಾಡಬೇಡ. ನಾವು ಬರುತ್ತೇವೆ' ಅಂದರು. ಅರ್ಧಗಂಟೆಯಲ್ಲಿ ಪೊಲೀಸರು ಸ್ಥಳಕ್ಕೆ ಬಂದರು. ಅಷ್ಟರಲ್ಲಾಗಲೇ ಜಿಮ್ಮರ್ಮಾನ್ ಟ್ರೈವೋನ್ನನ್ನು ಗುಂಡಿಟ್ಟು ಕೊಂದಿದ್ದ.

ಏನಾಯ್ತು...

'ಟ್ರೈವೋನ್ ಕಣ್ತಪ್ಪಿ ಹೋಗದಿರಲಿ ಅಂತ ಬೆಂಬತ್ತಿದ್ದೆ, ಮಧ್ಯೆ ಕಾಣೆಯಾದ. ವಾಪಸ್ಸು ನನ್ನ ಜೀಪಿನ ಹತ್ರ ಹೊರಟಿದ್ದಾಗ, ಯಾವ ಮಾಯದಲ್ಲೋ ನನ್ನ ಮೇಲೆ ಬಂದೆರಗಿದ. ನನ್ನನ್ನು ನೆಲಕ್ಕೆ ಹಾಕಿ ಹೊಡೆಯತೊಡಗಿದ. ನಾನು ಕಾಪಾಡಿ ಅಂತ ಬೊಬ್ಬೆ ಹೊಡೆದೆ, ನಿಮಗೂ ಫೋನು ಮಾಡ್ದೆ. ಅವನು ನನ್ನ ಜೇಬಲ್ಲಿದ್ದ ಬಂದೂಕಿಗೆ ಕೈಹಾಕಿದ. ನಾನು ಕೊಸರಾಡಿ, ಬಂದೂಕನ್ನು ಎಳಕೊಂಡು, ಸ್ವರಕ್ಷಣೆಗೆ ಶೂಟ್ ಮಾಡ್ಬಿಟ್ಟೆ..' - ಇದು ಜಿಮ್ಮರ್ಮಾನನ ಸಮಜಾಯಿಷಿ. ಅವನು ತನ್ನ ತಲೆಗೆ ಪೆಟ್ಟಾಗಿದೆ ಎಂದೂ ಪೊಲೀಸರಿಗೆ ತೋರಿಸಿದ. ಪೊಲೀಸರು, ಅವನು ಕೊಟ್ಟ ವಿವರಗಳನ್ನು ವಾಸ್ತವ ಎಂದು ತೀರ್ಮಾನಿಸದರು. ಯಾವ ಕೇಸು ಹಾಕದೆ ಬಿಟ್ಟುಬಿಟ್ಟರು. ಸುದ್ದಿ ಹಬ್ಬಿತು. ಕಪ್ಪು ಜನ ಹಾಗು ಮಾನವಹಕ್ಕು ಹೋರಾಟಗಾರರು ಪ್ರತಿಭಟನೆಗೆ ತೊಡಗಿದರು. ಕೊನೆಗೆ, ಫ್ಲೋರಿಡದ ರಾಜ್ಯಪಾಲ ವಿಶೇಷ ಶಿಕ್ಷಾಧಿಕಾರಿಯನ್ನು ನೇಮಿಸಿದ. ಆ ಶಿಕ್ಷಾಧಿಕಾರಿ ಜಿಮ್ಮರ್ಮಾನ್ ಕೊಲೆಗೈದಿದ್ದಾನೆ ಎಂದು ಕೇಸು ಹಾಕಿದರು. ಆರು ವಾರಗಳ ನಂತರ ಜಿಮ್ಮರ್ಮಾನ್‌ನನ್ನು ಬಂಧಿಸಲಾಯಿತು.

ಜೂನ್ 10, 2013 ರಂದು ಸ್ಯಾನ್ಫೋರ್ಡ್ ನ್ಯಾಯಾಲಯದಲ್ಲಿ ವಿಚಾರಣೆ ಶುರುವಾಯಿತು. ಅಮೆರಿಕೆಯಲ್ಲಿ, ನ್ಯಾಯಾಧೀಶರ ಜೊತೆ, ನಾಗರೀಕ ಸಮಾಜದಿಂದ ಆಯ್ದ ಜ್ಯೂರಿಗಳೂ (ತೀರ್ಪು ಮಂಡಳಿ) ವಿಚಾರಣೆಯನ್ನು ಆಲಿಸುತ್ತಾರೆ. ಅಂತಿಮವಾಗಿ, ಜ್ಯೂರಿಗಳು ಸೇರಿ ನ್ಯಾಯನಿರ್ಣಯ ಮಾಡಿ ನ್ಯಾಯಾಧೀಶರಿಗೆ ನೀಡುತ್ತಾರೆ. ನ್ಯಾಯಾಧೀಶರು ತೀರ್ಪು ಪ್ರಕಟಿಸುತ್ತಾರೆ. ಜಿಮ್ಮರ್ಮಾನ್‌ನ ವಿಚಾರಣೆಯಲ್ಲಿ ಇದ್ದದ್ದು 6 ಮಹಿಳಾ ಜ್ಯೂರಿಗಳು. ಜುಲೈ 13, 2013ರಂದು ಬಹುಮತದ ತೀರ್ಪನ್ನು ನ್ಯಾಯಾಲಯ ಪ್ರಕಟಿಸಿತು. ಜಿಮ್ಮರ್ಮಾನ್‌ನನ್ನು ನಿರ್ದೋಷಿ ಎಂದು ಬೇಷರತ್ ಬಿಡುಗಡೆ ಮಾಡಲಾಯಿತು.

ಮುಂದೇನಾಯ್ತು...

ಸ್ಯಾನ್ಫೋರ್ಡ್ ಅಗ್ನಿಶಾಮಕದಳದ ಸ್ವಯಂಸೇವಕರು ಜಿಮ್ಮರ್ಮಾನನ ಗೌರವಾರ್ಥ ಏರ್ಪಡಿಸಿದ್ದ ಸಾರ್ವಜನಿಕ ಸಭೆಯಲ್ಲಿ ಕೇಳಿ ಬಂದ ಮಾತುಗಳು: 'ಈ ಕರಿಯರು ನಮ್ಮ ಮೇಲೆ ಎರಗಿ ಅಪರಾಧವೆಸಗುವ ಭಯ, ಆತಂಕಗಳು ಸದಾ ನಮ್ಮಲ್ಲಿ ಮನೆಮಾಡಿರುತ್ತವೆ. ಆ ಕರಿ ಹುಡುಗನನ್ನು ಗುಂಡಿಟ್ಟು ಕೊಂದು ಜಿಮ್ಮರ್ಮಾನ್ ಒಬ್ಬ ಭವಿಷ್ಯದ ಅಪರಾಧಿಯನ್ನು ತೊಲಗಿಸಿದ. ಈ ಕೃತ್ಯವೆಸಗಿದ ಜಿಮ್ಮರ್ಮಾನ್ ತನ್ನ ಚರ್ಮದ ಬಣ್ಣವನ್ನು ತೊಳೆದುಕೊಂಡು ಒಬ್ಬ ಬಿಳಿಯನಾಗಿದ್ದಾನೆ, ನಿಜವಾದ ದೇಶಪ್ರೇಮಿ ಅಮೆರಿಕನ್ನನಾಗಿದ್ದಾನೆ..'

ತೀರ್ಪು ನೀಡಿದ ಜ್ಯೂರಿಗಳಲ್ಲಿ ಇಬ್ಬರು ಟೆಲಿವಿಷನ್ ಸಂದರ್ಶನದಲ್ಲಿ ಹೇಳಿದ್ದು:

ಜ್ಯೂರಿ :37- 'ಜಿಮ್ಮರ್ಮಾನ್ ಒಳಿತನು ಬಯಸುವ ಹೃದಯವಂತ. ಅವನು ಸಕಾರಣವಾಗಿಯೇ ಹತ್ಯೆ ಮಾಡಿದ್ದಾನೆ'.


ಜ್ಯೂರಿ : 88- 'ಬಿಳಿಯ ಹೆಂಗಸರು ಒಂದಾಗಿ ಜಿಮ್ಮರ್ಮಾನನನ್ನು ಬಿಡುಗಡೆಗೊಳಿಸಿದ್ದೇವೆ. ಇದು



ಲಿಂಗಸಮಾನತೆಯ ಜನಾಂಗೀಯವಾದದ ಚಾರಿತ್ರಿಕ ಕ್ಷಣ! ನಮ್ಮ ವಸತಿ ಪ್ರದೇಶಗಳಿಗೆ ನುಗ್ಗುವ ಈ ಕರಿಯ ಕೇಡಿಗಳಿಗೆ ತಕ್ಕ ಪಾಠ ಕಲಿಸಿದ್ದೇವೆ. ಇನ್ನಾವ ಕಾರಣಕ್ಕೂ ನಾವು ಬಿಳಿಯ ಸುಕೋಮಲೆಯರು ಎಂದು ನಮ್ಮ ಗಂಡಸರು ಆಡಿಕೊಳ್ಳೋ ಹಾಗಿಲ್ಲ... ವಿಶಿಷ್ಟ ಸ್ತ್ರೀವಾದಿ ವರಸೆಯಲ್ಲಿ ನಾವು ಈ ಕರಿಯರನ್ನು ಬಡಿದು, ಕಡಿದು ಕೊಚ್ಚಿ ಹಾಕೋ ಹೆಮ್ಮೆಯ ಪರಂಪರೆಯನ್ನು ಎತ್ತಿಹಿಡಿದಿದ್ದೇವೆ..'

ಇದೇ ಫ್ಲೋರಿಡಾದಲ್ಲಿ, 2010ರಲ್ಲಿ ಮಾರಿಸ್ಸ ಎಂಬ ಕಪ್ಪು ಮಹಿಳೆ ತನ್ನ ಮೇಲೆ ಹಲ್ಲೆ ಮಾಡಲು ಬಂದ ಗಂಡನನ್ನು ಬೆದರಿಸಲು ಬಂದೂಕಿನಿಂದ ತನ್ನ ಮನೆಯ ಸೂರಿಗೆ ಗುಂಡು ಹಾರಿಸಿದಳು. ತಾನು 'ಸ್ವರಕ್ಷಣೆ'ಗೆ ಈ ಕೃತ್ಯ ಎಸಗಿರೋದ್ರಿಂದ , ತನಗೆ ನ್ಯಾಯ ಸಿಗುತ್ತೆ ಅಂದುಕೊಂಡಿದ್ದಳು. ಇದೇ ನ್ಯಾಯಾಲಯ ಅವಳಿಗೆ 20 ವರ್ಷ ಜೈಲುವಾಸದ ಸಜೆ ನೀಡಿದೆ.

■ ಕೆ. ಫಣಿರಾಜ್



ಮಠಗಳಲ್ಲಿ ಸ್ವಾಮಿಗಳ ಜೊತೆ ಆನೆ ಸಾಕುವುದೇಕೆ?

☛ ಮದುವೆಗೆ ಮುಂಚೆ ಹುಡುಗೀರು 'ಒಂದು ನಿಮಿಷಾನೂ ನಿನ್ನ ಬಿಟ್ಟಿರಕ್ಕಾಗಲ್ಲ' ಅಂತ ಹೇಳುತ್ತಾರೆ. ಆದರೆ ಮದುವೆ ಆದ ಮೇಲೆ ಏನಂತಾರೆ?

- ಪ್ರಕಾಶ್, ಕುನ್ನಾಲ್

- ಆ ಮಾತು ನಿನ್ನ ಪಾಲಿನ ಕಹಿ ಸತ್ಯವಾಗಿ ಬದಲಾಗಿರುತ್ತದೆ.

☛ ಶಿವಣ್ಣನ ಮುಂದಿನ ಚಿತ್ರಗಳ ಹೆಸರು 'ಆರ್ಯನ್', 'ಭಜರಂಗಿ'.... ಏನಿದು ಚಡ್ಡಿ ವಾಸನೆ ಇದೆಯಲ್ಲ!?

- ಕೀಟಲೆ

- ಕಚ್ಚಿಪುಡಿನೇ ತಿಂದವನು ಇನ್ನು ಭಂಗಿ ಸೇದದಿರುತ್ತಾನಾ!

☛ ಹಂಪೆಗೂ ತಾಜ್‌ಮಹಲ್‌ಗೂ ಏನು ವ್ಯತ್ಯಾಸ?

- ಮಹಾದೇವ್ ಬಿರಾದಾರ್, ಅಥಣಿ

- ಹಂಪೆಯಾಗಲಿಕ್ಕೆ ವಿಪರೀತ ಒಳ ರೋಗಗಳೇ ಕಾರಣ.

☛ ಹುಡುಗಿಯರು ಲಿಪ್‌ಸ್ಟಿಕ್ ಹಚ್ಚಿಕೊಳ್ಳುವುದು ಕೃತಕ ಅನ್ನಿಸಲ್ವಾ?

- ಕಿರಣ್, ಸಿದ್ದಾಪುರ

- ಹುಡುಗರು ಹಣೆಗೆ ಕುಂಕುಮ ಹಚ್ಚಿಕೊಳ್ಳುವಷ್ಟಲ್ಲ.

☛ ಅವಮಾನ್ಯ ಗಂಡ ಎಂಬ ಗಾಂಧಿ ಏನನ್ನು ತೋರಿಸುತ್ತದೆ?

- ಸಿದ್ಧರಾಜು, ಹಲಗೂರು

- ಹೋರಾಟ ಮುಕ್ತಾಯಗೊಂಡ ಘಟ್ಟವನ್ನು.

☛ ಅಮೃತಹಸ್ತ ಅನ್ನುತ್ತಾರಲ್ಲ, ಹಾಗಂದರೇನು?

- ವೆಂಕಟರಾಜು, ಬಳ್ಳಾರಿ

ಐರನ್ ಲೆಗ್‌ನ ನೆಂಟ...

☛ ನೀವು ವಾಸ್ತು ನ್ಯೂಮರಾಲಜಿ ನಂಬ್ತೀರಾ?

- ಜ್ಯೋತಿಪ್ರಕಾಶ್, ಹಿರಿಯೂರು

- ಅವೆಲ್ಲಾ ಸ್ವಂತ ಬುದ್ಧಿ ಇರುವವರಿಗಲ್ಲ.

☛ ಸಿದ್ದರಾಮಯ್ಯನವರ ಹೊಸ ಬ್ರಾಂಡ್ ಲಿಕ್ಕರ್ ಯಾವಾಗ ಬರುತ್ತೆ?


- ಚೆನ್ನೇಶ್, ಶಿವಮೊಗ್ಗ

- ಕಾಂಗ್ರೆಸ್ ಪಾರ್ಟಿಯ ಖಜಾನೆ ತುಂಬುವಾಗ.

☛ ಮಠಗಳಲ್ಲಿ ಸ್ವಾಮಿಗಳ ಜೊತೆ ಆನೆ ಸಾಕುವುದೇಕೆ?

- ರವೀಂದ್ರ, ಪಿರಿಯಾಪಟ್ಟಣ

- ಮಾಡಬೇಕಾದ ಖರ್ಚುಗಳ ಬಗ್ಗೆ ಭಕ್ತರಿಗೆ ನೆನಪಿಸಲು.



☛ ಈಗಿನ ಹೊಸ ಸರ್ಕಾರದ ದಕ್ಷ ಮಂತ್ರಿ ಯಾರು?

- ಪರಮೇಶ್, ತುರುವೇಕೆರೆ

- ಅವರೆಲ್ಲಾ ಮೊದಲು ಕೆಲಸ ಶುರು ಮಾಡಲಿ. ಆಮೇಲೆ ನೋಡೋಣ!

☛ ಶಂಕರ್ ಬಿದರಿಗೆ ಉಮಾಶ್ರೀ ಜೊತೆ ಭಿನ್ನಾಭಿಪ್ರಾಯ ಏಕೆ ಇದೆಯಂತೆ?

- ಸವಿತಾ, ಚಿಕ್ಕೋಡಿ

- ಆತ ಉಮಾಶ್ರೀನ ಮಹಿಳಾ ಪೇದೆ ಅಂದುಕೊಂಡಿದ್ದನೇನೋ...!

☛ ನಂದಿನ ಹಾಲಿನ ರೇಟು ಯಾಕೆ ಪದೇ ಪದೇ ಏರುತ್ತಿದೆ?

- ಶ್ರೀಮತಿ ಮಂಜುಳಾ, ಕೆಂಗೇರಿ

- ಡೈರಿಯಲ್ಲಿನ ಕಳ್ಳಬೆಕ್ಕುಗಳ ಹಸಿವಿನಿಂದ.

☛ ಉಪ್ಪು ತಿಂದವನು ನೀರು ಕುಡಿತಾನೆ ಸರಿ. ಆದರೆ ಲಂಚ ತಿಂದವನು..?

- ವಿಶ್ವನಾಥ್, ದೇವನಹಳ್ಳಿ

- ವಿಸ್ಕಿ!

☛ ಮೀಡಿಯಾಗಳು ಮೋದಿಗೆ ಭಾರಿ ಪ್ರಚಾರ ಕೊಡುತ್ತಿದ್ದಾವೆ ಅಲ್ವಾ?

- ಕುಕ್ಕುಂಜೆ ಶರೀಫ್


- ಈಗ ಬಂಡವಾಳ ಹಾಕಿದರೆ ನಾಳೆ ಲಾಭ ಬರುತ್ತೇಂತ ಅವರ ನಿರೀಕ್ಷೆ.

☛ ಎದೆಗೆ ಬಿದ್ದ ಅಕ್ಷರ 8ನೇ ಮುದ್ರಣವಾದರೂ ಭೈರಪ್ಪನಿಗೆ ಸಿಕ್ಕಷ್ಟು ಪ್ರಚಾರ ಸಿಗುತ್ತಿಲ್ಲವಲ್ಲ ಯಾಕೆ?

- ಚಿದಾನಂದ, ಸಿಂಧನೂರು

- ಜಾತಿವಾದಿಗಳು ಅನಕ್ಷರಸ್ಥರಾಗಿರುತ್ತಾರೆ ಅದಕ್ಕೆ.

(ಸೂಚನೆ: ... 9980314276 SMS ... kamamachale@gmail.com ...)




ಅಮಿತ್‌ನನ್ನು ನಾನು ಮೊದಲನೇ ಸಲ ಮಾತಾಡಿಸಿದಾಗ ಆತ ತನ್ನ ವೈವಾಹಿಕ ಸಮಸ್ಯೆಯ ಬಗ್ಗೆ ಚರ್ಚಿಸಲು ಬಂದಿರಬಹುದು ಅಂದುಕೊಂಡಿರಲಿಲ್ಲ. ಅವನ ಜೀವನೋತ್ಸಾಹ ಹಾಗೂ ನಡವಳಿಕೆ ನೋಡಿ ಅವನ ಸಮಸ್ಯೆ ಏನಿರಬಹುದು ಎಂದು ಕುತೂಹಲವಾಯ್ತು, ಕೇಳಿದೆ.

"ಸಮಸ್ಯೆ ಏನಂತ ನನಗೇ ಗೊತ್ತಾಗ್ತಾ ಇಲ್ಲ ಮೇಡಂ, ಮದುವೆ ಆಗಿ ಆರು ತಿಂಗಳಾಗಿದೆ. ನನ್ನ ಹೆಂಡತಿ ಉಷಾ ಈ ಅವಧಿಯಲ್ಲಿ ಎಲ್ಲ ಸೇರಿ ಒಂದರಿಂದ ಒಂದೂವರೆ ತಿಂಗಳು ನನ್ನ ಮನೆಯಲ್ಲಿ ಇದ್ದಿರಬಹುದು. ಉಳಿದ ಸಮಯ ತನ್ನ ತವರುಮನೆಯಲ್ಲೇ ಇದ್ದಾಳೆ. ಮದುವೆಯ ನಂತರ ತಿಂಗಳಾದರೂ ಬರದೇ ಇದ್ದಾಗ ಅತ್ತೆ ಮಾವರನ್ನು ಕೇಳಿದೆ, 'ಏನು ನಿಮ್ಮ ಮಗಳು ಬರೋದಿಲ್ಲವಾ' ಅಂತ. ಅದಕ್ಕವರು 'ನಮ್ಮ ಮಗಳು ಬಹಳ ಸೂಕ್ಷ್ಮ ಸ್ವಭಾವದವಳು ಅವಳನ್ನು ಫೋರ್ಸ್ ಮಾಡೋದು ಬೇಡ. ಬರ್ತೀನಿ ಅಂದಾಗ ಕಳಿಸ್ತೀವಿ. ಬೇಜಾರು ಮಾಡ್ಕೋಬೇಡಿ' ಅಂದರು. ಆಮೇಲೆ ಬಂದಳು, ಆದರೆ ತನ್ನ ಪಾಡಿಗೆ ತಾನು ಇದ್ದಳು. ಚೆನ್ನಾಗಿ ಅಡುಗೆ ಮಾಡ್ತಾಳೆ, ಆದರೆ ಒಂದಕ್ಷರವೂ ಮಾತಾಡಲ್ಲ. ಕೇಳಿದ್ದಕ್ಕೆ ಉತ್ತರ ಕೊಡ್ತಾಳೆ. ತನ್ನ ಪಾಡಿಗೆ ತಾನು ಬೇರೆ ರೂಮಲ್ಲಿ ಇರ್ತಾಳೆ. ಮುಟ್ಕೋಕ್ಕೂ ಬಿಡಲ್ಲ" ಎಂದ.

"ಬೇರೆ ಹುಡುಗನ ಜೊತೆ ಅಫೇರ್ ಏನಾದ್ರೂ ಇದೆಯಾ? ತಂದೆತಾಯಿ ಬಲವಂತದಿಂದ ಮದುವೆ ಮಾಡಿದ್ದಾರೆ ಎನಿಸುತ್ತದಾ?" ಎಂದಿದ್ದಕ್ಕೆ ಅವನು "ಅಯ್ಯೋ ಅದನ್ನೂ ಕೇಳಿದೆ ಮೇಡಂ. ಬುಳುಬುಳು ಅಳೋಕ್ಕೆ ಶುರು ಮಾಡಿದ್ಲು, 'ನಾನು ಆ ಥರದ ಹುಡುಗಿ ಅಲ್ಲ, ಇನ್ನೊಮ್ಮೆ ಕೇಳ್ಬೇಡಿ' ಎಂದಳು. ಸುಮ್ಮನಾದೆ. ಸ್ವಲ್ಪ ದಿನದ ನಂತರ ತವರುಮನೆಗೆ ಹೋದವಳು ಮತ್ತೆ ಬರಲೇ ಇಲ್ಲ. ಎಷ್ಟು ಬಾರಿ ಹೋಗಿ ಕರೆದರೂ ಖಡಾಖಂಡಿತವಾಗಿ ಬರುವುದೇ ಇಲ್ಲ ಎಂದು ಹೇಳಿದಳು. ಅವಳ ತಂದೆತಾಯಿಯೂ ಅಷ್ಟೇ 'ಅವಳಿಗೆ ಇಷ್ಟವಾದಾಗ ಬರ್ತಾಳೆ ಬಿಡಿ. ಫೋರ್ಸ್ ಮಾಡಬೇಡಿ' ಎನ್ನುತ್ತಾರೆ. ಏನು ಮಾಡಲಿ ಗೊತ್ತಾಗ್ತಾ ಇಲ್ಲ" ಎಂದು ನಿಟ್ಟುಸಿರಿಟ್ಟ.

ಮದುವೆ ಆಗಿ ಇನ್ನೂ ವರ್ಷ ಆಗಿಲ್ಲ. ಹೀಗಾಗಿ ಸಾಮಾನ್ಯ ಸಂದರ್ಭದಲ್ಲಿ ಡೈವೋರ್ಸ್‌ಗೆ ಅರ್ಜಿ ಸಲ್ಲಿಸಲೂ ಬರುವುದಿಲ್ಲ. ಜೊತೆಗೆ ಬಂದು ಸೇರು ಎಂದು ನೋಟಿಸ್ ಕಳಿಸಿದರೆ ಅವಳು ಬರುವುದೂ ಇಲ್ಲ. ಇದೊಂದು ವಿಚಿತ್ರ ಸ್ಥಿತಿ. ಅಮಿತ್ ತಂದೆತಾಯಿಗೆ ಒಬ್ಬನೇ ಗಂಡು ಮಗ. ಇನ್ನೊಬ್ಬ ಮಗಳು ಮದುವೆ ಆಗಿ ದೂರದ ಊರಿನಲ್ಲಿ ಇದ್ದಾಳೆ. ಆದರೂ ಕೂಡ ಮಗನ ವೈವಾಹಿಕ ಬದುಕಲ್ಲಿ ತೊಂದರೆ ಆಗುವುದು ಬೇಡ ಎಂದು ಅವನಿಗೆ ಹೆಣ್ಣು ನೋಡಲು ಶುರು ಮಾಡಿದಾಗಲೇ ಬೇರೆ ಮನೆ ಮಾಡಿಕೊಟ್ಟಿದ್ದರು. ಅಮಿತ್ ಪ್ರೈವೇಟ್ ಕಂಪನಿಯಲ್ಲಿ ತುಂಬಾ ಒಳ್ಳೆ ಹುದ್ದೆಯಲ್ಲಿದ್ದಾನೆ. ಇಷ್ಟಿದ್ದೂ ಏನೇನೋ ತೊಂದರೆಗಳು. "ಕಾರಣವಿಲ್ಲದೆ ಗಂಡನ ಮನೆ ಬಿಟ್ಟು ಹೋಗಿದ್ದಿಯಾ. ಆದ್ದರಿಂದ ವಾಪಸು ಬಂದು ಸೇರಿಕೋ (Restitution of Conjugal Rights) ಇಲ್ಲವೇ ಸಮ್ಮತಿ ವಿಚ್ಛೇದನ (Mutual Divorce) ಕ್ಕೆ ಒಪ್ಪಿಗೆ ನೀಡು" ಎಂದು ನೋಟಿಸ್ ಕಳಿಸಿ, ಅವಳ ಉತ್ತರಕ್ಕಾಗಿ ಕಾಯ್ದರೆ, ಅವಳು ನೋಟಿಸಿಗೆ ಉತ್ತರಿಸಲೇ ಇಲ್ಲ. ಬದಲಾಗಿ ಉಷಾಳ ತಂದೆ ಅಮಿತ್‌ಗೆ ಫೋನ್ ಮಾಡಿ "ದಯವಿಟ್ಟು ದುಡುಕಿ ನಿರ್ಧಾರ ತಗೋಬೇಡಿ. ನಾವು ಅವಳಿಗೆ ತಿಳಿಸಿ ಹೇಳುತ್ತೇವೆ" ಎಂದು ತಿಂಗಳುಗಟ್ಟಲೆ ಸಮಯ ವ್ಯರ್ಥ ಮಾಡಿದರು. ಅಮಿತ್ ಹಾಗೂ ಅವನ ತಂದೆ ಫೋನ್ ಮಾಡಿದಾಗಲ್ಲ ಇಂದು ನಾಳೆ ಎನ್ನುತ್ತ ಕೊನೆಗೊಮ್ಮೆ "ನಮ್ಮ ಮಗಳು ನಿಮ್ಮ ಜೊತೆ ಹೋಗಲು ಒಪ್ಪಿದ್ದಾಳೆ, ಬಂದು ಕರೆದುಕೊಂಡು ಹೋಗಿ" ಎಂದು ತಿಳಿಸಿದರು. ಏನೋ ಒಳ್ಳೆಯದಾಗಬಹುದು ಎಂದು ಅಮಿತ್ ಅವರ ಮನೆಗೆ ಹೋದ. ಅಲ್ಲಿ ಉಷಾಳ ಹತ್ತಿರದ ಸಂಬಂಧಿಗಳೆಲ್ಲ ಸೇರಿದ್ದರು. ಎಲ್ಲರೂ ಸೇರಿ ಅಮಿತ್‌ಗೆ "ನೋಡಪ್ಪಾ ಎಲ್ಲ ತಿಳಿಸಿ ಹೇಳಿದ್ದೀವಿ. ಉಷಾ ಕೂಡ ಒಪ್ಪಿಕೊಂಡಿದ್ದಾಳೆ. ಇವತ್ತೇ ಅವಳನ್ನು ಕರೆದುಕೊಂಡು ಹೋಗು" ಎಂದು ಹೇಳಿದಾಗ ಅಮಿತ್ "ಆಯ್ತು ಉಷಾನೇ ಕರೀರಿ" ಎಂದ. ಅವಳು ಹೊರಗೆ ಬಂದಾಗ ಎಲ್ಲರ ಎದುರು "ಏನಮ್ಮಾ ಬರ್ತೀಯಾ ನಂಜೊತೆಗೆ. ಒಮ್ಮೆ ನನ್ನ ಎದುರು ಹೇಳಿಬಿಡು. ಈಗಲೇ ಕರೆದುಕೊಂಡು ಹೋಗುತ್ತೆ" ಎಂದ. "ಇಲ್ಲ" ಎಂದಳು. ಒಮ್ಮೆಲೇ ನೆಂಟರೆಲ್ಲ ಜೋರಾಗಿ ಅವಳನ್ನು ಪ್ರಶ್ನಿಸಲು ಶುರು ಮಾಡಿದಾಗ ಅಮಿತ್‌ನೇ "ನೋಡಿ ಅವಳನ್ನು ಯಾವುದಾದರೂ ಮನೋವೈದ್ಯರ ಹತ್ತಿರ ಕರೆದುಕೊಂಡು ಹೋಗಿ. ಸುಮ್ಮನೆ ನೀವೇ ತೀರ್ಮಾನ ತಗೋಬೇಡಿ" ಎಂದು ಹೇಳಿದ ಅಮಿತ್ ಅಲ್ಲಿಂದ ಎದ್ದು ಬಂದಿದ್ದ.



ಆದಾದ ಒಂದೆರಡು ವಾರದಲ್ಲಿ ಉಷಾ ಅಮಿತ್‌ಗೆ ಫೋನ್ ಮಾಡಿ "ನಾನು ನಿಮ್ಮ ಲಾಯರ್ ಹತ್ರ ಮಾತಾಡ್ಬೇಕು" ಎಂದದ್ದಕ್ಕೆ ಅಮಿತ್ ಅವಳನ್ನು ಕರೆದುಕೊಂಡು ಬಂದ. ಜೊತೆಗೆ ಅವಳ ತಂದೆಯೂ ಬಂದರು. ಏನು ವಿಷಯ ಎಂದರೆ ಅವಳು ಮತ್ತೆ ಸುಮ್ಮನೆ ಕುಳಿತಳು. ಅವಳ ತಂದೆ ಹಾಗೂ ಅಮಿತ್‌ನನ್ನು ಹೊರಗೆ ಕಳಿಸಿ ನಿಧಾನವಾಗಿ ಮಾತಾಡಲು ಶುರುಮಾಡಿದ ಕೂಡಲೇ ಬಿಕ್ಕಿಬಿಕ್ಕಿ ಅಳಲು ಶುರು ಮಾಡಿದಳು. "ನೀನು ಸ್ಪಷ್ಟ ಹೇಳದಿದ್ದರೆ ಎಲ್ಲರೂ ತೊಂದರೆ ಅನುಭವಿಸಬೇಕಾಗುತ್ತದೆ ಏನಾದ್ರೂ ಹೇಳು" ಎಂದಾಗ, ನಿಧಾನವಾಗಿ ಹೇಳಲು ಶುರು ಮಾಡಿದಳು. ಸ್ಕೂಲ್, ಕಾಲೇಜ್ ಎಲ್ಲದರಲ್ಲೂ ಅವಳು ಪ್ರತಿಭಾವಂತ ವಿದ್ಯಾರ್ಥಿನಿ. ಆದರೆ ಸಾಮಾನ್ಯವಾಗಿ ಆ ವಯಸ್ಸಿನಲ್ಲಿ ಇರಬಹುದಾದ ಹುಡುಗರ ಬಗೆಗಿನ ಆಸಕ್ತಿ, ಕುತೂಹಲ ಯಾವುದೂ ಅವಳಿಗೆ ಇರಲಿಲ್ಲ. ಅದು ಕೇವಲ ನಿರಾಸಕ್ತಿ ಮಾತ್ರ ಆಗಿರದೆ ಅದಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಇತ್ತು, ಅವಳ ತಾಯಿ ಅದನ್ನು ಗಮನಿಸಿಯೂ ಇದ್ದರು. ಉಷಾಗೆ ಗಂಡು ಹುಡುಕಲು ಪ್ರಾರಂಭಿಸಿದಾಗ ಅವಳ ನಿರಾಸಕ್ತಿ, ಉತ್ಪ್ರೇಕ್ಷೆ ಕಂಡು ಗಾಬರಿ ಆದ ತಂದೆತಾಯಿ ಅವಳನ್ನು ಮನೋವೈದ್ಯರ ಹತ್ತಿರ ಕರೆದುಕೊಂಡು ಹೋಗಿದ್ದರು. ಅವಳನ್ನು ಮಾತಾಡಿಸಿದ ನಂತರ ವೈದ್ಯರು ಲೈಂಗಿಕ ವೈದ್ಯರ ಬಳಿ (Sexologist) ಅವಳನ್ನು ಕಳಿಸಿಕೊಟ್ಟರು.

ಉಷಾಳನ್ನು ಪರೀಕ್ಷಿಸಿ ಅವಳೊಂದಿಗೆ ಸುದೀರ್ಘವಾಗಿ ಮಾತಾಡಿದ ನಂತರ, ಅವಳ ತಂದೆತಾಯಿಯನ್ನು ಕರೆದ ವೈದ್ಯರು, "ನೋಡಿ ನಿಮ್ಮ ಮಗಳಿಗೆ ಲೈಂಗಿಕಾಸಕ್ತಿಗಳು ಇಲ್ಲ. ತುಂಬಾ ಅಪರೂಪವಾಗಿ ಕೆಲವೊಬ್ಬರಿಗೆ ಹಾರ್ಮೋನ್‌ಗಳು ಏರುಪೇರಿನಿಂದಾಗಿ ಹೀಗೆ ಆಗುತ್ತದೆ. ಅಂತಹ ವ್ಯಕ್ತಿಗೆ ಲೈಂಗಿಕ ಆಕಾಂಕ್ಷೆಗಳು ಹುಟ್ಟುವುದಿಲ್ಲ. ಉಳಿದ ವಿಷಯಗಳಲ್ಲಿ ಅವರು ಎಲ್ಲರಂತೆ ಸಹಜವಾಗಿಯೇ ಇರುತ್ತಾರಾದರೂ ಗಂಡು ಹೆಣ್ಣಿನ ನಡುವಿನ ಸಂಬಂಧಗಳನ್ನು ನಿಭಾಯಿಸಲು ನಿಷ್ಫಲರಾಗಿರುತ್ತಾರೆ. ಅಂತಹ ಸಂದರ್ಭದಲ್ಲಿ ಅವರ ಮೇಲೆ ಒತ್ತಡ ಹೇರಿದರೆ ಅವರು ಮಾನಸಿಕ ಖಿನ್ನತೆಗೆ (Depression) ಒಳಗಾಗುವ ಸಾಧ್ಯತೆಗಳು ಹೆಚ್ಚು, ಆದ್ದರಿಂದ ಉಷಾಳ ಮದುವೆ ಮಾಡುವ ಬಗ್ಗೆ ಇನ್ನೊಮ್ಮೆ ವಿಚಾರ ಮಾಡಿ" ಎಂದು ಹೇಳಿಕಳಿಸಿದ್ದರು. ಆದರೂ ವೈದ್ಯರ ಮಾತನ್ನು ಉಪೇಕ್ಷಿಸಿದ ಉಷಾ ತಂದೆ ತಾಯಿ ಅಮಿತ್ ಜೊತೆ ಅವಳ ಮದುವೆ ಮಾಡಿ ಇಬ್ಬರ ಜೀವನವನ್ನೂ ಹಾಳು ಮಾಡಿದ್ದರು.

ನಮ್ಮ ಸಮಾಜದಲ್ಲಿ ಇನ್ನೂ ಮನುಷ್ಯನ ಭಾವನೆಗಳಿಗಿಂತ ಸಾಮಾಜಿಕ ನಿಂದನೆ, ಕಳಂಕದ ಭೀತಿಗೆ ಹೆಚ್ಚಿನ ಪ್ರಾಮುಖ್ಯತೆ ಕೊಡುವುದರಿಂದ ಉಷಾ ಹಾಗೂ ಅಮಿತ್‌ರಂತಹವರ ಜೀವಗಳು ಸಿಕ್ಕು ಒದ್ದಾಡುತ್ತವೆ. ವಯಸ್ಸಿಗೆ ಬಂದ ಮಗಳಿಗೆ ಮದುವೆ ಮಾಡದಿದ್ದರೆ ಜನ ಏನನ್ನುತ್ತಾರೆ ಎಂಬ ಒಂದೇ ಕಾರಣಕ್ಕೆ ಸ್ವತಃ ಮಗಳನ್ನು ಖಿನ್ನತೆಗೆ ದೂಡಲೂ ತಂದೆ ತಾಯಿ ಹಿಂದೆಮುಂದೆ ನೋಡಲಿಲ್ಲ. ಮಾತೆಲ್ಲ ಮುಗಿದ ಮೇಲೆ ಉಷಾ ನಿಸ್ತೇಜಳಾಗಿ ಕುಳಿತಿದ್ದಳು. "ಮೇಡಂ ಇನ್ನೂ ಅಮಿತ್‌ಗೆ ತೊಂದರೆ ಕೊಡಲು ಮನಸ್ಸು ಒಪ್ಪುವುದಿಲ್ಲ, ನಾನು ಮ್ಯೂಚುವಲ್ ಡೈವೋರ್ಸ್ ಕೊಡಲು ತಯಾರಿದ್ದೇನೆ. ನೀವು ಅರ್ಜಿ ತಯಾರಿಸಿ, ನಾನು ಬಂದು ಸಹಿ ಹಾಕುತ್ತೇನೆ" ಎಂದು ಹೊರಹೋದಳು. ಅವಳು ಹೊರಹೋದ ತಕ್ಷಣ ಒಳಬಂದ ತಂದೆ, "ಮೇಡಂ ದಯವಿಟ್ಟು ನಮ್ಮ ಮಗಳ ಮಾತು ಕೇಳಬೇಡಿ. ಅವಳಿಗೆ ಗೊತ್ತಿಲ್ಲ, ಅಮಿತ್ ಮುಂದೆ ಯಾವ ಹೆಂಗಸಿನೊಂದಿಗೆ ಬೇಕಾದರೂ ಸಂಬಂಧ ಇಟ್ಟುಕೊಳ್ಳಲಿ. ನಾವ್ಯಾರೂ ಅಡ್ಡ ಬರುವುದಿಲ್ಲ, ಆದರೆ ಡೈವೋರ್ಸ್ ಮಾತ್ರ ಕೊಡಿಸಬೇಡಿ" ಎಂದು ಗೋಗರೆದರು.

ಅವರ ಮಾತು ಕೇಳಿ ಹೇಸಿಗೆ ಆದಂತಾಯ್ತು, ಮದುವೆ ಅನ್ನುವ ಸಂಬಂಧವನ್ನು ಕೇವಲ ಲೈಂಗಿಕ ಸಂಬಂಧ ಅನ್ನುವಂತೆ ನೋಡುವ ಅವರ ವಿಚಾರಗಳು ಜಿಗುಪ್ಸೆ ಬರಿಸಿದವು. ಮದುವೆಯ ನಂತರ ಗಂಡಹೆಂಡತಿಯ ನಡುವೆ ಹುಟ್ಟುವ ಆತ್ಮೀಯತೆ, ಕಷ್ಟಕಾಲದಲ್ಲಿ ಒಬ್ಬರಿಗೊಬ್ಬರು ಆಧಾರ ಆಗುವ ಆಸರೆ ಮನಸ್ಸು, ಮಕ್ಕಳು, ಬಾಂಧವ್ಯ ಇದೆಲ್ಲ ಬೇರೊಬ್ಬ ಹೆಂಗಸಿನೊಂದಿಗೆ ಸಂಬಂಧ ಬೆಳೆಸಿದರೆ ಸಿಗುತ್ತದಾ? ಹೆಸರಿಗೆ ಮಾತ್ರ ಗಂಡಹೆಂಡತಿ ಎಂದು ಇದ್ದು ಸಮಾಜದ ಕಣ್ಣಿಗೆ ಮಣ್ಣೆರಚಲು ಆಗುತ್ತದಾ? ಅದ್ಹೇಗೆ ಇಷ್ಟೊಂದು ತಾತ್ಕಾಲಿಕ ನಿರ್ಧಾರ ತೆಗೆದುಕೊಳ್ಳುತ್ತಾರೆ ಜನ ಎನಿಸಿತು.

ಯಾವುದೇ ತಪ್ಪಿಲ್ಲದ ಅಮಿತ್ ಇಂಥ ಹುಸಿ ಸಂಬಂಧದಲ್ಲಿ ಸಿಲುಕಿ ಒದ್ದಾಡುತ್ತಿದ್ದ. ಇದಾದನಂತರ ಎಷ್ಟೋ ಬಾರಿ ಅರ್ಜಿ ತಯಾರಿಸಿ ಸಹಿ ಮಾಡಲು ಕರೆದಾಗಲೆಲ್ಲಾ ಉಷಾ ತಂದೆ ಅವಳನ್ನು ಹೆದರಿಸಿ ಬರಲು ಬಿಡಲಿಲ್ಲ, ಇಷ್ಟರಲ್ಲಿ ಅನವಶ್ಯಕವಾಗಿ ಮೂರು ವರ್ಷಗಳು ಕಳೆದುಹೋದವು. ಸೊಸೆ ಏಕೆ ಬಂದಿಲ್ಲ ಎಂಬ ಮಾತಿಗೆ ಅಮಿತ್ ತಂದೆ ತಾಯಿ ಉತ್ತರ ಹೇಳಲು ಆಗದೆ, ಮಗನ ಸ್ಥಿತಿ ಬಗ್ಗೆ ಮರುಕ ಪಡುತ್ತ ಪೇಚಾಡಿದರು.

ಕೊನೆಗೊಮ್ಮೆ ಉಷಾ ತಾನಾಗಿ ಫೋನ್ ಮಾಡಿ "ನಾನು ಕೋರ್ಟಿಗೆ ಬಂದು ಸಹಿ ಹಾಕುತ್ತೇನೆ" ಎಂದು ಹೇಳಿದಳು. ಅವಳ ತಂದೆ ಒಂದು ಮಹಿಳಾ ಸಂಘಟನೆಗೆ ಹೋಗಿ ತಮ್ಮ ಮಗಳಿಗೆ ನ್ಯಾಯ ಕೊಡಿಸುವಂತೆ ಕೇಳಿದ್ದರಿಂದ ಉಷಾಳ ಜೊತೆ ಸಂಘಟನೆಯ ಲಾಯರ್ ಹಾಗೂ ಇಬ್ಬರು ಸದಸ್ಯೆಯರು ಬಂದಿದ್ದರು.


ಮಧ್ಯಸ್ಥಿಕಾ ಕೇಂದ್ರದ ಎದುರು ಮಾತನಾಡುವಾಗ ಸಂಘ ಹಾಗೂ ಉಷಾ ತಂದೆ 10 ಲಕ್ಷ ರೂಪಾಯಿ ಪರಿಹಾರ ನೀಡಬೇಕೆಂದು ಕೇಳಿದಾಗ ಅಮಿತ್‌ಗೆ ದಿಕ್ಕೇ ತೋಚಲಿಲ್ಲ. "ಅಲ್ಲಾ ನಾನೇನು ತಪ್ಪು ಮಾಡಿದ್ದೇನೆ? ಪರಿಹಾರ ಏಕೆ ಕೊಡಲಿ? ಬದಲಾಗಿ ನನ್ನ ಜೀವನದ ಮೂರು ವರ್ಷಗಳು ಹಾಳಾಗಿವೆ. ಅದೂಅಲ್ಲದೆ ಇನ್ನು ಮುಂದೆ 'ಡೈವೋರ್ಸಿ' ಎಂಬ ಹಣೆಪಟ್ಟಿ ಬೇರೆ ಕಟ್ಟಿಕೊಂಡು ತಿರುಗಾಡಬೇಕು. ಬೇರೆ ಮದುವೆ ಆಗಲು ಹೊರಟರೆ ಹುಡುಗಿಯ ತಂದೆ ತಾಯಿಯರ ನೂರಾರು ಪ್ರಶ್ನೆಗಳಿಗೆ ಉತ್ತರಿಸಬೇಕು. ಮತ್ತೆ ನನ್ನ ಜೀವನ ಮೊದಲಿನ ಹಾಗೆ ಆಗುತ್ತೆ ಎಂಬ ಗ್ಯಾರಂಟಿಯೂ ಇಲ್ಲ" ಎಂದ. ಅದಕ್ಕೆ ಉಷಾ ಸುಮ್ಮನೆ ಇದ್ದರೂ ಅವಳ ಸೂತ್ರ ತಮ್ಮ ಕೈಯಲ್ಲಿಯೂ ಇದೆ ಎಂಬಂತೆ ಮಹಿಳಾ ಸಂಘಟನೆಯ ಸದಸ್ಯೆಯೊಬ್ಬರು ಪರೋಕ್ಷವಾಗಿ ಅಮಿತ್‌ಗೆ ಬೆದರಿಕೆ ಹಾಕಲು ಪ್ರಾರಂಭಿಸಿದರು. "ನೋಡಿ ಅಮಿತ್, ನೀವು ಹಣ ಕೊಡದಿದ್ದರೆ ಹೇಗೆ ತೆಗೆದುಕೊಳ್ಳಬೇಕೆಂಬುದು ನಮಗೆ ಗೊತ್ತು, ನಿಮ್ಮ ಹೆಂಡತಿ ನಿಮ್ಮ ಮೇಲೆ ಯಾವ ಯಾವ ಕಂಪ್ಲೇಂಟ್ ಕೊಡಬಹುದು ಎಂಬುದು ನಿಮಗೂ ಗೊತ್ತಿದೆ. ಆದ್ದರಿಂದ ಸುಮ್ಮನೆ ವಿಷಯ ಬೆಳೆಸಬೇಡಿ" ಎಂದು ಸೆಕ್ಷನ್ **498A** ಎಂಬ ಅಸ್ತ್ರದ ಝಳಕು ತೋರಿಸಿದರು.

"ಅಲ್ಲ ಉಷಾ ಇದೇನು ಅಮಿತ್ ಕಡೆಯಿಂದ ಪರಿಹಾರ ಕೇಳುವುದು ಯಾವ ನ್ಯಾಯ" ಎಂದರೆ ಅವಳು ಬಾಯಿ ಬಿಡಲಿಲ್ಲ, ಬದಲಾಗಿ ಅವಳ ತಂದೆ "ಅಲ್ಲ ನಮ್ಮ ಮಗಳನ್ನು ಇನ್ನು ಮೇಲೆ ಜೀವನಪೂರ್ತಿ ನಾವೇ ಸಾಕಬೇಕು. ಅಲ್ಲದೆ ಅವಳಿಗೆ ಮನೋವೈದ್ಯರ ಬಳಿ ಖಿನ್ನತೆಗೆ ಚಿಕಿತ್ಸೆಯನ್ನೂ ಕೊಡಿಸಬೇಕು. ಅದಕ್ಕೆಲ್ಲಾ ಹಣ ಬೇಕು. ಅಷ್ಟನ್ನಾದರೂ ನೀವು ಕೊಡಲೇಬೇಕು" ಎಂದಾಗ ನಮಗೆ ವಿಚಿತ್ರ ಎನಿಸಿತು.

"ಮಗಳಿಗೆ ಮನೋರೋಗ ಇರುವುದನ್ನು ಮುಚ್ಚಿಟ್ಟು ಮೋಸದಿಂದ ಮದುವೆ ಮಾಡಿ ಒಬ್ಬ ಅಮಾಯಕನ ಜೀವನ ಹಾಳು ಮಾಡಿದ್ದೂ ಅಲ್ಲದೆ, ಅವಳ ಚಿಕಿತ್ಸೆಗೆ ಹಣ ಕೇಳ್ತೀರಲ್ಲಾ, ತಂದೆಯಾಗಿ ಅದು ನಿಮ್ಮ ಕರ್ತವ್ಯ ಅಲ್ಲವಾ" ಎಂದರೆ, "ಅದೆಲ್ಲ ಮದುವೆ ಆದ ಮೇಲೆ ಗಂಡನ ಜವಾಬ್ದಾರಿ ಮೇಡಂ" ಎಂಬ ಉಡಾಫೆ ಉತ್ತರ ಕೊಟ್ಟರು. ಸಂಘದ ಸದಸ್ಯೆಯರು "ನೋಡಿ ಮೇಡಂ ನೀವು ನೋಸಗೋಸ ಅಂತ ಮಾತಾಡಿದರೆ ನಾವು ಬೇರೆ ದಾರಿ ಹಿಡಿಯಬೇಕಾಗುತ್ತದೆ" ಎಂದು ಫೈನಲ್ ವಾರ್ನಿಂಗ್ ಕೊಟ್ಟರು. ಗಂಡನ ಪರವಾಗಿ ಕೇಸು ಮಾಡುವುದರ ಜೊತೆಗಿನ ತೊಂದರೆಗಳ ಒಂದು ಮುಖದ ಪರಿಚಯ ಆದಂತಾಗಿತ್ತು.

ಕೊನೆಗೆ ಮಧ್ಯಸ್ಥಿಕೆಗಾರರು ನಡುವೆ ನಿಂತು ಮೂರು ಲಕ್ಷಕ್ಕೆ ಬಗೆಹರಿಸಿದಾಗ ಅಮಿತ್ ವಿಷಾದದ ನಗು ನಕ್ಕು "ಖಾಯಾ ಪಿಯಾ ಕುಛ್ ನಹೀ, ಗ್ಲಾಸ್ ತೋಡಾ ಬಾರಾ ಆಯಾ" (ಉಂಡದ್ದಲ್ಲ ಕುಡಿದದ್ದಲ್ಲಾ ಹನ್ನೆರಡಾಣೆಯ ಗ್ಲಾಸು ಒಡೆದದ್ದಾಯ್ತು) ಎಂದಾಗ ನನಗೂ ನಗು ಬಂತು. ಆದರೆ ಮೂರು ಲಕ್ಷ ಕಳೆದುಕೊಂಡು ನಗುವ ಸ್ಥಿತಿಯಲ್ಲಿ ಬಹಳ ಜನ ಇರುವುದಿಲ್ಲ, ಇಂತಹ ಎಷ್ಟೋ ಕೇಸುಗಳಲ್ಲಿ ಹೆಂಡತಿಯನ್ನು ದೋಷಿ ಎನ್ನಲಾಗದಿದ್ದರೂ, ತಮ್ಮ ಮೌನ ಹಾಗೂ ಯಾವುದೇ ನಿರ್ಧಾರ ಕೈಗೊಳ್ಳದ ಮನಸ್ಥಿತಿಯಿಂದ ಗಂಡನ ಮೇಲೆ ಆಗುವ ಅನ್ಯಾಯದಲ್ಲಿ ಅವರೂ ಭಾಗಿ ಆದಂತೆಯೇ. ಇಂತಹುದೇ ಘಟನೆಗಳು ಎಷ್ಟೋ ಹೆಂಗಸರ ಜೀವನದಲ್ಲಿಯೂ ನಡೆಯುತ್ತವೆ. ಹಾಗೆ ನೋಡಿದರೆ ಹೆಚ್ಚಾಗಿ ನಡೆಯುತ್ತವೆ ಎನ್ನಬಹುದು. ಆದರೆ ಇಲ್ಲಿ ಗಂಡಸಿಗೆ ಆಗುವ ಅನ್ಯಾಯದ ಮಾತು ನಡೆದಿರುವುದರಿಂದ ಈ ಕೇಸನ್ನು ಹೇಳಿದ್ದೇನೆ.

ಎಲ್ಲಿಯವರೆಗೆ ಮನುಷ್ಯ ಸಂಬಂಧಗಳಿಗಿಂತ ಸಮಾಜದ ಭೀತಿಗೆ ಜನ ಹೆದರುತ್ತಾರೋ, ಎಲ್ಲಿಯವರೆಗೆ ಕಾನೂನನ್ನು ತಮ್ಮ ಒಳಿತಿಗಿಂತ ತಮ್ಮ ಅನ್ಯಾಯವನ್ನು ಮರೆಮಾಚುವ ಅಸ್ತ್ರದಂತೆ ಬಳಸುತ್ತಾರೋ ಅಲ್ಲಿಯವರೆಗೆ ಇಂತಹ ಅನ್ಯಾಯಗಳು ನಡೆಯುತ್ತಲೇ ಇರುತ್ತವೆ.



(ಮುಂದುವರೆಯುವುದು)

● ರಾಜಲಕ್ಷ್ಮೀ ಅಂಕಲಗಿ

ಅವರು ನನ್ನ ಬಾಳ ಸಂಗಾತಿ



ಆತ್ಮೀಯರೇ,

ಯಾವಾಗಲೋ, ಎಲ್ಲಿಯೋ ಕಂಡ ಆ ಮುಖವನ್ನು ...ಸಿಕೊಂಡು, ಗುರುತು ಹಿಡಿದು, ಸಿರಿಮನೆ ನಾಗರಾಜ್ ...ನಾಲ್ಕು ಒಳ್ಳೆ ಮಾತುಗಳನ್ನು ಬರೆದದ್ದಕ್ಕೆ ಧನ್ಯವಾದಗಳು.

ಅವರು ನನ್ನ ಬಾಳಸಂಗಾತಿ.

ನಾವು ಶೃಂಗೇರಿ ಬಳಿಯ ಕೊಪ್ಪದಲ್ಲಿ ಸೆಟ್ಲ್ ಆಗಿದ್ದೆವು: ...ರಾಜರು 'ಮುಂಜಾವು' ಎಂಬ ಪತ್ರಿಕೆ ನಡೆಸುತ್ತಿದ್ದರು. ...ೆ ಚೆನ್ನಾಗಿಯೇ ನಡೆಯುತ್ತಿತ್ತು. ಪತ್ರಿಕೆಗೆ ಆದರದೇ ... ಒಂದು ಬಳಗ ರೂಪುಗೊಂಡಿತ್ತು. ...ಖ್ಯವಾಗಿ ದಲಿತರಿಗೆ, ದಮನಿತರಿಗೆ ...ರಿಗಾದರೂ ಅನ್ಯಾಯ ಆದಾಗ ...ಭಟಿಸುವುದು ಮಾಮೂ ಲಾಗಿತ್ತು. ...ತರ್ಜಾತಿ ವಿವಾಹಗಳನ್ನೂ ...ಬಲಿಸುತ್ತಿದ್ದರು. ಆ ಊರಿನ ಬಳಿ ...ಬ್ಬಗದ್ದೆ ಎಂಬಲ್ಲಿ ಕಾಡುಗಳ್ಳರು ...ಸದಿಂದ ಕಾಡು ಕಡಿಯುತ್ತಿದ್ದರು. ಅಲ್ಲಿಯ ...ಸಿಗಳಿಗೆ ಆ ಕಾಡು ಹೋದರೆ, ನೀರಿನ ಆಸರೆ ... ಹೋಗುತ್ತಿತ್ತು. ಹಾಗಾಗಿ ಅವರದನ್ನು ತಡೆಯುವ ...ಯತ್ನ ನಡೆಸುತ್ತಿದ್ದರು; ಆದರೆ ಈ ಶ್ರೀಮಂತ ಕುಳಗಳು ...ತ್ತಿರಲಿಲ್ಲ. ಕೊನೆಗೂ ಕಾಡು ಕಡಿಯಲು ಶುರು ಮಾಡಿ, ...ಸಿಗಳ ಕಣ್ಣೆದುರೇ, ಮಜಭೂತಾದ ಸುಮಾರು 350 ...ರಗಳನ್ನು 8 ದಿನಗಳಲ್ಲಿ ಉರುಳಿಸಿಯೇ ಬಿಟ್ಟರು. ...ಸಿಗಳು ಪತ್ರಿಕೆಗೆ ದೂರು ಕೊಡಲು ಓಡಿಬಂದರು.

ಒಂದು ಪತ್ರ

ಸಂಪಾದಕರಾದ ನಾಗರಾಜರು, ತನ್ನ ಪ್ರಗತಿಪರ ಬಳಗದವರೊಡಗೂಡಿ, ಸಾರ್ವಜನಿಕರ ಹಿತಾಸಕ್ತಿ ಮೊಕದ್ದಮೆ ಹಾಕಿ, ಯಾವಯಾವ ಸೀಟಲ್ಲಿ ಅನ್ಯಾಯ ನಡೆದಿದೆಯೆಂದು ಅರಣ್ಯಾಧಿಕಾರಿಗಳ ಗಮನಕ್ಕೆ ತಂದು, ಕೇಸ್ ಕೋರ್ಟಿನ ಮುಂದೆ ಬರುವಂತೆ ಮಾಡಲು ಶಕ್ತರಾದರು; ಕೂಡಲೇ ನ್ಯಾಯಾಧೀಶರು ತಡೆಯಾಜ್ಞೆ ಕೊಟ್ಟರು. ಕಾಡು ಕಡಿಯುವುದು ನಿಂತಿತು. ಮುಂದೆ ಕೇಸು ನಡೀತಿತ್ತು. ಆದರೆ ಈ ವಿಷಯ ರಾಜ್ಯದ ಮುಖ್ಯ ಪತ್ರಿಕೆಗಳಲ್ಲಿ (ಲಂಕೇಶ್ ಪತ್ರಿಕೆ ಸೇರಿದಂತೆ) ಬಂದು ಅಲ್ಲಿಯ ನಿವಾಸಿಗಳಿಗೆ ಜನ ಬೆಂಬಲ ಸಿಕ್ಕಿತು. ಆದರೆ ನಾಗರಾಜ್ ಮೇಲೆ ಹಲ್ಲೆಗಳು ನಡೆದವು. ಕೊಲೆ ಬೆದರಿಕೆ ಬಂತು, ಪ್ರಯತ್ನವೂ ನಡೆಯಿತು. ಅದೃಷ್ಟವಶಾತ್, ಇಂತಹ ದುಷ್ಟ ಪ್ರಯತ್ನಗಳು ಫಲಿಸಲಿಲ್ಲ. ಆದರೆ ಮತ್ತೆ ಇಂತಹ ಪ್ರಯತ್ನಗಳು ಮರುಕಳಿಸಬಹುದಾದ ಆತಂಕ ಇದ್ದೇ ಇತ್ತು.

ಪೊಲೀಸರು ರಕ್ಷಣೆ ಕೊಡಬಹುದೆಂಬ ಭರವಸೆ ಯಾದರೂ ಇತ್ತೇ?

ಇಲ್ಲ...!

ಅದೇ ಸಮಯದಲ್ಲಿ ಕರ್ನಾಟಕ ವಿಮೋಚನಾ ರಂಗ ಸಂಘಟನೆ ಬಹಳ ದೊಡ್ಡ ದೊಡ್ಡ ಹೋರಾಟಗಳನ್ನು ನಡೆಸುತ್ತಿತ್ತು. ನಾಗರಾಜರು ಆ ಸಂಘಟನೆ ಸೇರಿ ಆಗ ಬೀದರಿನಲ್ಲಿ ನಡೆಯುತ್ತಿದ್ದ 'ಪರಿಸರ ಮಾಲಿನ್ಯ ವಿರೋಧಿ' ಹೋರಾಟದೊಂದಿಗೆ ಕೈಜೋಡಿಸಿದರು. ಆಗ ನಾಗರಾಜ ಅಲ್ಲಿಯ 9 ಹಳ್ಳಿಗಳಲ್ಲಿ ಓಡಾಡಿ ಜನರನ್ನು ಸಂಘಟಿಸಿದರು. ಜನರು ಫ್ಯಾಕ್ಟರಿ ಬಂದ್ ಮಾಡಬೇಕೆಂಬ ಹೋರಾಟ ಶುರು ಮಾಡಿಕೊಂಡರು. ಪೊಲೀಸರು ಲಾಠಿಚಾರ್ಜ್ ಮಾಡಿ, ಹೋರಾಟದ ನಾಯಕರನ್ನೆಲ್ಲಾ ಜೈಲಿಗೆ ತಳ್ಳಿದರು. ರಾತ್ರಿಯೆಲ್ಲಾ ಹಳ್ಳಿ ಕಡೆ ಹೋಗಿ ಹೆಂಗಸರನ್ನು ಬೆದರಿಸಿದರು. ನಾಗರಾಜ್ ಮೇಲೆ ಸುಳ್ಳು ಕೇಸು ಹಾಕುವುದನ್ನು ಶುರು ಮಾಡಿದರು. ಕೊನೆಗೂ ಕೆಮಿಕಲ್ ಫ್ಯಾಕ್ಟರಿಗಳೆಲ್ಲಾ ಬಂದ್ ಆಗಿ ಆ ಹೋರಾಟ ಜಯ ಪಡೆಯಿತು. ಪ್ರಜಾವಾಣಿಯಲ್ಲಿ ಇದರ ಬಗ್ಗೆ ಸಂಪಾದಕೀಯ ಬಂತು. ಆದರೆ ಜನರ ಮತ್ತು ನಾಗರಾಜರ ಮೇಲೆ ಮಾತ್ರ ಕೇಸುಗಳನ್ನು ಪೇರಿಸಿದರು.

ಮುಂದೆ ಬೆಂಗಳೂರಲ್ಲಿ ಬಿಎಂಐಸಿ ಹೋರಾಟ, ಅನಂತರ ಮಲೆನಾಡಲ್ಲಿ ನ್ಯಾಷನಲ್ ಪಾರ್ಕ್ ಹೋರಾಟಗಳು ಶುರು ಆದವು. ಈ ಹೋರಾಟಗಳಲ್ಲಿ ಸಕ್ರಿಯವಾಗಿ ಕೆಲಸ ಮಾಡುವ ಅಗತ್ಯ ಬಿದ್ದಾಗ ಇತರ ಹಲವರಂತೆ ನಾಗರಾಜ್ ಕೂಡಾ ಆ ಜವಾಬ್ದಾರಿಗೆ ಹೆಗಲು ಕೊಟ್ಟರು. ಜೀವನಪೂರ್ತಿ ಸಾಮಾಜಿಕ ಕೆಲಸಕ್ಕೆ ಮುಡಿಪಾಯಿತು. ಆ ಹೊತ್ತಿಗೆ ನಮ್ಮ ಮಗಳು ಮಲ್ಲಿಗೆ 10-12 ವರ್ಷದ ಮಗು. ತಂದೆ ಪುರುಸೊತ್ತಿದ್ದಾಗ ಮನೆ ಕಡೆ ಬಂದರೆ, ಮುಖ ಕಾಣಲು ಸಿಗುತ್ತಿತ್ತು. ಯಾವಾಗ ನ್ಯಾಷನಲ್ ಪಾರ್ಕ್ ಹೋರಾಟ ಸೀರಿಯಸ್ ಆಗಿ ಬೇರೆ ದಾರಿ ಹಿಡಿಯಿತೋ, ನಾಗರಾಜ್ ಮಲೆನಾಡಿನವರೇ ಆದ್ದರಿಂದ, ಪಾರ್ಕ್ ಒಳಗಡೆ ಏನು ನಡೆದರೂ ಪೊಲೀಸರು ಕೇಸಲ್ಲಿ ಸುಳ್ಳುಸುಳ್ಳೇ ನಾಗರಾಜ್ ಅವರ ಹೆಸರನ್ನು ಸೇರಿಸುವುದು ಶುರುವಾಯಿತು. ಎನ್‌ಕೌಂಟರ್ ಯುಗವೂ ಕಾಲಿಟ್ಟಿತು. ಕಾಡಲ್ಲಿರುವ ಎಂತೆಂಥ ಒಳ್ಳೆ ಹೋರಾಟಗಾರರೆಲ್ಲ ಎನ್‌ಕೌಂಟರ್‌ನಲ್ಲಿ ತಮ್ಮ ಪ್ರಾಣ ಕಳಕೊಂಡರು. ಇಷ್ಟೆಲ್ಲಾ ಸುಳ್ಳು ಕೇಸು ಹಾಕಿದವರು, ನಡುರಸ್ತೆಯಲ್ಲೇ ಎನ್‌ಕೌಂಟರ್ ಮಾಡಿ, ಹೆಣವನ್ನು ಕಾಡಿಗೊಯ್ದು ಬಿಸಾಕಿ, ಕಾಡಿನೊಳಗೆ ಹೋರಾಟದಲ್ಲಿ ಎನ್‌ಕೌಂಟರ್ ಆಯಿತೆಂದು ಹೇಳುವುದಿಲ್ಲ ಎಂಬ ಭರವಸೆ ಇದೆಯೇ? ಪರಿಣಾಮವಾಗಿ ನಮಗೆ ಆಗೊಮ್ಮೆ ಈಗೊಮ್ಮೆ ಕಾಣುತ್ತಿದ್ದ ನಾಗರಾಜ್ ಅವರ ಮುಖ ನಿಧಾನವಾಗಿ ಮರೆಯಾಗತೊಡಗಿತು.



ಕುಟುಂಬ ಛಿದ್ರವಾಯಿತು.

ಹಾಗಾದರೆ, ಹೋರಾಟವನ್ನು ಮಾಡಲೇಬಾರದೇ? ಅನ್ಯಾಯ ಆದಾಗ ತಾನೆ ಹೋರಾಟ ಚಿಮ್ಮುವುದು. ಇದು ಪ್ರಕೃತಿ ಸಹಜ ತಾನೆ?

- ಹೇಮಲತಾ ಶೆಟ್ಟಿ, ಬೆಂಗಳೂರು

ಹೇಮಕ್ಕನವರಿಗೆ,

ನಿಮ್ಮ ಪತ್ರ ಓದಿ ವಿಷಾದವೆನಿಸಿತು.

ಕಳೆದ ಮೂರ್ನಾಲ್ಕು ದಶಕಗಳಿಂದಲೂ ನಿಮ್ಮ ಕುಟುಂಬವು ಕರ್ನಾಟಕದ ಜನಪರ ಹೋರಾಟಗಳಲ್ಲಿ ತೊಡಗಿಕೊಂಡಿದ್ದನ್ನು ನಾವೆಲ್ಲಾ ನೋಡಿದ್ದೇವೆ.

'ಹಾಗಾದರೆ ಅನ್ಯಾಯವಾದಾಗ ಪ್ರತಿಭಟಿಸಲೇಬಾರದೆ?' ಎಂಬ ನಿಮ್ಮ ಪ್ರಶ್ನೆಯು ಇಷ್ಟು ವರ್ಷ ಕಾಲ ನೀವೆಲ್ಲರೂ ಅನುಭವಿಸಿರುವ ನೋವು ಸಂಕಟಗಳನ್ನೆಲ್ಲಾ ಧ್ವನಿಸುವಂತಿದೆ.

ಹಾಗೆಯೇ ಅಪಾಯದ ಸನ್ನಿವೇಶಗಳನ್ನು ಕೂಡಾ.....

1993ರಲ್ಲೆಂದು ಕಾಣುತ್ತದೆ.

ಸಿರಿಮನೆ ನಾಗರಾಜ್ ಮತ್ತವರ ಒಡನಾಡಿಗಳು ನಡೆಸುತ್ತಿದ್ದ ಅರಣ್ಯ ರಕ್ಷಣೆಗಾಗಿನ ಹೋರಾಟವು ತೀವ್ರ ಸಂಘರ್ಷದ ರೂಪ ತಳೆದಿತ್ತು. ಆ ಕಾಡುಗಳ್ಳರ ಜೊತೆ ಕೆಲವು ಕೋಮುವಾದಿಗಳೂ ಕೈಜೋಡಿಸಿದ್ದರು.

ಈ ದುಷ್ಟರ ಗುಂಪು ನಾಗರಾಜ್ ಮೇಲೆ ಹಲ್ಲೆ ಮಾಡುವ ಅಥವಾ ಕೊಲೆ ಮಾಡುವ ಅಪಾಯಕಾರಿ ಸನ್ನಿವೇಶವೂ ನಿರ್ಮಾಣಗೊಂಡಿತ್ತು. ಆದರೂ ಹೋರಾಟ ಬಿಟ್ಟು ಹಿಂದೆ ಸರಿಯಲು ನಾಗರಾಜ್ ಒಪ್ಪಿರಲಿಲ್ಲ.

ಕರ್ನಾಟಕ ವಿಮೋಚನಾ ರಂಗದ ಸಂಗಾತಿಗಳು ಆಗ ನಾಗರಾಜ್‌ರ ರಕ್ಷಣೆಗಾಗಿ ಒಂದು ಟೀಂ ಅನ್ನು ಕೊಪ್ಪಕ್ಕೆ ಕಳುಹಿಸಿದ್ದರು. ನಾನೂ ಅದರಲ್ಲಿದ್ದೆ. ಜೇಬಲ್ಲೊಂದು ಹರಿತವಾದ ಆಯುಧವಿರಿಸಿಕೊಂಡಿರುತ್ತಿದ್ದ ನಾವೊಂದಿಷ್ಟು ಗೆಳೆಯರು ಕೆಲದಿನ ನಾಗರಾಜ್‌ರ ಬಾಡಿಗಾರ್ಡ್‌ಗಳಾಗಿ ಕೊಪ್ಪದಲ್ಲಿದ್ದೆವು. ಕೊಪ್ಪ ಟೌನ್‌ನಲ್ಲಿ ಮಿಂಚಿನ ವೇಗದಲ್ಲಿ ಓಡಾಡುತ್ತಿದ್ದ ನಾಗರಾಜ್ ಮತ್ತವರ ರಾಜ್‌ದೂತ್ ಮೋಟಾರ್ ಬೈಕ್, ಕೊಪ್ಪದ ಥಂಡಿಯ ವಾತಾವರಣ, ಜಡಿ ಮಳೆ, ಆಪತ್ತನ್ನು ನಿರೀಕ್ಷಿಸುತ್ತಾ ಕಳೆದ ಗಳಿಗೆಗಳು, ನಿಮ್ಮ ಮನೆಯ ನೀರು ದೋಸೆ ಹಾಗೆಯೇ ಪುಟ್ಟ ಮಗಳು ಮಲ್ಲಿಗೆಯ ನೆನಪು ನನಗಿದೆ.


ಈ ನಾಡಿನ ಹಾಗೂ ದಮನಿತ ಜನರ ಪರ ದನಿಯೆತ್ತಿದ ನಾಗರಾಜ್ ಮೇಲೆ ಡಜನ್‌ಗಟ್ಟಲೆ ಕೇಸುಗಳಾಗಿ ಅವರೀಗ ತಲೆಮರೆಸಿಕೊಂಡಿರಬೇಕಾಗಿ ಬಂದಿರುವುದು ಹಾಗೂ ಆ ಸಮಾಜದ್ರೋಹಿಗಳೆಲ್ಲಾ ಆರಾಮಾಗಿರುವುದನ್ನು ನೋಡಿದರೆ ದಿಗ್ಭ್ರಮೆಯಾಗುವಂತಿದೆ.

ಇರಲಿ, ಇಷ್ಟು ಮಾತ್ರಕ್ಕೆ ನೀವೆಲ್ಲಾ ಹತಾಶರಾಗುವವರಲ್ಲ ಎಂಬುದು ನಮಗೆ ಗೊತ್ತಿದೆ. ನಿಮ್ಮ ಕುಟುಂಬವು ನಿರಾಳವಾಗುವಂತಹ ಒಳ್ಳೆಯ ದಿನಗಳು ಬರಲೆಂದು ಈಗ ಆಶಿಸೋಣ.

ಶುಭಾಶಯಗಳೊಂದಿಗೆ

-ಪಾರ್ವತೀಶ

...ನ್ನನ್ನು ಕಾಡುವ ಸಹಪಾಠಿ



...ಇದು ನಾನು ಮೆತ್ತಗಾಗುತ್ತಿರುವ ಲಕ್ಷಣವೆ? ...ವಾರು ಅಕ್ಕಪಕ್ಕದ, ಆಮೇಲೆ ನಡೆದ, ನನ್ನಲ್ಲಿ ...ಚಿತ್ರ ಅಲೆಗಳನ್ನು ಎಬ್ಬಿಸಿದ ಘಟನೆಗಳ ...ಣಾಮವೆ? ಇದು ನನ್ನನ್ನು ಕಳೆದ ಒಂದು ...ರದಿಂದ ಮತ್ತೆಮತ್ತೆ ಕಾಡಿದ್ದರಿಂದ ಇಲ್ಲಿ ...ಕ್ಷಿಪ್ತವಾಗಿ ಬರೆದುಬಿಡುತ್ತಿದ್ದೇನೆ.

ಅವನು ನನ್ನ ಮಿಡಲ್‌ಸ್ಕೂಲ್ ...ಪಾಠಿಯಾಗಿದ್ದ. ಅವನ ಹೆಸರು ನಂಜ. ...ಮ್ಮೂರಿನ ಪಕ್ಕದ ಹೊಸೂರಿನಲ್ಲಿ ...ದು ಪುಟ್ಟ ಗುಡಿಸಿಲಲ್ಲಿ ನಂಜ ...ತ್ತು ಅವನ ಅವ್ವ ಸರಸಮ್ಮ ಇದ್ದರು. ...ಸಮ್ಮ ತೆಳ್ಳಗೆ, ಕೃಶವಾಗಿ ...ರ್ಷಕವಾಗಿದ್ದಳು; ಕಡು ...ಡವಿಯಾದ ಸರಸಮ್ಮ ಕೂಲಿ ...ಮಾಡಿ ತನ್ನ ಮಗನನ್ನು ಬೆಳೆಸುತ್ತಿದ್ದಳು. ಓದಿಸುತ್ತಿದ್ದಳು. ...ಹುಡುಗರಾದ ನಮಗೆಲ್ಲ ಕುತೂಹಲ. ಸರಸಮ್ಮ ಮತ್ತು ನಂಜ ಯಾವ ...ಯಿಯವರು? ಅಗಸರು. ಆಕೆ ಗಂಡನ ಹೆಸರೇನು? ಸಣ್ಣಪ್ಪ. ...ರಿಕೊಂಡುಬಿಟ್ಟಿದ್ದ. ಅವರು ಹೊಸೂರಿಗೆ ಹೇಗೆ ಬಂದರು? ಮುಂಚೆ ...ದ್ದರು? ಅಂಥ ಪ್ರಶ್ನೆಗಳಿಗೆಲ್ಲ ನಂಜನಲ್ಲಿ ಉತ್ತರವಿರಲಿಲ್ಲ. ಆದರೆ ಜನ ...ಮಾತ್ರ ಸರಸಮ್ಮನ ಬಗ್ಗೆ ನೂರಾರು ರೀತಿಯಲ್ಲಿ ಕಲ್ಪಿಸಿಕೊಂಡು ...ಮಾತಾಡುತ್ತಿದ್ದರು. ಅವರು ಹೇಳುತ್ತಿದ್ದ ಕತೆಗಳಲ್ಲಿ ಕೆಲವು ನಿಜವಿದ್ದರೂ ...ರಬಹುದು. ಆದರೆ ಹಳ್ಳಿಯ ಒರಟು ಹುಡುಗರಾದ ನಮಗೆ ಜನರ ...ಳ್ಳೆಯ ಕತೆಗಳೆಲ್ಲ ನಿಜವಾಗಿದ್ದವು. ನಾವು ದಿನವೆಲ್ಲ ನಂಜನನ್ನು ತಮಾಷೆ ...ಮಾಡುತ್ತಿದ್ದೆವು. ನಂಜ ನಗುತ್ತಿರಲಿಲ್ಲ, ಅಳುತ್ತಿರಲಿಲ್ಲ. ನಾವು ...ಳುವುದನ್ನೆಲ್ಲ ತಣ್ಣಗೆ ಸಹಿಸಿಕೊಳ್ಳುತ್ತಿದ್ದ. ನಮ್ಮ ಪ್ರಶ್ನೆಗಳು ಅಶ್ಲೀಲತೆಯ ...ವು ಪಡೆಯುತ್ತಿದ್ದವು. ಸರಸಮ್ಮನನ್ನು ಮಧ್ಯರಾತ್ರಿ ಯಾರೋ ಬಂದು ...ಬೇಡುತ್ತಾರೆ ಎಂದು ಮುಂತಾಗಿ- ನಂಜನಿಗೆ ಕೇಳಿಸುವಂತೆ- ...ಮಾತಾಡಿಕೊಳ್ಳುತ್ತಿದ್ದೆವು.

...ಇಷ್ಟೆಲ್ಲ ಚಿತ್ರಗಳು ನನ್ನ ಮನಸ್ಸಿನಲ್ಲಿದ್ದರೂ ನಂಜ ಎಲ್ಲಿಹೋದ, ಸರಸಮ್ಮನಿಗೆ ...ಯಿತು ಎನ್ನುವುದೇ ನನ್ನ ಮನಸ್ಸಿನಲ್ಲಿ ದಾಖಲಾಗಿಲ್ಲ. ನಮ್ಮ ಊರಿಗೆ ...ಗ್ ಬಂತು. ಕಾಲರಾ ಬಂತು. ಬಡವರು ಹೊಟ್ಟೆಗಿಲ್ಲದೆ ನರಳುವಂಥ ...ಮದ ದಿನಗಳು ಬಂದವು. ನಂಜ ಆ ಹೊತ್ತಿನಲ್ಲಿ ಇರಲಿಲ್ಲ.

...ಎಲ್ಲಿದ್ದರೋ ಬಂದು ನಮ್ಮ ದುಷ್ಟ ಕುತೂಹಲಕ್ಕೆ, ಅಶ್ಲೀಲ ನಡವಳಿಕೆಗೆ ಕಾರಣನಾಗಿದ್ದ ನಂಜ ಮತ್ತು ಅವನ ಅಮ್ಮ ನಿಜಕ್ಕೂ ಮುಗ್ಧರೂ, ಹೊಟ್ಟೆಪಾಡಿಗಾಗಿ ಕಷ್ಟ ಪಡುತ್ತಿದ್ದ ಅಸಹಾಯಕರೂ ಇರಬಹುದು.

ಅಷ್ಟೇ ಅಲ್ಲ, ಮನುಷ್ಯರನ್ನು, ಅವರ ತೆವಲುಗಳನ್ನು, ಅವರ ಕೆಟ್ಟ ಕೆಲಸಗಳನ್ನು, ವಂಚನೆಯನ್ನು ಆಮೇಲೆ ಅರಿಯುತ್ತಾ ಹೋದ ನನ್ನ ಮನಸ್ಸಿನಲ್ಲಿ ನಂಜ ವಿಚಿತ್ರ ಜಟಿಲ ಸಂಕೇತವಾಗಿ ಉಳಿದ.

ನನ್ನ ಪ್ರೀತಿಯನ್ನು ಗಳಿಸಿಕೊಳ್ಳುವುದರ ಜೊತೆಗೆ ನನ್ನ ಬೆಳವಣಿಗೆಗೆ ಕಾರಣನಾದ. ನನ್ನೆಲ್ಲ ಕ್ಷಮಾಯಾಚನೆಗೆ ತಕ್ಕ ವ್ಯಕ್ತಿಯಾದ.


ಈ ಟಿಪ್ಪಣಿಯನ್ನು ನಂಜ ಓದಿದರೆ? ಅವನು ನನ್ನಂತೆಯೇ ವ್ಯಾಮೋಹದ, ನೋವುಗಳ, ಪಾಪಪ್ರಜ್ಞೆಯ ವ್ಯಕ್ತಿಯಾಗಿ ಬದುಕುತ್ತಾ ಇದ್ದರೆ? ಆತ ನನ್ನನ್ನು ಸಂಪರ್ಕಿಸಲಿ!

ಮಹಾ ಗಂಭೀರ, ಮೋಹಕ ಬಂಡಿ

ರೈಲು ಒಂದು ಮಹಾ ರೋಮಾಂಚಕ ಬಂಡಿ. ಹದಿನೆಂಟನೇ ಶತಮಾನದಲ್ಲಿ ರೂಪುಗೊಂಡು ಹತ್ತೊಂಭತ್ತನೇ ಶತಮಾನದಲ್ಲಿ ಏಕಮಾತ್ರ ಪ್ರಚಂಡ ವಾಹನವಾಗಿದ್ದದ್ದು ರೈಲು. ಅಮೆರಿಕದ ವಿಸ್ತಾರವಾದ ಭೂಪ್ರದೇಶವನ್ನು ಆಕ್ರಮಿಸಲು ಅನೇಕ ದಶಕಗಳನ್ನೇ ತೆಗೆದುಕೊಂಡಿತು. ರೈಲು ರಸ್ತೆ ಮಾಡಿದ ವಂಡರ್‌ಬಿಲ್ಟ್ ಕೋಟ್ಯಾಧೀಶನಾದ. ಎರಡು ಹಳಿಯ ಮೇಲೆ ಸಾವಿರಾರು ಮೈಲಿ ಸಾಗುವ ರೈಲು ಪ್ರತಿಯೊಬ್ಬನ ನೆನಪಿನಲ್ಲಿ ಉಳಿಯುವ ವಾಹನ. ನನಗಂತೂ ಈ ರೈಲು ಅನೇಕ ರೊಮ್ಯಾಂಟಿಕ್ ನೆನಪುಗಳ ಸರಮಾಲೆ. ರಾಜರು ಸಾಗುತ್ತಿದ್ದ ಗಾಡಿ, ಸೈನಿಕರು ಚಲಿಸುತ್ತಿದ್ದ ಉಗಿಬಂಡಿ, ಸ್ವಾತಂತ್ರ್ಯ ಸಂಗ್ರಾಮದ ಕಾಂಗ್ರೆಸ್ 'ಗಲಾಟೆ'ಯ ಎಂಜಿನ್... ಇದು. ನಮ್ಮ ಊರ ಹತ್ತಿರ ಯಾವ ಸ್ಪೆಷಲ್ ರೈಲುಗಳೂ ನಿಲ್ಲುತ್ತಿರಲಿಲ್ಲ.

ಬಸ್ಸು, ಟ್ರಕ್ಕು, ಲಾರಿ, ವಿಮಾನಗಳೆಲ್ಲ ಬಂದರೂ ರೈಲು ನೆನಪುಗಳ





ಸಂಕೇತವಾಗಿ ಬೆಳೆಯುತ್ತಲೇ ಇದೆ; ಯಾವ ಸಮಾಜವೂ ರೈಲನ್ನು ಬಿಟ್ಟುಬಿಡಲು ಸಿದ್ಧವಾಗಿರುವಂತಿಲ್ಲ; ಅಮೆರಿಕ ಆಧುನಿಕ ದೇಶ. ಇಲ್ಲಿ ಜನ ಕಾಗದ ಬರೆಯುವುದಿಲ್ಲ. ಫೋನ್ ಮಾಡುತ್ತಾರೆ; ರೈಲಿನಲ್ಲಿ ಸಾಗುವುದಿಲ್ಲ, ವಿಮಾನದಲ್ಲಿ ಹಾರುತ್ತಾರೆ. ಹೀಗಾಗಿ ಹಳ್ಳಿಯ ಕಡೆಗಿನ ಸಂಕ್ಷಿಪ್ತ ರಸ್ತೆಯ ರೈಲುಗಳು ನೌಕರರಿಗೆ, ಎಂಜಿನ್ ಡ್ರೈವರ್‌ಗಳಿಗೆ ಸಂಬಳ ಕೊಡಲಾಗದೆ ನಿಂತುಹೋಗುವ ಸ್ಥಿತಿ ಬಂತು. ಸುಮಾರು ಮೂವತ್ತು, ನಲವತ್ತು ಕಿಲೋಮೀಟರ್ ರಸ್ತೆಯ ಈ 'ಹಳ್ಳಿ ರೈಲುಗಳು' ಗ್ರಾಮಸ್ಥರಿಗೆ ಉಪಯುಕ್ತ ಅವರ ಕನಸಿನ ದ್ಯೋತಕ. ಮತ್ತು ಗ್ರಾಮಗಳಲ್ಲಿ ನೌಕರರಿಗೆ ಸಂಬಳ, ಕೂಲಿ ಆಗ್ಗೆ ಹೀಗಾಗಿ ಗ್ರಾಮದ ಕೆಲವರು ಈ ಸಣ್ಣ ರೈಲ್ವೆ ಲೈನ್, ಇಂಜಿನ್‌ಗಳನ್ನು ದೊಡ್ಡ ರೈಲ್ವೆ ಕಂಪನಿಗಳಿಂದ ಕೊಂಡರು. ಇದನ್ನು ಮಾರಲು ದೊಡ್ಡ ಕಂಪನಿಗಳು ಕಾತರವಾಗಿದ್ದವು; ಯಾಕೆಂದರೆ ಈ ಗ್ರಾಮದ ಜನ ಸಿಕ್ಕದಿದ್ದರೆ ಅವರು ರೈಲುಗಳನ್ನು scrap ಗೆ ಹಾಕಬೇಕಾಗಿತ್ತು.

ಸಣ್ಣ ರಸ್ತೆ ರೈಲುಗಳು ಈಗ ಅಮೆರಿಕದ ಸಾವಿರಾರು ಗ್ರಾಮಗಳಲ್ಲಿವೆ; ಈ ರೈಲುಗಳನ್ನು ಕೊಂಡವರು ಹಲವಾರು ಕಾರ್ಮಿಕರಿಗೆ ಉದ್ಯೋಗ ಒದಗಿಸಿದ್ದಾರೆ. ಒಂದೊಂದು ದಿನ ರೈಲು ನಡೆಸುವ ಡ್ರೈವರ್ ಅಥವಾ ಇಂಜಿನಿಯರ್ ಗೈರುಹಾಜರಾದರೆ ಮಾಲೀಕನೇ ನಡೆಸುತ್ತಾನೆ. ಗ್ರಾಮದಿಂದ ಧಾನ್ಯ, ಹುಲ್ಲು, ಜಾನುವಾರು, ಸೌದೆ ಮುಂತಾದವನ್ನು ಸಾಗಿಸುವ ಜೊತೆಗೆ ಈ ರೈಲುಗಳು ಜನರನ್ನು ಸಾಗಿಸಿ ಅಲ್ಪಸ್ವಲ್ಪ ಲಾಭ ಗಳಿಸುತ್ತವೆ. ನಮ್ಮ ದೇಶದಲ್ಲಿ ಇಂಥ ಸಣ್ಣ ರಸ್ತೆಯ ರೈಲುಗಳನ್ನು ಯಾರಿಗೂ ಮಾರದೆ, ಮಾರಿದರೂ ಕೊಳ್ಳುವವರಿಲ್ಲದೆ ರೈಲುಗಳು ಕಣ್ಮರೆಯಾಗುತ್ತಿವೆ. ಇಲ್ಲಿ ಎಲ್ಲದಕ್ಕೂ ಅಸೂಯೆ.

ರೈಲನ್ನು ಕೊಳ್ಳುವುದು, ನಡೆಸುವುದು, ಜನಕ್ಕೆ ಅನುಕೂಲ ಕಲ್ಪಿಸುವುದು, ಕೆಲವರಿಗಾದರೂ ಉದ್ಯೋಗ ಕಲ್ಪಿಸುವುದು... ಇದೆಲ್ಲ ಮುಖ್ಯವಾಗಿರುವ ಜೊತೆಗೆ ರೈಲಿನ ಬಗ್ಗೆ ಮನುಷ್ಯನಿಗಿರುವ ಪ್ರೀತಿ, ನೆನಪನ್ನು ಈ ರೈಲುಗಳು ಜೀವಂತವಾಗಿ ಇಡುತ್ತವೆ. 'ಕೂ' ಎಂದು ಕೂಗುವ ರೈಲು, ಕುಚ್‌ಕುಚ್, ಉಸ್, ಬುಸ್ ಎಂದು ಸಾಗುವ ರೈಲು ಒಂದು ರೀತಿಯಲ್ಲಿ ಆಟದ ಗೊಂಬೆ. ಒಂದು ರೀತಿಯಲ್ಲಿ ಪ್ರಕೃತಿಯ ನಡುವೆ ಉದ್ಭವಿಸಿದ ಯಂತ್ರ, ಒಂದು ರೀತಿಯಲ್ಲಿ ಎಲ್ಲ ವಾಹನಗಳಿಗಿಂತ ಗಂಭೀರವಾದ, ಮಂದಗಮನದ, ಮೋಹಕ ಗಾಡಿ...

ಮೊನ್ನೆ Span ಪತ್ರಿಕೆಯಲ್ಲಿ ನೋಡಿದ ಲೇಖನ ನನ್ನಲ್ಲಿ ಕೆರಳಿಸಿದ ನೆನಪು ತೀವ್ರವಾದದ್ದು. ಬಸ್ಸು, ಲಾರಿ, ಮೋಟಾರ್ ಬೈಕ್‌ಗಳ ಅಬ್ಬರ, ಭಯಾನಕ ಕಿರುಚಾಟದ ನಡುವೆ ರೈಲಿನ ದಿಟ್ಟ ನಡಿಗೆ ಹೃದಯಂಗಮ ಅನ್ನಿಸಿತು.

ಅದಕ್ಕೇ ಈ ಪುಟ್ಟ ಟಿಪ್ಪಣಿ.

ರಂಗ-ಅಂತರಂಗ

ಸಮುದಾಯ ಥಿಯೇಟರ್ ಕಂಪನಿ

'ರಂಗಭೂಮಿಯು ಕಲೆಗಾಗಿ ಕಲೆ ಎಂಬಂತೆ ಮಾತ್ರ ಇರಕೂಡದು ಬದಲಾಗಿ ಅದಕ್ಕೆ ಸಾಮಾಜಿಕ ಜವಾಬ್ದಾರಿ ಇದೆ' ಎಂದು ಸ್ಥಾಪನೆಗೊಂಡಿದ್ದು ಕರ್ನಾಟಕದ ಹೆಸರಾಂತ 'ಸಮುದಾಯ ಥಿಯೇಟರ್ ಕಂಪನಿ'. ಬೆಂಗಳೂರಿನಲ್ಲಿ ಇಂಗ್ಲಿಷ್ ನಾಟಕಗಳೇ ಹೆಚ್ಚಾಗಿ ಪ್ರದರ್ಶನವಾಗುತ್ತಿದ್ದ ಸಂದರ್ಭದಲ್ಲಿ "ರಂಗಭೂಮಿಗೆ ಘನ ಉದ್ದೇಶ ಇದೆ. ಈ ಮಣ್ಣಿನ ಜನಕ್ಕಾಗಿ, ಅದರಲ್ಲೂ ಮಧ್ಯಮ ವರ್ಗದ ಹಾಗೂ ಹಳ್ಳಿಯ, ತಳವರ್ಗದ ಜನರಿಗಾಗಿ ರಂಗಭೂಮಿ ಕೆಲಸ ಮಾಡಬೇಕು. ಸಮಕಾಲೀನ ಸಮಸ್ಯೆಗಳನ್ನು, ರಾಜಕೀಯ ಪಿತೂರಿಯನ್ನು ಅನಾವರಣಗೊಳಿಸಿ ಜನರನ್ನು ಚಿಂತಿಸುವಂತೆ ಮಾಡುವುದು ಮುಖ್ಯ. ನಾವು ಪ್ರತಿಭಟನೆಯ ಅಸ್ತ್ರವಾಗಿ ರಂಗಭೂಮಿಯನ್ನು ಬೆಳೆಸುತ್ತೇವೆ. ಒಟ್ಟಾರೆ ಜನಮುಖಿ, ಸಮಾಜಮುಖಿ ರಂಗಭೂಮಿ ಕಟ್ಟುತ್ತೇವೆ' ಎಂದು ಆಧುನಿಕ ರಂಗ ಶಿಕ್ಷಣ ಪಡೆದವರು, ಸಾಮಾಜಿಕ ಚಿಂತಕರು, ಬುದ್ಧಿಜೀವಿಗಳು 1975 ರಲ್ಲಿ ಹುಟ್ಟು ಹಾಕಿದ್ದು 'ಸಮುದಾಯ ಥಿಯೇಟರ್ ಕಂಪನಿ'ಯನ್ನು.


1975 ರಲ್ಲಿ ರಾಷ್ಟ್ರೀಯ ನಾಟಕ ಶಾಲೆಯಿಂದ ಬಂದ ದೇಸಿಯ ಚಿಂತಕ ಹಾಗೂ ರಂಗ ನಿರ್ದೇಶಕ ಆರ್.ಪಿ.ಪ್ರಸನ್ನ ಅವರು ಸಮಾನ ಮನಸ್ಕರಾದ ನಿಸ್ಸಾರ್ ಅಹಮದ್, ಕ.ವೆಂ.ರಾಜಗೋಪಾಲ, ಕಿ.ರಂ.ನಾಗರಾಜ, ಡಿ.ಆರ್.ನಾಗರಾಜ್, ಆರ್.ನಾಗೇಶ್, ಸಿ.ಜಿ.ಕೆ, ಡಾ.ಸಿ.ವೀರಣ್ಣ, ಪ್ರೊ.ಕೆ.ವಿ.ನಾರಾಯಣ, ಬರಗೂರು ರಾಮಚಂದ್ರಪ್ಪ ಸಿ.ಕೆ.ಗುಂಡಣ್ಣ ಇವರಂತಹ ಅನೇಕರೊಟ್ಟಿಗೆ ಸೇರಿ 'ಸಮುದಾಯ' ಹುಟ್ಟುಹಾಕಿದರು.

ಪ್ರೊ. ಕಿ.ರಂ.ನಾಗರಾಜ. ಆರಂಭದಲ್ಲಿ ಪ್ರಸನ್ನ ಬೆಂಗಳೂರು ಸಮುದಾಯದ ಅಧ್ಯಕ್ಷರಾಗಿದ್ದು, ಸಿ.ಜಿ.ಕೆ ಕಾರ್ಯದರ್ಶಿಯಾಗಿ ಕೆಲಸನಿರ್ವಹಿಸುತ್ತಿದ್ದರು. ಸಮುದಾಯವು ತನ್ನ ಮೊದಲ ಯತ್ನದಲ್ಲಿ 'ಹುತ್ತವ ಬಡಿದರೆ' ನಾಟಕವನ್ನು ಪ್ರಯೋಗಿಸಿತು. ಸೇನಾನಿಯೊಬ್ಬ ತನ್ನ ಕೈಗೆ ಅಧಿಕಾರ ಸಿಕ್ಕರೆ ತೋರುವ ದರ್ಪವನ್ನು ಆ ಕಾಲದ ರಾಜಕೀಯ ಪರಿಸ್ಥಿತಿಯನ್ನು ಬಿಂಬಿಸುತ್ತಿತ್ತು. ಸಮುದಾಯದ ಬಹುತೇಕ ಪ್ರಯೋಗಗಳ ಸಾರ ಹಾಗು ಧೋರಣೆ "ಬಡಿಯ ಬೇಕಾಗಿರುವುದು ಹಾವನ್ನೇ ವಿನಃ ಹುತ್ತವನ್ನಲ್ಲ" ಎಂಬುದೇ ಆಗಿತ್ತು.


ನಾಟಕಗಳ ಮೂಲಕ ಅವಿದ್ಯಾವಂತರಲ್ಲಿ ಅರಿವನ್ನು ಮೂಡಿಸುವ ಉದ್ದೇಶ 'ಸಮುದಾಯ'ದ್ದಾಗಿತ್ತು. ಈ ನಿಟ್ಟಿನಲ್ಲಿ ಬ್ರೆಕ್ಟ್‌ನ 'ತಾಯಿ' ನಾಟಕವನ್ನು (ಕನ್ನಡಕ್ಕೆ ಸಿ.ವೀರಣ್ಣ) ಪ್ರಯೋಗಿಸಿತು. ಅವಿದ್ಯಾವಂತ-ಅಸಹಾಯಕ ಮುದುಕಿ ತನ್ನ ಮಗನ ಸಾವಿನಿಂದ ಅನಿವಾರ್ಯವಾಗಿ ಕಾರ್ಮಿಕರ ಮುಖಂಡತ್ವ ಸ್ವೀಕರಿಸಿ ಹೋರಾಡುವ ಕಥೆಯನ್ನು ಹೊಂದಿರುವ ಈ ನಾಟಕ ಆಗ ಎಲ್ಲೆಡೆ ಹೆಚ್ಚು ಪ್ರಭಾವ ಬೀರಿತ್ತು. 'ತಾಯಿ' ನಾಟಕ ಹದಿಮೂರು ಪ್ರದರ್ಶನಗಳನ್ನು ಕಂಡಿತು. ಬಿ.ಜಯಶ್ರೀ ಅವರು ತಾಯಿಯಾಗಿ, ಪಾವೆಲ್ ಪಾತ್ರದಲ್ಲಿ ಎಂ.ಸಿ.ಆನಂದ್, ಶಂಕರ್ ಅಭಿನಯಿಸಿ ಹೆಸರು ಮಾಡಿದ್ದರು. ಬಿ.ಕೆ.ಚಂದ್ರಶೇಖರ್, ಆರ್.ನಾಗೇಶ್ ಮುಂತಾದವರು ಸಹ ಇದರಲ್ಲಿ ಅಭಿನಯಿಸಿದ್ದರು. ಈ ನಾಟಕವನ್ನು ಸಮುದಾಯ ತಂಡ ತಮಿಳಿನಲ್ಲಿಯೂ ಪ್ರಯೋಗಿಸಿತ್ತು.

ಪ್ರಸ್ತುತ ಜ್ವಲಂತ ಸಮಸ್ಯೆಗಳನ್ನು ಬಿಂಬಿಸಿದ ಬೀದಿ ನಾಟಕಗಳನ್ನೂ ಸಮುದಾಯ ಕೈಗೆತ್ತಿಕೊಂಡಿತ್ತು. 'ಸಮುದಾಯದ' ಬಹುಮುಖ್ಯ ಪ್ರಯೋಗವೆಂದರೆ ಅಧಿಕಾರ ಪಡೆದು ನಾಶ ಹೊಂದುವುದನ್ನು ತೋರಿಸಲು







ಕಿ.ರಂ.ನಾಗರಾಜ



ಎಂ.ಎಸ್. ಸತ್ಯು



ಆರ್.ಪಿ. ಪ್ರಸನ್ನ



ಮರುಳಸಿದ್ದಪ್ಪ

ಸಮುದಾಯದ ಆರಂಭದಲ್ಲೇ ತುರ್ತು ಪರಿಸ್ಥಿತಿಯ ವಿರುದ್ಧ - ಅಂದರೆ 1979 ರಲ್ಲಿ - ತನ್ನ ಮೊದಲ ಜಾಥಾವನ್ನು ಹಮ್ಮಿಕೊಂಡಿತು. ಬೀದಿ ನಾಟಕ, ಸ್ಕಿಟ್‌ಗಳು, ರಾಜಕೀಯ ಹಾಡುಗಳನ್ನು ಹಲವು ತಂಡಗಳೊಂದಿಗೆ ಸೇರಿ ಸಂಚಾರಿ ರಂಗಭೂಮಿ ಮಾದರಿಯಲ್ಲಿ ಹಳ್ಳಿ-ಹಳ್ಳಿಗಳಲ್ಲೂ ಪ್ರಯೋಗಿಸಿತು. ಇಂತಹ ಐದು ಜಾಥಾಗಳು ರಾಜ್ಯದ ವಿವಿಧ ಭಾಗಗಳಿಂದ ಹೊರಟು ಧಾರವಾಡದಲ್ಲಿ ಅಂತ್ಯಗೊಂಡಿದ್ದವು.

ಈ ತಂಡಕ್ಕೆ 'ಸಮುದಾಯ' ಎಂಬ ಈ ಮಹತ್ವದ ಹೆಸರನ್ನು ಸೂಚಿಸಿದವರು

ಮುಸಲೋನಿ ಹಾಗೂ ಹಿಟ್ಲರ್ ಹಿನ್ನೆಲೆಯೊಂದಿಗೆ ಪ್ರಯೋಗಿಸಿದ 'ಮ್ಯಾಕ್‌ಬೆತ್' (ನಿರ್ದೇಶನ ಸಿ.ಬಸವಲಿಂಗಯ್ಯ). ಎಂ.ಎಸ್.ಸತ್ಯು ಅವರ 'ಕುರಿ', ಪ್ರಸನ್ನ ಅವರ 'ದಂಗೆಯ ಮುಂಚಿನ ದಿನಗಳು,' ಎನ್.ಎ.ಸೂರಿ ನಿರ್ದೇಶನದ 'ಕೆಳಗಿನವರು', ಟಿ.ಎನ್.ನರಸಿಂಹನ್ ಅವರ 'ಕತ್ತಲೆ ದಾರಿ ದೂರ', ಡಿ.ಆರ್.ನಾಗರಾಜ ಹಾಗೂ ತಂಡದವರ ಪ್ರಯತ್ನದ 'ವಾರ್ಡ ನಂ-6' ನಾಟಕಗಳು ಜನರನ್ನು ಮೆಚ್ಚಿಸಿದ್ದವು.

ಮೋಹನ್ ರಾಕೇಶ್ ಅವರ 'ಅದೇ ಅಧೋರೆ' ನಾಟಕವನ್ನು ನಿರ್ದೇಶಕ ಸಿ.ಬಸವಲಿಂಗಯ್ಯನವರು 'ಮಾಧಾರಿ ಮಾದಯ್ಯ' ಎಂಬ ಹೆಸರಿನಡಿ ಹರಪನಹಳ್ಳಿ, ರಾಯಚೂರು ಮುಂತಾದ ಘಟಕಗಳಲ್ಲಿ ಪ್ರಯೋಗ ಮಾಡಿದ್ದಾರೆ. ಈ ಪ್ರಯೋಗಕ್ಕೆ ದೆಹಲಿಯ ಯುವ ನಿರ್ದೇಶಕ ಪ್ರಶಸ್ತಿ ಸಹ ಲಭಿಸಿದೆ.

'ಸಮುದಾಯ'ವು ಬಾದಲ್ ಸರ್ಕಾರರ ನೇತೃತ್ವದಲ್ಲಿ ಕುಂಬಳಗೂಡಿನಲ್ಲಿ ನಡೆಸಿದ ಬೀದಿ ನಾಟಕ ತರಬೇತಿಯನ್ನು ಮೊದಲ ವರ್ಷ ಬಿ.ವಿ.ಕಾರಂತರು ಉದ್ಘಾಟಿಸಿದ್ದರು. ಎರಡನೇ ವರ್ಷ ತರಬೇತಿ ಕಮ್ಮಟವನ್ನು ನಾಟಕಕಾರ ಪಿ.ಲಂಕೇಶ್ ಉದ್ಘಾಟಿಸಿದ್ದರು.

ಸಮುದಾಯವು ಕಿರುಚಿತ್ರಗಳ 'ಚಿತ್ರ ಸಮುದಾಯ' ಮತ್ತು ವಿಚಾರ ಸಂಕಿರಣಗಳನ್ನಲ್ಲದೆ ಅಭಿನಯ ತರಬೇತಿಗಳನ್ನು ಸಹ ನಡೆಸಿದೆ. ಬರಗೂರು ರಾಮಚಂದ್ರಪ್ಪ ಅವರ ಪ್ರಧಾನ ಸಂಪಾದಕತ್ವದಲ್ಲಿ ಆರಂಭವಾಗಿದ್ದ 'ಸಮುದಾಯ ವಾರ್ತಾ ಪತ್ರವು' ಈಗ ವಿ.ವೇಣುಗೋಪಾಲ ಸಂಪಾದಕತ್ವದಲ್ಲಿ ನಡೆಯುತ್ತಿದೆ.

ಸ್ವಲ್ಪ ಕಾಲ ಸಮುದಾಯಕ್ಕೆ ಮೋಹನ್‌ಕುಮಾರ್ ಅಧ್ಯಕ್ಷರಾಗಿದ್ದರು, ಕಾರ್ಯದರ್ಶಿಯಾಗಿ ರವಿಶಿರಿವರ ಇದ್ದರು. ಅವರ ಅವಧಿಯಲ್ಲಿ ಸಮುದಾಯ-25, ಸಮುದಾಯ-35 ಮತ್ತು ರಾಷ್ಟ್ರಿಯ ನಾಟಕ ಉತ್ಸವಗಳನ್ನು ಆಯೋಜಿಸಲಾಗಿತ್ತು. ಪ್ರಸಕ್ತ ಸಿ.ಕೆ.ಗುಂಡಣ್ಣ ಅಧ್ಯಕ್ಷರಾಗಿದ್ದಾರೆ.


ಸಮುದಾಯ ತಂಡವು ರಂಗಭೂಮಿಯಲ್ಲಿ ಏನೆಲ್ಲ ಛಾಪು ಮೂಡಿಸಿದ್ದರೂ ಪ್ರಸನ್ನ ಅವರು ಎನ್.ಎಸ್.ಡಿಗೆ ಸಂದರ್ಶಕ ಪ್ರಾಧ್ಯಾಪಕರಾಗಿ ಮತ್ತು ದೆಹಲಿಯ ಫಿಲ್ಮ್ ಹಾಗೂ ಟೆಲಿವಿಷನ್ ವಿಭಾಗಕ್ಕೆ ತೆರಳಿದ ಮೇಲೆ ಸಮುದಾಯ ಸ್ವಲ್ಪ ಮಟ್ಟಿನ ಕಳೆಗುಂದಿತು ಎಂದೇ ಹೇಳಬಹುದು. ಪ್ರಸ್ತುತ ತಂಡದಲ್ಲಿರುವವರ ನಡುವೆ ಅನೇಕ ರಾಜಕೀಯ ತಾತ್ವಿಕ ಭಿನ್ನಾಭಿಪ್ರಾಯಗಳು ಇದ್ದರೂ 'ಸಮುದಾಯ ಥಿಯೇಟರ್ ಕಂಪನಿ' ರಂಗ ಕಾಯಕ ಮಾಡುತ್ತಿದೆ ಎಂಬುದೇ ಸಮಾಧಾನದ ಸಂಗತಿ.

- ಡಾ.ಎ.ಆರ್.ಗೋವಿಂದಸ್ವಾಮಿ

ಸಮುದಾಯ ಥಿಯೇಟರ್ ಕಂಪನಿ, 48, ಪುಟ್ಟಣ್ಣ ರಸ್ತೆ, ಬಸವನಗುಡಿ, ಬೆಂಗಳೂರು-560004 www.samudaya.com <http://www.samudaya.com> mob. 9844709706


ಬೇಲಿಯೇ ಎದ್ದು ಹೊಲ ಮೇದಂತೆ?

ತಾವು ತಮ್ಮ ಪತ್ರಿಕೆಯಲ್ಲಿ ಕೆಪಿಎಸ್‌ಸಿ ಅಕ್ರಮ ಕುರಿತು ಲೇಖನ ಬರೆದದ್ದು ಸಂತೋಷದ ವಿಷಯ. ತಮ್ಮ ಲೇಖನದ ಪ್ರಭಾವದಿಂದ 1998 ರಿಂದ ನಡೆದಿರುವ ಹಲವಾರು ಅಕ್ರಮಗಳನ್ನು ಕುರಿತು ಸಿಐಡಿ ತನಿಖೆ ನಡೆಸುತ್ತಿದ್ದು ಒಂದೊಂದೇ ಅಕ್ರಮಗಳು ತನಿಖೆಯಿಂದ ಬಯಲಿಗೆ ಬರುತ್ತಿರುವುದು ವಂಚಕರ ಮುಖವಾಡ ಕಳಚಿದಂತೆ ಆಗುತ್ತಿದೆ. ಇದೇ ಸಂದರ್ಭದಲ್ಲಿ ತಮ್ಮ ಗಮನಕ್ಕೆ ಮತ್ತೊಂದು ವಿಷಯವನ್ನು ತರಲಿಚ್ಛಿಸುತ್ತಿದ್ದೇನೆ. 2012ರಲ್ಲಿ ನಡೆದ ಸಾಂಖ್ಯಿಕ ನಿರೀಕ್ಷಕರು (Statistics Inspector) ನೇಮಕಾತಿಯ ಸಂದರ್ಭದಲ್ಲಿ ಪರೀಕ್ಷೆಯಲ್ಲಿ ಪಡೆದ ಅಂಕಗಳು ಕಡಿಮೆ ಇದ್ದು ಸಂದರ್ಶನದ ಸಮಯದಲ್ಲಿ ನೀಡಿರುವ ಅಂಕಗಳು ಹೆಚ್ಚಾಗಿರುತ್ತವೆ. ಸಂದರ್ಶನದ ಸಮಯದಲ್ಲಿ ಅಧ್ಯಕ್ಷರು ಮತ್ತು ನೇಮಕಾತಿಯ ಸದಸ್ಯರುಗಳು ಅಕ್ರಮವನ್ನು ಎಸಗಿರುವುದು ಕಂಡುಬರುತ್ತದೆ. ಅಕ್ರಮ ನಡೆದಿರುವ ಹಲವಾರು ವಿದ್ಯಾರ್ಥಿಗಳ ಪಟ್ಟಿ ತಮಗೆ ಕೆಪಿಎಸ್‌ಸಿಯು ಹೊರಡಿಸುವ 2013 ರ ಅಂತಿಮ ಆಯ್ಕೆಪಟ್ಟಿಯಲ್ಲಿ ಸಿಗುತ್ತದೆ. ಈ ಮೂಲಕ ತಮ್ಮಲ್ಲಿ ಕೋರುವುದೇನೆಂದರೆ ತಮ್ಮ ಪತ್ರಿಕೆಯಲ್ಲಿ 2012 ರಲ್ಲಿ ನಡೆದ ನಿರೀಕ್ಷಕರು (Statistics Inspector) ನೇಮಕಾತಿಯ ಅಕ್ರಮದ ಬಗ್ಗೆ ಒಂದು ಲೇಖನವನ್ನು ಪ್ರಕಟಿಸಿದರೆ ಈ ಆಯ್ಕೆಯಿಂದ ವಂಚಿತರಾದ ಹಲವಾರು ಅಭ್ಯರ್ಥಿಗಳು ಸಿಐಡಿ ತನಿಖಾ ವಿಭಾಗಕ್ಕೆ ದೂರನ್ನು ದಾಖಲಿಸಲು ಅನುಕೂಲ ವಾಗುತ್ತದೆಂದು ಭಾವಿಸಿದ್ದೇನೆ.



ವಂದನೆಗಳೊಂದಿಗೆ,

ಹುಬ್ಬಳ್ಳಿ ಅಂಕೋಲ ರೈಲ್ವೇ ಲೈನು ಕೇವಲ ಹದಿನೈದು ಕಿ.ಮೀ. ಮಾತ್ರ ಅರಣ್ಯ ಪ್ರದೇಶದಲ್ಲಿ ಹಾದುಹೋಗುತ್ತದಾದರೂ ಈ ಲೈನಿನಿಂದ ಸಾವಿರಾರು ಹೆಕ್ಟೇರ್ ಅರಣ್ಯ ನಾಶವಾಗುತ್ತದೆ ಎಂದು ತಪ್ಪಾಗಿ ಬಿಂಬಿಸಿ



'ಪರಿಸರವಾದಿ'ಗಳು ಹೇಗೆ ಅಡ್ಡಗಾಲು ಹಾಕಿ ಸ್ವಾರ್ಥ ಸಾಧಿಸಿ ತಮ್ಮ ತಾಯಿನಾಡಿಗೇ ಎಂತಹ ದೊಡ್ಡ ದ್ರೋಹ ಬಗೆದಿದ್ದಾರೆಂದು ತಮ್ಮ ಘನ ಪತ್ರಿಕೆ ಓದಿದ ಮೇಲೆಯೇ ಅರ್ಥವಾಗಿದ್ದು. ಅದರಂತೆ ಮಠಗಳ ಆಡಳಿತದಲ್ಲಿರುವ ಮೆಡಿಕಲ್ ಕಾಲೇಜುಗಳ ಮೇಲೆ ಇನ್‌ಕಮ್-ಟ್ಯಾಕ್ಸ್ ದಾಳಿಯೂ ಎಷ್ಟೊಂದು ಸಮರ್ಥನೀಯವಾಗಿತ್ತು ಎಂಬುದು ಸಹ ತಮ್ಮ ಪತ್ರಿಕೆ ಓದಿದ ಮೇಲೆಯೇ ಮನವರಿಕೆಯಾಗಿದ್ದು. ಬೇರೆಲ್ಲಾ ದಿನ ಪತ್ರಿಕೆ / ವಾರ ಪತ್ರಿಕೆಗಳು ಪೂರ್ವಾಗ್ರಹಪೀಡಿತರಾಗಿ ವಿನಾಕಾರಣ ಜಾತಿರಾಜಕೀಯ ನಡುವೆ ತೂರಿಸಿ ಮುಖ್ಯ ಕಾರಣವನ್ನೇ ಮರೆಮಾಚಿ ಆದಾಯಕರ ಇಲಾಖೆಯವರು ದೊಡ್ಡ ಮತ್ಸರು ಎಂಬಂತೆ ಬಿಂಬಿಸಿದ್ದವು. ವಿದ್ಯಾದಾನದ ಹೆಸರಲ್ಲಿ ಧಾರ್ಮಿಕ ಮಠಗಳು ತೋರಿಸುವ ಧನದಾಹ ಹೇಸಿಗೆ ತರಿಸುತ್ತದೆ.

ಹೀಗೆಯೇ ಇನ್ಕಮ್ ಟ್ಯಾಕ್ಸ್‌ನವರು ನಮ್ಮ ಕರಾವಳಿಯ ಧನದಾಹಿ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳ ಮೇಲೆಯೂ ದಾಳಿ ಮಾಡಿದ್ದರೆ ಒಳ್ಳೆಯದಿತ್ತು. ಕಾರಣ ಇಲ್ಲಿಯವರ ಧನದಾಹಿ ಬೆಂಗಳೂರಿನ ಕಾಲೇಜುಗಳಿಗಿಂತಲೂ ಬಹಳ ಹೆಚ್ಚು. ವಿಚಿತ್ರವೆಂದರೆ ಕರಾವಳಿಯ ಹೆಚ್ಚಿನ ಎಲ್ಲಾ ವೃತ್ತಿಪರ ಕಾಲೇಜುಗಳು 'ಅಲ್ಪಸಂಖ್ಯಾತ ಕೋಟಾ'ದಡಿ ಸ್ಥಾಪಿತವಾದವುಗಳು. ಅಂದರೆ ತುಳು-ಕೊಂಕಣಿ-ಬ್ಯಾರಿ ಈ ಅಲ್ಪಸಂಖ್ಯಾತ ಭಾಷೆ ಅಥವಾ ಕ್ರೈಸ್ತ-ಮುಸ್ಲಿಂ-ಜೈನ ಈ ಅಲ್ಪಸಂಖ್ಯಾತ ಧರ್ಮದ ಕೋಟಾದಡಿ ಸ್ಥಾಪಿತವಾದವುಗಳು. ಆದರೆ ಈ ಭಾಷೆ ಅಥವಾ ಧಾರ್ಮಿಕ ಅಲ್ಪಸಂಖ್ಯಾತರಿಗೆ ನಿಜವಾಗಿ ಈ ಕಾಲೇಜುಗಳಲ್ಲಿ ಸೀಟುಗಳೇ ಸಿಗುವುದಿಲ್ಲ. ಈ ಕೋಟಾದಡಿ ಮೀಸಲಿಟ್ಟ ಸೀಟುಗಳನ್ನು ಕೋಟ್ಯಂತರ ಕ್ಯಾಪಿಟೇಷನ್ನಿಗೆ ಮಾರಿಕೊಳ್ಳಲಾಗಿತ್ತದೆ. ಆಯಾ ಅಲ್ಪಸಂಖ್ಯಾತ ಜನಾಂಗದವರು



ಇದು 'ತಮ್ಮವರ' ಕಾಲೇಜು ಎಂದು ಕೇವಲ ಒಣ ಅಭಿಮಾನ ತೋರಿಸಿದ್ದೇ ಬಂತು. ಹದಿನಾಲ್ಕು ವರ್ಷಗಳ ಹಿಂದೆ ಒಬ್ಬ ಮಾಜಿ ಶರಾಬು ದೊರೆ ಮಂಗಳೂರಿನ ಕುಂಟಿಕಾನದಲ್ಲಿ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆ ಕಟ್ಟಿಸಲು ಯೋಚಿಸಿದಾಗ ಯಾವುದೇ ಕರ್ನಾಟಕ ಮೂಲದ ಬ್ಯಾಂಕುಗಳು ಬೃಹತ್ ಸಾಲ ಕೊಡಲು ನಿರಾಕರಿಸಿದಾಗ ನನ್ನ ಸಂಬಂಧಿಕರಾಗಿದ್ದ ಒಬ್ಬ ಮುಂಬೈ ಮೂಲದ ಬ್ಯಾಂಕ್ ಮ್ಯಾನೇಜರರು ಜಾತಿ ಮತ್ತು ತುಳು ಭಾಷೆಯ ವಿಶೇಷ ಅಭಿಮಾನದಿಂದ ಆ ಮಾಜಿ ಶರಾಬು ದೊರೆಗೆ ಬೇಕಾದ ಬೃಹತ್ ಸಾಲ ಕೊಡಿಸಿದ ನಂತರ ಆ ಶರಾಬು ದೊರೆಯ ಸಹವರ್ತಿಗಳು ಮಾಡಿದ ಮೋಸದಿಂದ ಆ ಮ್ಯಾನೇಜರರು ಕೆಲಸ ಕಳೆದುಕೊಂಡು ಕುಟುಂಬ ಸಹಿತ ಬೀದಿಗೆ ಬಿದ್ದ

“ಏನನ್ನು ಮಾಡ್ತೀನಿ ಅನ್ನೋದ್ಕಿಂತ, ಏನನ್ನು ಮಾಡ್ಬಾರ್ದು ಅನ್ನೋದರ ಬಗ್ಗೆ ನಾನು ಫಿಕ್ಸ್ ಆಗಿದೀನಿ...” -ಭರತ್

‘ಸಿಂಪಲ್ಲಾಗ್ ಒಂದ್ ಲವ್ ಸ್ಟೋರಿ’ ಚಿತ್ರದ ...ಲಕ ಕನ್ನಡ ಸಂಗೀತ ರಸಿಕರಿಗೆ ಮಾಧುರ್ಯಭರಿತ ...ಗಳನ್ನು ಕೊಟ್ಟು ಇದೀಗ ‘ಬಹುಪರಾಕ್’ ಚಿತ್ರದ ... ಬಹುನಿರೀಕ್ಷೆ ಇಟ್ಟುಕೊಂಡಿರುವ ಯುವ ಸಂಗೀತ ...ೇಶಕ ಬಿ.ಜೆ.ಭರತ್ ಇಲ್ಲಿ ಮಾತಾಡಿದ್ದಾರೆ.

“ಸ್ಕಾಚ್ ವಿಸ್ಕಿ ಹಾಗೂ ಐಸ್ ಕ್ಯೂಬ್ ನಂಟು ...ದ್ದೋ, ಸಂಗೀತ ಹಾಗೂ ಸಾಹಿತ್ಯದ ನಂಟೂ ...ದ್ದೆ” ಎಂದರು ಭರತ್. “ಅಂದ್ರೆ, ಲಿರಿಕ್ಸ್ ವಿಚಾರದಲ್ಲಿ ... ಮೂಗು ತೂರಿಸಲ್ಲ ಅಂತಾಯ್ತು!” ಅಂದೆ. ಮೊದಲಿ...ಲೂ ಭರತ್ ಒಬ್ಬ ಸದಭಿರುಚಿಯುಳ್ಳ ಸಂಗೀತಗಾರ. ...ದಿಂದಲೂ ಭಾವಗೀತೆಗಳನ್ನಪ್ಪಿಕೊಂಡ ಹೃದಯ...ದು. ಸಿ.ಅಶ್ವಥ್, ಮೈಸೂರು ಅನಂತಸ್ವಾಮಿಗಳ ...ವಕ್ತೊಳಗಾಗಿ ತಾವೂ ಸಂಗೀತದತ್ತ ವಾಲಿಕೊಂಡು ... ನೇಯ್ದವರು.

“ಚಾನ್ಸೇ ಇಲ್ಲ ಸರ್... ನಾನ್ಯಾವತ್ತೂ ಸಾಹಿತ್ಯದ ...ಯದಲ್ಲಿ ಮೂಗು ತೂರಿಸಲ್ಲ. ಸಾಧ್ಯವಾದಷ್ಟು ...ಾಹಿತ್ಯಕ್ಕೆ ಟ್ಯೂನ್ ಹಾಕಲು ಇಷ್ಟಪಡ್ತೀನಿ. ಒಂದು ... ಮೊದಲೇ ಟ್ಯೂನ್ ಹಾಕಿ ಆಮೇಲೆ ಬರೆಸುವಂಥ ...ರ್ಭ ಎದುರಾದರೆ ಉತ್ತಮ ಸಾಲುಗಳನ್ನು ಗೌರವಿಸ್ತೀನಿ. ...ತರ್‌ಗೆ ಐ ಮೀನ್ ಮಾತ್ರೆಗಳ ವಿಷಯದಲ್ಲಿ ಪದಗಳು ...ಟ್ ಆಗ್ಲಿಲ್ಲ ಅಂದ್ರೆ ಮಾತ್ರ ಸಣ್ಣಪುಟ್ಟ ಚೇಂಜಸ್ ...ನಷ್ಟೇ...”

“ಸಾಹಿತ್ಯದ ಬಗ್ಗೆ ನಿಮಗಿರುವ ಗೌರವ ಮೆಚ್ಚುವಂಥದ್ದೇ. ... ಸಂಗೀತದಲ್ಲೇ ಮೂಡಿಬಂದ ‘ಸಿಂಪಲ್ಲಾಗ್ ಒಂದ್ ... ಸ್ಟೋರಿ’ ಚಿತ್ರದ ಹಾಡುಗಳ ಸಾಹಿತ್ಯ ಗುಡ್” ...ೆ. ಭರತ್ ಕಣ್ಣುಗಳಲ್ಲಿ ಒಂದು ಬಗೆಯ ಹೊನಲು ...ಡಾಡಿತು. ಮುಸ್ಸಂಜೆ ಮೋಡಗಳ ದಟ್ಟಚಾವಣಿಯನ್ನು ...ಮಾಚುವ ಹಟಕ್ಕೆ ಬೀಳುವಂತೆ ಬೀದಿಲೈಟುಗಳು ...ಯಲಾರಂಭಿಸಿದವು. ವಿಜಯನಗರದ ಕಾಫಿ ...ೊಳಗಿನ ದೀಪಗಳು ಸೂರ್ಯನಿಲ್ಲದ ಗ್ಯಾರಂಟಿಯನ್ನು ...ತಪಡಿಸಿಕೊಂಡು ತುಸು ಹೆಚ್ಚೇ ಗರ್ವದಿಂದ ...ಲಿಸಿದವು... ಅಕ್ಕಪಕ್ಕದ ಟೇಬಲ್ಲುಗಳಲ್ಲಿ ತಂತಮ್ಮ ...ಂಕರರ ತೋಳಿಗೆ ತೋಳು ಸೇರಿಸಿ ಗುಸುಗುಸು ...ತಗಿಳಿದಿದ್ದ ತಾಜಾ ತರುಣಿಯರ ಕಣ್ಣ ಬೆಳಕಿಗೆ ...ಯಾಗಿ ನಿಲ್ಲುವಷ್ಟರಮಟ್ಟಿಗೆ.

“‘ಸಿಂಪಲ್ಲಾಗ್ ಒಂದ್ ಲವ್ ಸ್ಟೋರಿ’ ಚಿತ್ರದ ...ಪೀರಿಯೆನ್ಸ್ ಹೇಗಿತ್ತು?” ಎನ್ನುವ ನನ್ನ ಪ್ರಶ್ನೆಗೆ ...ರಿಸುತ್ತಾ “ನಿರ್ದೇಶಕ ಸುನಿ ತುಂಬಾ ಮೂಡಿ ಸ್ವಭಾವದ ... ಅವರನ್ನ ಫಸ್ಟ್ ಟೈಂ ನೋಡ್ದಾಗ ಅಷ್ಟೇನೂ ಆಕರ್ಷಕ ... ಅನ್ನಿಸಿರಲಿಲ್ಲ. ನಿಜಕ್ಕೂ ಇವರಿಂದ ಸಿನಿಮಾ ಮಾಡಲು ...ಾಸ ಅಂತ ಅನುಮಾನಿಸಿದ್ದೆ. ಅವರು ಟ್ರೈಲರ್ ...ರಿಸಿದ್ಮೇಲೆ ಶಾಕ್ ಆಯ್ತು. ವೆರಿ ಬ್ರಿಲಿಯೆಂಟ್ ಗೈ. ... ಸಿನಿಮಾ ಹಾಡುಗಳು ಹಿಟ್ ಆಗುವುದರ ಹಿಂದೆ ... ಪಾತ್ರವೂ ದೊಡ್ಡದೇ...”

“ಆ ಚಿತ್ರದ ಹಿನ್ನೆಲೆ ಸಂಗೀತದ ಬಗ್ಗೆ ಹೇಳಿ” ಅಂದೆ.



“ತುಂಬಾ ಫ್ರೀಡಂ ಕೊಟ್ರು. ಕೆಲವು ಕಡೆ ಬರೀ ಗಿಟಾರಿದ್ರೆ ಸಾಕು ಅನ್ನಿಸ್ತಿತ್ತು. ಡೈರೆಕ್ಟರ್ ಒಪ್ತಾರಾ... ಅನ್ಕೊಂಡಿದ್ದೆ. ಒಂದು ರೀಲ್ ರೀ ರೆಕಾರ್ಡಿಂಗ್ ಮುಗಿಸಿದ ಮೇಲೆ ತೋರಿಸಿದೆ. ತುಂಬಾ ಖುಷಿಯಿಂದ ಓಕೆ ಅಂದ್ರು. ಅಲ್ಲೇ ಗೊತ್ತಾಯ್ತು ನಮ್ಮಿಬ್ರು ವೇವ್ ಲೆಂತ್ ಮ್ಯಾಚ್ ಆಗುತ್ತೆ ಅಂತ. ಅದಕ್ಕೇನೆ ಒಳ್ಳೆ ರಿಸಲ್ಟ್ ಸಿಕ್ಕಿದ್ದು. ಹಾಡುಗಳು ಹಿಟ್ ಆಗಿದ್ದು. ಈ ವೇವ್ ಲೆಂತ್ ಅಂತಾರಲ್ಲ ಅದು ತುಂಬಾನೇ ಇಂಪಾರ್ಟೆಂಟ್ ವಿಷಯ ಸಾರ್... ಅದರಲ್ಲೂ ಸಿನಿಮಾ ಫೀಲ್ಡಲ್ಲಿ...”

“ಇತ್ತೀಚೆಗಷ್ಟೇ ಈಟಿವಿಯವರು ಇದೇ ಸಿನಿಮಾಗೆ ಸಂಬಂಧಪಟ್ಟಂತೆ ನಿಮಗೊಂದು ಅವಾರ್ಡ್ ಕೊಟ್ಬಿರ್ಬೇಕು ಅನ್ಸುತ್ತೆ ಅಲ್ವಾ?” ಅಂದೆ.

“ಹೌದು” ಎಂದು ಕಣ್ಣರಳಿಸಿದರು. ಮಗನ ಮೊದಲ ಜಯವನ್ನು ಕಂಡ ಹೆತ್ತವರ ಹಿಗ್ಗನ್ನು ಕುರಿತು ಕೇಳಿದಾಗ “ಅಮ್ಮ ತುಂಬಾ ಖುಷಿಪಟ್ರು... ನಿಜ ಹೇಳ್ಬೇಕಂದ್ರೆ ನಾನು ಚಿಕ್ಕ ಹುಡುಗ ಆಗಿದ್ದಾಗ ಮ್ಯೂಸಿಕ್ ಮೇಲೆ ನನಗಿರೋ ಇಂಟರೆಸ್ಟ್ ಗುರ್ತಿಸಿದ್ದು ನಮ್ಮಮ್ಮಾನೆ. ಸರ್ವಮಂಗಳ ಶಂಕರ್ ಅಂತ ಒಬ್ರು ವಿದ್ವಾನ್ ಇದ್ರು. ಅವರ ಹತ್ರಾನೆ ನನ್ನ ಪ್ರಾಥಮಿಕ ಕಲಿಕೆ (ಕರ್ನಾಟಕ ಶಾಸ್ತ್ರೀಯ ಸಂಗೀತ) ಶುರು ಆಗಿದ್ದು. ಅಮ್ಮಾನೆ ಕರ್ಕೊಂಡು ಹೋಗಿ ಸೇರ್ಸಿದ್ದು...” ಎಂದು ಹೇಳುತ್ತಿದ್ದಂತೆಯೇ ಏನೋ ನೆನಪಾದಂತಾಗಿ ಮಾತನ್ನು ಅರ್ಧಕ್ಕೇ ನಿಲ್ಲಿಸಿ ತಮ್ಮಷ್ಟಕ್ಕೆ ತಾವೇ ಜೋರಾಗಿ ನಗಲಾರಂಭಿಸಿದರು.

‘ಯಾಕೆ?’ ಎನ್ನುವ ಕುತೂಹಲ ಸೂಚಿಸುವ ನನ್ನ ರಿಯಾಕ್ಷನ್ನಿಗೆ ಉತ್ತರಿಸುತ್ತಾ “ನನ್ನ ಬಾಲ್ಯ ನೆನಪಾದಾಗಲೆಲ್ಲಾ ಈ ರೀತಿ ನಗ್ತೀನಿ. ನಾನು ಮ್ಯೂಸಿಕ್ ಕ್ಲಾಸಿಗೆ ಸೇರಿದ್ಮೇಲೆ ನಮ್ಮ ಏರಿಯಾ ಹುಡುಗರೆಲ್ಲಾ ರೇಗಿಸೋಕೆ ಶುರು ಹಚ್ಕೊಂಡಿದ್ರು. ನನ್ನ ಪಾಡಿಗೆ ನಾನು ಹಾಡಿಕೊಳ್ತಾ ಇದ್ರೆ ‘ಶಾಸ್ತ್ರಿ’, ‘ಗಾಂಧಿ’ ಅಂತೆಲ್ಲಾ ಕರೆದು ಗೋಳು ಹುಯ್ಕೊಳ್ತಾ ಇದ್ರು. ಒಂದೊಂದ್ಸಲ ಅತ್ತುಬಿಡಬೇಕು ಅನ್ನಿಸ್ತಿತ್ತು, ಅತ್ತಿದ್ದೂ ಉಂಟು. ಅದನ್ನ ಈಗ ನೆನೆಸ್ಕೊಂಡ್ರೆ ನಗು ಬರುತ್ತೆ ಹ್ಹಹ್ಹಹ್ಹ...” ಮತ್ತೊಮ್ಮೆ ನಕ್ಕರು.

ಈ ಕಾರಣದಿಂದಲೇ ಸಂಗೀತ ಕ್ಲಾಸಿಗೆ ಹೋಗೋದನ್ನೇ ನಿಲ್ಲಿಸಿಬಿಟ್ಟಿದ್ದರಂತೆ! ಮುಂದೆ, ಮನೆಯವರೇ ಒತ್ತಾಯ ಮಾಡಿ ಆರ್.ಆರ್.ಕೇಶವಮೂರ್ತಿಯವರ ಬಳಿ ಸೇರಿಸಿದ ನಂತರ ಮತ್ತೆ ಆಸಕ್ತಿ ಕೆದರಿ ಅಚಾನಕ್ಕಾಗಿ ವಿ.ಮನೋಹರ್ ಸಂಪರ್ಕ ಸಿಕ್ಕಿ ‘ಪಟ್ಟಣಕ್ಕೆ ಬಂದ ಪುಟ್ಟ’ ಚಿತ್ರದಲ್ಲಿ ಹಾಡಿಸಿದರಂತೆ. ಆಮೇಲೆ ‘ವೀರಪ್ಪ ನಾಯಕ’. ‘ಭಾಮ ಸತ್ಯ ಭಾಮ’ ಚಿತ್ರಗಳಲ್ಲೂ ಬಾಲಗಾಯಕನಾಗಿ ಹಾಡಿದ್ದಾಗಿ ಹೇಳಿಕೊಂಡರು. ಅಂದಹಾಗೆ, ಇವರ ‘ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ’ದ ಗುರುಗಳು ಪಂಡಿತ್ ಪರಮೇಶ್ವರ ಭಟ್ಟರು.

“ಈಗ ಮುಖ್ಯವಾಹಿನಿಯ ಸಂಗೀತ ನಿರ್ದೇಶಕರ ಸಾಲಿನಲ್ಲಿ ನೀವೂ ಕೂಡ ಒಬ್ರು. ಇವರ ಜೊತೆಗಿನ ಸ್ಪರ್ಧೆಯಲ್ಲಿ ಸಮರ್ಥವಾಗಿ ನುಗ್ಗಬೇಕಾಗುತ್ತದೆ. ಕೆಲವೊಮ್ಮೆ ಕೆಲವೊಂದು ವ್ಯೂಹಗಳನ್ನೂ ಬೇಧಿಸಬೇಕಾಗುತ್ತದೆ. ಉದಾಹರಣೆಗೆ, ಕೆಲವು ನಿರ್ದೇಶಕರು ಯಾವುದೋ ಒಂದು

ಸಂದರ್ಶನ

ಸಂದರ್ಶಕರು
ಹೃದಯಶಿವ



ಹಿಟ್ ಸಾಂಗನ್ನು (ಇಂಗ್ಲಿಷಿನದ್ದೋ, ಹಿಂದಿಯದ್ದೋ, ತಮಿಳೋ, ತೆಲುಗಿನದ್ದೋ) ತಂದು ಕೇಳಿಸುತ್ತಾರೆ. ನೀವು ಮಾಡಿದ ಟ್ಯೂನುಗಳು ಅವರಿಗೆ ಇಷ್ಟವಾಗದೆ ಹೋದ ಪಕ್ಷದಲ್ಲಿ ಆ ಗೀತೆಯ (ಅವರು ತಂದಿರುತ್ತಾರಲ್ಲಾ ಅದು) ಟ್ಯೂನನ್ನೇ ಉಳಿಸಿಕೊಳ್ಳೋಣವೆಂದೂ ಒತ್ತಾಯಿಸಬಹುದು. ಅಂತಹ ಸನ್ನಿವೇಶದಲ್ಲಿ ಸೋಲಬೇಕಾಗುತ್ತಲ್ವಾ?” ಅಂದೆ.

“ನೋ ಚಾನ್ಸ್! ನಾನು ಸ್ವಂತದನ್ನೇ ಕೊಡ್ತೀನಿ. ಅವರ ಟೇಸ್ಟ್, ಚಿತ್ರಕಥೆಯನ್ನು ಅರ್ಥಮಾಡಿಕೊಂಡು ಹೊಸದನ್ನೇ ಕೊಡ್ತೀನಿ. ನಾನು ಯಾವುದೇ ಕಾರಣಕ್ಕೂ ಯಾರ ಟ್ಯೂನನ್ನೂ ಕದಿಯಲು ಬಯಸಲ್ಲ” ಎಂದು ತುಂಬು ಹೃದಯದಿಂದ ಹೇಳಿದರು. ಇದೇ ಪ್ರಶ್ನೆಯನ್ನು ಇನ್ನು ಹತ್ತು ವರ್ಷಗಳ ನಂತರ ಇವರನ್ನೇ ಕೇಳಬೇಕೆನಿಸಿತು; ಇದೇ ಉತ್ತರವನ್ನು ನಿರೀಕ್ಷಿಸುತ್ತ ಅವರು ಮುಂದುವರೆಸಿದರು “ಏನನ್ನು ಮಾಡ್ತೀನಿ ಅನ್ನೋದ್ಕಿಂತ, ಏನನ್ನು ಮಾಡ್ಬಾರ್ದು ಅನ್ನೋದರ ಬಗ್ಗೆ ನಾನು ಫಿಕ್ಸ್ ಆಗಿದೀನಿ...”

“ಒಳ್ಳೆ ನಿಲುವು. ಹಾಗೇನೆ, ಇಂಥದ್ದೇ ಜಾಗದಲ್ಲಿ ಪಿಯಾನೋ ಮುಂದೆ ಕೂತು ಟ್ಯೂನ್ ಹಾಕ್ಬೇಕು ಅಂತೇನಾದ್ರೂ ಕನಸಿದೆಯಾ?” ಅಂದೆ.

ಇತ್ತೀಚೆಗಷ್ಟೇ ಲಡಾಕಿಗೆ ಹೋಗಿದ್ದಾಗಿಯೂ, ಅಲ್ಲಿರುವ ‘ಪಾಂಗ್ ಗಾಂಗ್ ಟ್ಸೋ’ ಎನ್ನುವ ವಿಚಿತ್ರ ಹೆಸರಿನ (ಕನ್ನಡಿಗರ ಮಟ್ಟಿಗೆ) ಸ್ಥಳ ಬಹುರಮಣೀಯವಾಗಿದ್ದೂ, ಅಂಥದೊಂದು ಅಪೂರ್ವ ದಿನ ಒದಗಿ ಬಂದರೆ ಅಲ್ಲಿ ಆ ಕನಸಿನ ‘ಪಾಂಗ್ ಗಾಂಗ್ ಟ್ಸೋ’ ಎಂಬಲ್ಲಿ ರಾಗ ಹೊಸೆಯುವ ಮಹತ್ವಾಕಾಂಕ್ಷೆ ಇರುವುದಾಗಿಯೂ ಹೇಳಿದರು. ಇದ್ದಕ್ಕಿದ್ದಂತೆ ಯಾವುದೋ ಲಹರಿಗೆ ಜಾರಿ ಒಳಗೊಳಗೇ ಯಾವುದೋ ಟ್ಯೂನನ್ನು ಗುನುಗುತ್ತಾ ಅನ್ಯಮನಸ್ಕರಾದರು. ಓ...ಇವರು ‘ಪಾಂಗ್ ಗಾಂಗ್ ಟ್ಸೋ’ ಸೌಂದರ್ಯ ರಾಶಿಯಲ್ಲಿ ವಿಹರಿಸ್ತಾ ಇದ್ದಾರೆನ್ನಿಸಿ “ನೀವೇಕೆ ಬೇರೆಯವರ ಸಂಗೀತದಲ್ಲೂ ಹಾಡ್ಬಾರ್ದು?” ಎಂಬ ಪ್ರಶ್ನೆಯ ಮೂಲಕ ವಾಸ್ತವಕ್ಕೆ ಕರೆತರಲು ಯತ್ನಿಸಿದೆ. ಮೈ ಮರೆತಿದ್ದುದು ನೆನಪಾಗಿ ಸ್ವಲ್ಪ ನಾಚಿಕೆಯಿಂದಲೇ ಮುಗುಳ್ನಕ್ಕು “ಹಾಡಿದೀನಿ. ಗಂಗಾಕಾವೇರಿ, ಚಿಕ್ಕಮಗಳೂರ ಚಿಕ್ಕಮಲ್ಲಿಗೆ, ಜಂಗಲ್ ಜಾಕಿ... ಇನ್ನೂ ಕೆಲವು ಸಿನಿಮಾಗಳಲ್ಲಿ ಹಾಡಿದೀನಿ...” ಎಂದು ಉತ್ಸಾಹ, ಖುಷಿ, ಗೊಂದಲ ಸಕಲವನ್ನೂ ಸಮ್ಮಿಶ್ರಣಗೊಳಿಸಿ ಹೇಳಿದರು.

“ನೀವು ಸಂಗೀತ ನೀಡುವ ಸಿನಿಮಾಗಳಲ್ಲಿ ಸ್ಥಳೀಯ ಗಾಯಕರಿಗೆ ಆದ್ಯತೆ ಕೊಡ್ತೀರಾ?” ಅಂದೆ.

ಕೆಲವೊಮ್ಮೆ ಪಾಪ್ಯುಲ್ಯಾರಿಟಿ ಸಲುವಾಗಿ, ಸಿಡಿ ಮಾರುವ ಸಲುವಾಗಿ, ಒಣಪ್ರತಿಷ್ಠೆಯ ಸಲುವಾಗಿ ಪರಭಾಷಾ ಗಾಯಕ/ಗಾಯಕಿಯರಿಂದಲೇ ಹಾಡಿಸಬೇಕೆಂದು ಕೆಲವರು ಪಟ್ಟು ಹಿಡಿಯುವ ವಾಸ್ತವಾಂಶವನ್ನರಿತು ಗಾಯಕರ ಆಯ್ಕೆಯ ವಿಷಯದಲ್ಲಿ ಸಂಗೀತ ನಿರ್ದೇಶಕನದೇ ಅಂತಿಮ ತೀರ್ಮಾನವಲ್ಲವೆಂಬಂತೆ ಒಮ್ಮೆ ಕಣ್ಣು ಮಿಟುಕಿಸಿದರು.


ಅಷ್ಟರಲ್ಲಿ ಮಳೆ ಬಂತು. ಮೆದುಳು ತಣ್ಣಗಿನ ಐಸ್ ಕ್ಯೂಬಿನಂತಾಗಿ, ನರನಾಡಿಗಳ ತುಂಬೆಲ್ಲಾ ಸ್ಕಾಚ್ಚಿಂದಿನ ಕಟುಮದ್ಯ ಬೆಚ್ಚಗೆ ಹರಿದಂತಾಗಿ ಎದ್ದು ಹೊರಟೆ.

...ಮತ ಇಂದಿಗೂ ಕಣ್ಣಿಗೆ ಕಟ್ಟಿದಂತಿದೆ. ಇಂತಹ ...ಜಘಾತುಕ ನಿರ್ದಯ ಶರಾಬು ದೊರೆಗಳು ಇಂದು ...ಕೇಶನ್-ಮಾಫಿಯಾದ ದೊರೆಗಳು. ಇಂತಹವರಿಗೆ ...ರ್ಹ ವಿದ್ಯಾರ್ಥಿಗಳ ಅಳಲು ಹೇಗೆ ಅರ್ಥವಾದೀತು.

- ರವಿ ಭಾಸ್ಕರ ಶೆಣವ, ಮಂಗಳೂರು

...ಪ್ರಧಾನ ಸಂಪಾದಕಿ ಗೌರಿ ಲಂಕೇಶರ ಕಂಡಹಾಗೆ ...ನುಡಿದ ಅಮರ್ತ್ಯ ಸೇನ್‌ಗೆ ಧಿಕ್ಕಾರವೇ?’ ಲೇಖನ ...ಪೂರ್ಣವಾಗಿತ್ತು (ಆಗಸ್ಟ್ 7, 2013). ಲೇಖನ ...ನಾನು ಎಂದೂ ಬಿಜೆಪಿಗೆ ಮತ ಚಲಾಯಿಸಲಾರೆನು. ... ಪ್ರಜಾಪ್ರಭುತ್ವದ ರಾಜಕಾರಣದಲ್ಲಿ ಭಾಗವಹಿಸುವ ... ಹಕ್ಕನ್ನು ಪ್ರತಿಪಾದಿಸುತ್ತೇನೆ. ಆದರೆ ಭಾರತದ ...ನ ಸಣ್ಣ ದೃಷ್ಟಿಯು ಹಿಂದೂ ರಾಷ್ಟ್ರ ಎಂಬುದಾಗಿಲ್ಲ. ... ಹಿಂದೆಯೇ ಇಸ್ಲಾಂ ಬಂದಿದ್ದರೂ ಕೂಡ ಭಾರತದಲ್ಲಿ ...ನ್ನರು, ಬೌದ್ಧರು, ಜೈನರು ವ್ಯಾಪಕವಾಗಿ ನೆಲೆನಿಂತ ...ದಾಯಗಳಿದ್ದವು” ಎಂದು 1998ರಲ್ಲಿ ಔಟ್‌ಲುಕ್ ...್ ವಾರಪತ್ರಿಕೆಗೆ ನೀಡಿದ ಸಂದರ್ಶನದಲ್ಲಿ ಅದೇ ... ‘ನೊಬೆಲ್ ಪ್ರಶಸ್ತಿ’ ಪುರಸ್ಕೃತರಾಗಿದ್ದ ಖ್ಯಾತ ...ಶಾಸ್ತ್ರಜ್ಞ ಪ್ರೊ.ಅಮರ್ತ್ಯ ಸೇನ್, ತಮ್ಮ ವೈಯಕ್ತಿಕ ...ಯವನ್ನು ಹೇಳಿದ ಮಾತು ನೆನಪಿಗೆ ಬಂತು. ...ವಾದದಲ್ಲಿ ಇರುವ ಬಿಜೆಪಿ ಸಂಸದ ಚಂದನ ...ರಿಗೆ ಪ್ರೊಸೇನ್‌ರ ಈ ಅಭಿಪ್ರಾಯ ಗೊತ್ತಿರಲಿಕ್ಕಿಲ್ಲ. ...ದೆ ಪ್ರೊ.ಸೇನ್‌ರಿಗೆ 1999 ರಲ್ಲಿ ಅಂದಿನ ...ನೇತೃತ್ವದ ಸರಕಾರದಲ್ಲಿ ಪ್ರಧಾನಿಯಾಗಿದ್ದ ... ಬಿಹಾರಿ ವಾಜಪೇಯಿಯವರ ...ದಲ್ಲಿ “ಸಾಹಿತ್ಯ ಮತ್ತು ಶಿಕ್ಷಣ” ಕ್ಷೇತ್ರದಲ್ಲಿ ...ನ “ಭಾರತ ರತ್ನ” ಪ್ರಶಸ್ತಿಯನ್ನು ...ಗಾಗಬೇಕೆಂದು ಈಗ 2013 ರಲ್ಲಿ ...ದಿದ್ದಾರೆ, ಅದಕ್ಕೆ ಇವರೇಕೆ ಪ್ರೊ.ಸೇನ್‌ರು ...ಯವರಿಂದ ಕೇಳಿದರೆ ಪ್ರಶಸ್ತಿಯನ್ನು ...ಗಿಸುತ್ತೇನೆ’ ಎಂದು ಹೇಳಿದ್ದು ಹಾಗೂ ಇದು ಮಿತ್ರಾರರ ವೈಯಕ್ತಿಕ ಹೇಳಿಕೆ ಎಂದು ಬಿಜೆಪಿ ಹೇಳಿದ್ದು ಎರಡು ಸರಿಯಾಗಿಯೇ ಇವೆ.

- ಪ್ರೊ.ಎಂ.ಬಿ.ಪಾಟೀಲ, ರಾಮದುರ್ಗ



ನರೇಂದ್ರ ಮೋದಿ ಎಂಬ ಪೊಳ್ಳು ಮತ್ತು ಸುಳ್ಳುಗಾರನ ಮುಖವಾಡದ ಹಿಂದಿನ ಸತ್ಯವನ್ನು ಜನತೆಯ ಮುಂದೆ ಎತ್ತಿ ತೋರಿಸುತ್ತಿರುವ ಪತ್ರಿಕೆಯ ಜನಪರ ಕಾಳಜಿಗೆ ಇಡೀ ಕರ್ನಾಟಕದ ಪ್ರಜ್ಞಾವಂತ ಯುವಜನತೆಯ ಪತಿಯಿಂದ ಧನ್ಯವಾದಗಳು.

ನಕ್ಸಲೀಯರ ಬಗೆಗಿನ ನಿಮ್ಮ ಪ್ರಯತ್ನಕ್ಕೆ ಮತ್ತು ಕರೆಗೆ ನಮ್ಮ ದನಿಯನ್ನು ಸೇರಿಸುತ್ತೇವೆ.

- ಭೀಮಣ್ಣಗೌಡ ಪರಗೊಂಡ, ಜೇವರ್ಗಿ

‘ಗೌರಿ ಲಂಕೇಶ್’ ಪತ್ರಿಕೆಯಲ್ಲಿ ಪ್ರಾರಂಭವಾಗಿರುವ ಹೊಸ ಲೇಖನ ಮಾಲೆ ‘ಪತ್ನಿ ಪೀಡಿತರ ಕತೆ-ವ್ಯಥೆ’ ಕುರಿತು: ನಮ್ಮ ನಾಡಿನ ಹೆಣ್ಣುಮಕ್ಕಳು ಗಂಡ ಅಲ್ಪ ಅಧಿಕಾರದಿಂದ ವರ್ತಿಸಿದರೆ ‘ದೌರ್ಜನ್ಯ, ವರದಕ್ಷಿಣೆ ಕಿರುಕುಳ’ ಅಂತ ಕೇಸು ಹಾಕಿ ತಮ್ಮ ಯೌವನ ಮತ್ತು ಜೀವನವನ್ನು ಹಾಳುಮಾಡಿಕೊಳ್ಳುತ್ತಾರೆ. ಅವರ ಕಣ್ಣು ತೆರೆಸುವಂತಹ ಜಾಗೃತಿ ಈ ಮಾಲಿಕೆಯಿಂದ ಆಗಲಿ.

- ಕುಕ್ಕಂಜೆ ಶರೀಫ್, ಎಸ್ ಎಂ ಎಸ್ ಮೂಲಕ

ಕಟ್ಟೇಪುರಾಣ ಎಲ್ಲಿ?

ಮುಂದಿನ ವಾರದಿಂದ ಯಾಹೂ ಅವರ ‘ಥಾತ್ತೇರಿ’ ಮತ್ತು ಬಿ.ಚಂದ್ರೇಗೌಡರ ‘ಕಟ್ಟೆಪುರಾಣ’ ಬರದಿದ್ದರೆ ಪತ್ರಿಕೆಯನ್ನು ಖರೀದಿಸುವುದಿಲ್ಲ.

ಜನ ಮೋದಿ ಬಗ್ಗೆ ಮಾತಾಡಿ ಮಾತಾಡಿಯೇ ಅವನು ಪ್ರಧಾನ ಮಂತ್ರಿ ಅಭ್ಯರ್ಥಿಯಾಗುವಂತೆ ಮಾಡಿದ್ದಾರೆ. ನಿಮ್ಮನ್ನೂ ಸೇರಿಸಿ.

- ಓದುಗ, ಎಸ್ ಎಂ ಎಸ್ ಮೂಲಕ

ಭಾರತೀಯರು ಆಳದಲ್ಲಿ ಸೆಕ್ಯೂಲರ್ ಎಂಬ ತೀಸ್ತಾ ಅವರ ಮಾತು ಬಹಳ ನಿಜ. ಆದರೆ ಆಲೋಚನೆಗಳು ಈ ಆಳವನ್ನು ತಲುಪಲು ಹಿಂದೂ ಕೋಮುವಾದದ ಅಬ್ಬರ ಅವಕಾಶ ಮಾಡಿಕೊಡುವುದಿಲ್ಲ. ‘ಮಿತ್’ಗಳನ್ನು ನಮ್ಮೆದುರು ಹರಡಿ ಮಂಕು ಕವಿಸಿಬಿಡುತ್ತದೆ. ಈಗಿನ ಹೊಸ ನೀಚಾತಿ ನೀಚ ‘ಮಿತಿ’ ಮೋದಿಯೇ ಆಗಿದ್ದಾನೆ. ಬಾಲಬಡುಕರು ಮೋದಿಯ ಹಿಂದೆ ಎಷ್ಟೇ ಕುಣಿಯಲಿ ನಮ್ಮ ದೇಶದಲ್ಲಿ ಸೌಹಾರ್ದತೆ ಉಳಿಯುತ್ತದೆ.

- ರವಿಕುಮಾರ್, ಹಾಸನ

ಚಂದ್ರೇಗೌಡರು ಎಲ್ಲಿ ಹೋಗಿದ್ದಾರೆ. ‘ಕಟ್ಟೆಪುರಾಣ’ ಇಲ್ಲದೆ ಪೇಪರ್ ಸಪ್ಪೆ.

- ಓದುಗ, ಎಸ್ ಎಂ ಎಸ್ ಮೂಲಕ

ಬೇಲಿಯೇ ಎದ್ದು ಹೊಲ ಮೇದಂತೆ?

ತಮ್ಮ ಪತ್ರಿಕೆಯ ಮೂಲಕ ನಮಗಾದ ಅನ್ಯಾಯವನ್ನು ತಮ್ಮೊಂದಿಗೆ ಹಂಚಿಕೊಳ್ಳಲೇ ಬೇಕು. ದಿನಾಂಕ 22/07/2013 ರಂದು ಸೋಮವಾರ ಸರ್ಕಾರಿ ನೌಕರರ ಚುನಾವಣೆ ರಾಜ್ಯಾದ್ಯಂತ ನಡೆದು ಫಲಿತಾಂಶ ಬಂದಿರುವುದು ಸರಿ. ಆದರೆ ಸೊರಬದಲ್ಲಿ ನಡೆದ ನೌಕರರ ಚುನಾವಣೆ ಕೊಂಚ ಭಿನ್ನವಾಗಿತ್ತು. ಅದರಲ್ಲೂ ವಿಶೇಷವಾಗಿ ಪ್ರಾಥಮಿಕ ಶಾಲಾಶಿಕ್ಷಕರ ಚುನಾವಣೆಯ ಫಲಿತಾಂಶದ ಎಣಿಕೆ ಕಾರ್ಯ ಮಾತ್ರ ಭಾರತದ ಚುನಾವಣಾ ಆಯೋಗದ ಇತಿಹಾಸದಲ್ಲಿ ಒಂದು ದಾಖಲೆಯನ್ನು ಸೃಷ್ಟಿ ಮಾಡಿದೆ. ಸುಮಾರು 823 ಮತಗಳು ಚಲಾವಣೆಗೊಂಡ 679 ರಲ್ಲಿ 108 ಮತಗಳು ಅಸಿಂಧುಗೊಂಡಿದ್ದವು. ಅಸಿಂಧು ಮತಗಳನ್ನು ಹೊರತುಪಡಿಸಿ ಫಲಿತಾಂಶ ನಿರ್ಧರಿಸಿದಾಗ ಆನಂದಪ್ಪ ಬಿ, ಹಾಲಪ್ಪ ಡಿ ನಂದೀಶ ಮತ್ತು ಸೋಮಶೇಖರ ಆಯ್ಕೆಯಾಗಿದ್ದರು. ಆದರೆ ಮತ ಎಣಿಕೆಗೆ ಕುಳಿತಿದ್ದ ಸಂಪನ್ಮೂಲ ವ್ಯಕ್ತಿಯೊಬ್ಬರಿಗೆ ಸೋಮಶೇಖರನ ಆಯ್ಕೆ ಏಕೋ ಸಮಾಧಾನ ತರಲಿಲ್ಲ. ಆಗ ಆತ ಸಂಘದವರ ಕಿವಿಯ ಮೇಲೆ ಹೂ ಇಟ್ಟು ‘ಕುಲಗೆಟ್ಟ ಮತಗಳನ್ನು ಸೇರಿಸಿ ಎಣಿಕೆ ಮಾಡಿ ಇಲ್ಲವೆಂದರೆ ಶಿಕ್ಷಕರ ಮರ್ಯಾದೆ ಹಾಳಾಗುತ್ತೆ’ ಎಂದು ಪುಂಗಿ ಊದಿದ್ದಾನೆ. ಇದರ ತಲೆಬುಡ ತಿಳಿಯದ ಶಿಕ್ಷಕರ ಸಂಘ ಒಪ್ಪಿಗೆ ನೀಡಿದ್ದೆ ತಡ. ಸ್ವತಃ ನೊಂದಾವಣೆ ವಿಭಾಗದಲ್ಲಿ ಕುಳಿತಿದ್ದ ಸಂಪನ್ಮೂಲ ವ್ಯಕ್ತಿ ತನ್ನ ಕೈಚಳಕ ತೋರಿಸಿ ತನಗೆ ಬೇಕಾದ ವ್ಯಕ್ತಿ ಸಮಬಲಗಳಿಸುವಂತೆ ನೋಡಿಕೊಂಡಿರುವುದಲ್ಲದೆ ನಂತರ ನಡೆದ ಲಾಟರಿಯಲ್ಲಿ ತನ್ನ ಅಭ್ಯರ್ಥಿ ಗೆಲುವನ್ನು ಪಡೆದುಕೊಂಡಿದ್ದು ಈಗ ಇತಿಹಾಸ. ಆದರೆ ನನ್ನನ್ನು ಕಾಡುತ್ತಿರುವ ಪ್ರಶ್ನೆಯೆಂದರೆ ಕುಲಗೆಟ್ಟ 108 ಮತಗಳನ್ನು ಎಣಿಕೆಗೆ ಬಳಸುವುದಕ್ಕೆ ಅನುಮತಿ ಕೊಟ್ಟ ಚುನಾವಣಾ ಅಧಿಕಾರಿಯ ಮನೋಭಾವ ಅವರ ಕಾನೂನು ತಿಳಿವಳಿಕೆ ಕಂಡು ನಮ್ಮಂತಹ ಸಾಮಾನ್ಯರಾಗಿರುವ ನಮಗೆ ಬೇಸರವಾಗಿತ್ತು. ಒಂದೊಂದು ಬ್ಯಾಲೆಟ್‌ನಲ್ಲಿ ನಾಲ್ಕು ಮತಗಳು ಎಂಟು ಗುರುತುಗಳು ಮೂಡಿದ್ದವು. ಅಂತಹ ಮತಗಳು ಕೂಡ ಸಿಂಧುವಂತೆ. ಅಂದರೆ ಸಾಮಾನ್ಯರಿಗೆ ನಡೆಯುವ ಚುನಾವಣೆಗೆ ಒಂದು ಕಾನೂನು, ಸರ್ಕಾರಿ ನೌಕರರಿಗೆ ನಡೆಯುವ ಚುನಾವಣೆಗೆ ಇನ್ನೊಂದು ಕಾನೂನೆ? ಅದರಲ್ಲೂ ಶಿಕ್ಷಕರು ಇಂತಹ ತಪ್ಪು ಮಾಡಿರುವುದು ನಾಚಿಕೆಗೇಡಿನ ಸಂಗತಿ. ಒಂದು ಬ್ಯಾಲೆಟ್ ಮತಪತ್ರ ಮಡಚುವ ಸಂಗತಿ ಗೊತ್ತಿಲ್ಲವೆಂದರೆ ಹೇಗೆ? ಅಥವಾ ಅಸಿಂಧುಗೊಳಿಸಿದ ಮತಪತ್ರಗಳನ್ನು ಬಳಸಿ ಫಲಿತಾಂಶ ನಿರ್ಧರಿಸಲು ಮುಂದಾಗುತ್ತಾರೆ ಎಂದರೆ ಇದೊಂದು ಬೇಲಿಯೇ ಎದ್ದು ಹೊಲ ಮೇದಂತೆ ಅಲ್ಲವೇ?

- ಮಂಜಪ್ಪ, ಸೊರಬ


ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ಕಳುಹಿಸಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.

Registered No.KA/RNP/BGS/2036/2011-13 Posted at : GPO, Bangalore-01. Friday R B P LANKESH, Kannada Weekly

ನಿಶಾಳ ಚಿತ್ರರಂಗದ ಎಂಟ್ರಿ



"ಇದು ಸಿನಿಮಾ ಸುದ್ದಿಯೋ? ಅಥವಾ ರಾಜಕೀಯ ಸುದ್ದಿಯೋ? ಎಂಬುದು ಗೊತ್ತಿಲ್ಲ. ಆದೇನೆಂದರೆ ಮಾಜಿ ಸಚಿವ, ಹಾಲಿ ಶಾಸಕ ಸಿ.ಪಿ.ಯೋಗೇಶ್ವರ್ ಅವರ ಮಗಳು ನಿಶಾ ಮುಖಕ್ಕೆ ಬಣ್ಣಹಚ್ಚಿ ಚಿತ್ರರಂಗಕ್ಕೆ ನಾಯಕಿಯಾಗಿ ಪಾದಾರ್ಪಣೆ ಮಾಡಲಿರುವುದು ಬಹುತೇಕ ಖಚಿತವಾಗಿದೆ. ಆಗಸ್ಟ್ 15 ರಂದು ಸೆಟ್ಟೇರಲಿರುವ 'ಅಂಬರೀಷ' ಚಿತ್ರದಲ್ಲಿ ನಾಯಕ ದರ್ಶನ್ ಎದುರಿಗೆ ಈಕೆ ನಾಯಕಿಯಾಗಿ ನಟಿಸಲಿದ್ದಾಳೆ. ಸುಮಾರು ಆರಡಿ ಎತ್ತರದ, ಬಳುಕುವ ಮೈಕಟ್ಟನ್ನು ಹೊಂದಿರುವ ನಿಶಾ ನೋಡಲು ಸಿನಿಮಾ ತಾರೆಯಂತೆ ಕಾಣಿಸುತ್ತಾಳೆ ಎಂಬುದರಲ್ಲಿ ಎರಡು ಮಾತಿಲ್ಲ, ಈ ಹಿಂದೆ ಅನೇಕ ನಿರ್ಮಾಪಕರು ಆಕೆಯನ್ನು ನಾಯಕಿಯನ್ನಾಗಿ ಮಾಡಲು ಪ್ರಯತ್ನಿಸಿ ವಿಫಲರಾಗಿದ್ದರು. ಆದರೆ, ಕೊನೆಗೂ ಈ ಮಾಯಾಲೋಕದ ಆಕರ್ಷಣೆಯಲ್ಲಿ ನಿಶಾ ಸಿಲುಕಿಕೊಂಡಿರುವುದು ಆಶ್ಚರ್ಯವೇನೂ ಅಲ್ಲ, ಆದರೆ ನಿಶಾ ನಾಯಕಿಯಾಗಿ ದರ್ಶನ್ ಜೊತೆ ನಟಿಸುತ್ತಿರುವುದನ್ನು ಗಾಂಧಿನಗರದ ಜನ ಅಷ್ಟೊಂದು ಗಂಭೀರವಾಗಿ ಪರಿಗಣಿಸಿಲ್ಲ. ಏಕೆಂದರೆ ಇದೊಂದು ರಾಜಕೀಯ ಗಿಮಿಕ್ ಎನ್ನುವವರೇ ಹೆಚ್ಚು, ಹಾಗೆ ನೋಡಿದರೆ ಈಕೆಯ ತಂದೆ ಯೋಗೇಶ್ವರ್ ಕೂಡ ಆರಂಭದಲ್ಲಿ ಒಂದೆರಡು ಸಿನಿಮಾಗಳನ್ನು ನಿರ್ಮಿಸಿತು, ಅವುಗಳಲ್ಲಿ ತಾನೇ ನಾಯಕನಾಗಿ ನಟಿಸಿ, ಕೋಟ್ಯಾಂತರ ರೂಪಾಯಿಯನ್ನು ಕಳೆದುಕೊಂಡಿದ್ದರು. ಬಾಕ್ಸ್ ಆಫೀಸಿನಲ್ಲಿ ಸೋತ ಆ ಚಿತ್ರಗಳಿಂದ ಯೋಗೇಶ್ವರ್‌ಗೆ ಒಂದು ಪೈಸೆ ಲಾಭ ಸಿಗದಿದ್ದರೂ ಆತನಿಗೆ ಸಾಕಷ್ಟು ಪುಕ್ಕಟೆ ಪ್ರಚಾರ ಸಿಕ್ಕಿತ್ತು, ಮುಂದೆ ಚುನಾವಣೆಗೆ ನಿಂತಾಗ ಈ ಪ್ರಚಾರ ಮತ್ತು ಸಿನಿಮಾ ಗ್ಲಾಮರ್ ಯೋಗೇಶ್ವರ್‌ಗೆ ಗೆಲುವಲ್ಲಿ ಪ್ರಮುಖ ಪಾತ್ರ ವಹಿಸಿದ್ದವು.



ಈಗ ಬಹುಶಃ ಅದೇ ಮಾದರಿಯಲ್ಲಿ ಯೋಗೇಶ್ವರ್ ತನ್ನ ಮಗಳನ್ನು ನಾಯಕಿಯನ್ನಾಗಿ ಮಾಡಿ, ಮುಂದಿನ ಚುನಾವಣೆಗೆ ಸಿದ್ಧತೆ ಮಾಡುತ್ತಿದ್ದಾರೆ ಎಂದೇ ರಾಜಕೀಯ ವಲಯದಲ್ಲಿ ಮಾತನಾಡುತ್ತಿದ್ದಾರೆ. ಏಕೆಂದರೆ ಮೊನ್ನೆಯ ಚುನಾವಣೆಯಲ್ಲಿಯೂ ನಿಶಾ ತನ್ನ ತಂದೆಯ ಪರವಾಗಿ ಬಿರುಸಿನ ಪ್ರಚಾರವನ್ನು ಮಾಡಿ ಚನ್ನಪಟ್ಟಣದಲ್ಲಿ ಮಿಂಚಿದ್ದಳು.

ಅದೆಲ್ಲ ಏನೇ ಇರಲಿ, ನಿಶಾ ನಮ್ಮ ಈಗಿನ ಸಿನಿಮಾ ನಾಯಕಿಯರನ್ನು ನಾಚಿಸುವ ರೀತಿಯಲ್ಲಿ ಬಳ್ಳಿಯಂತೆ ಬಳುಕುತ್ತ ಉತ್ತಮ ಮೈಸಿರಿಯನ್ನು ಹೊಂದಿದ್ದಾರೆಂಬುದು ಮಾತ್ರ ನೂರಕ್ಕೆ ನೂರು ನಿಜ. ಹೀಗಾಗಿ ಈ ನಿಶಾಳ ಚಿತ್ರರಂಗದ ಎಂಟ್ರಿ ಪಡ್ಡೆ ಹುಡುಗರ ನಿಶೆ ಏರಿಸುತ್ತದೋ? ಅಥವಾ ರಾಜಕಾರಣಿಗಳ ನಿಶೆಯನ್ನೋ? ಇದೇ ಮಿಲಿಯನ್ ಡಾಲರ್ ಪ್ರಶ್ನೆಯಾಗಿದೆ.

ನಾಮಕಾವಾಸ್ತೆಗೆ 'ಮಂಗನ ಕೈಯಲ್ಲಿ ಮಾಣಿಕ್ಯ'



ಕಳೆದ ವಾರ 'ಮಂಗನ ಕೈಯಲ್ಲಿ ಮಾಣಿಕ್ಯ' ಎಂಬ ಚಿತ್ರ ಸದ್ದುಗದ್ದಲವಿಲ್ಲದೆ ಬಿಡುಗಡೆಯಾಯಿತು. ರಮೇಶ್ ಅರವಿಂದ್ ನಾಯಕನಾಗಿ ನಟಿಸಿರುವ ಈ ಚಿತ್ರವನ್ನು ಅವರ ಗೆಳೆಯ ಕಾರಂತ್ ನಿರ್ದೇಶಿಸಿದ್ದರು. ಅದಕ್ಕಿಂತ ಮುಖ್ಯವಾಗಿ ಕನ್ನಡ ಚಿತ್ರರಂಗದ ಶ್ರೀಮಂತ ನಿರ್ಮಾಪಕರಲ್ಲಿ ಒಬ ಸಂದೇಶ್ ನಾಗರಾಜ್ ಈ ಚಿತ್ರದ ನಿರ್ಮಾಪಕರು.

ಯಾವಾಗಲೂ ಆಡಂಬರ, ಶ್ರೀಮಂತಿಕೆ ಮತ್ತು ಪ್ರಚಾರದ ಅಬ ಕಾಣಿಸುವುದನ್ನು ಇಷ್ಟಪಡುವ ಸಂದೇಶ್ ನಾಗರಾಜ್ ಈ ಚಿತ್ರವನ್ನು ಅ ಸೈಲೆಂಟಾಗಿ ಮುಗಿಸಿದರೆಂದರೆ ಇದರ ಬಗ್ಗೆ ಪತ್ರಕರ್ತರಿಗೂ ಮಾಹಿತಿ ಸಿಕ್ಕಿ

ಸಂದೇಶ್ ನಾಗರಾಜ್ ಹೀಗೇಕೆ ಮಾಡಿದರು? ಎಂದು ಹುಡ ಹೋದಾಗ ತಿಳಿದದ್ದಿಷ್ಟು: ಈ ಚಿತ್ರವನ್ನು ಬಿಡುಗಡೆ ಮಾಡದಿದ್ದರೇ ಅ ಲಾಭವಾಗುತ್ತಿತ್ತಂತೆ. ಏಕೆಂದರೆ ಅತ್ಯಂತ ಕಡಿಮೆ ಬೆಲೆಯಲ್ಲಿ ನಿರ್ಮಾಣ ಮಾ ಈ ಚಿತ್ರದ ಟಿ.ವಿ. ಹಕ್ಕನ್ನು ಸಂದೇಶ್ ನಾಗರಾಜ್ ಒಳ್ಳೆ ಬೆಲೆಗೆ ಮ ಮಾಡಿ ಲಾಭ ಮಾಡಿಕೊಂಡಿದ್ದಾರೆ. ಆದರೆ ಚಿತ್ರ ಟಿ.ವಿ. ಪ್ರಸಾರವಾಗಬೇ ಅದೊಮ್ಮೆ ಬಿಡುಗಡೆಯಾಗಲೇಬೇಕು. ಈ ಕಾರಣಕ್ಕಾಗಿ ಸಂದೇಶ್ ನಾಗ ನಾಮಕಾವಾಸ್ತೆಗೆ ಈ ಚಿತ್ರವನ್ನು ಬಿಡುಗಡೆ ಮಾಡಿದ್ದರು.

ಹೀಗೆ ಬಿಡುಗಡೆ ಮಾಡಿದ ಚಿತ್ರ ಒಂದೇ ವಾರಕ್ಕೆ ಥಿಯೇಟರ ಎತ್ತಂಗಡಿಯಾಗಿದೆ. ಇದರರ್ಥ ಇಷ್ಟೆ, ನಾಯಕ ನಟ ರ ಅರವಿಂದ್ ಈಗ ಟಿ.ವಿ. ನಾಯಕರಾಗಿ ಸೀಮಿತರಾಗಿದ್ದಾರೆ. ಹಾ ಒಂದು ಕಾಲದಲ್ಲಿ ಕೋಟಿಕೋಟಿ ಸುರಿಯಲು ಹಿಂದೆ ನೋಡದಿದ್ದ ಸಂದೇಶ್‌ನಾಗರಾಜ್ ಈಗ ಸಣ್ಣ ಬಜ ನಿರ್ಮಾಪಕರಾಗಿದ್ದಾರೆ.

ಕನ್ನಡ ಚಿತ್ರಕ್ಕಾಗಿ ಹಿಂದಿ ಚಿತ್ರ ತ್ಯಾಗ?

ನಮ್ಮ ಕನ್ನಡದ ನಟನಟರಿಗೆ ಹಿಂದಿಯಲ್ಲಿ ನಟಿಸುವ ಹುಚ್ಚು ಇಂದು-ನಿನ್ನೆಯದಲ್ಲ, ಅನೇಕ ಜನ ನಾಯಕ-ನಾಯಕಿಯರು ಹೀಗೆ ಬಾಲಿವುಡ್‌ನಲ್ಲಿ ತಮ್ಮ ಅದೃಷ್ಟವನ್ನು ಪರೀಕ್ಷಿಸಲು ವರ್ಷಾನುಗಟ್ಟಲೆ ಮುಂಬೈನಲ್ಲಿ ಕಾಲಕಳೆದದ್ದುಂಟು. ಆನಂತರ ಯಾವುದೇ ಅವಕಾಶ ಸಿಗದೆ ಭ್ರಮನಿರಸನಗೊಂಡು ಅವರು ಮರಳಿ ಕನ್ನಡ ಚಿತ್ರರಂಗಕ್ಕೆ ಬಂದದ್ದೂ ಉಂಟು. ಇದಕ್ಕೆ ಇತ್ತೀಚಿಗಿನ ಉದಾಹರಣೆಗೆ, ಭಾವನಾ, ಡೈಸಿ ಬೋಪಣ್ಣ, ನಿಧಿ ಸುಬ್ಬಯ್ಯ ಮೊದಲಾದವರು. ಈಗ ಇವರ ಸಾಲಿಗೆ ಕನ್ನಡದ ಡಿಂಪಲ್ ಸ್ಟಾರ್ ದಿಗಂತ್ ಕೂಡ ಸೇರುತ್ತಾನೆ.



ತೀರ್ಥಹಳ್ಳಿಯ ಈ ಹುಡುಗ ಬಾಲಿವುಡ್‌ಗೆ ಕಾಲಿಡುತ್ತಿದ್ದಾನೆ ಎಂದು ಹಲವಾರು ಬಾರಿ ಸುದ್ದಿಯಾಗಿತ್ತು, ಆದರೆ ಅವೆಲ್ಲ ಆನಂತರ 'ಟುಸ್' ಆಗಿದ್ದವು. ಆದರೂ ಮೂರನೆ ಬಾರಿಗೆ ಯಶಸ್ವಿ ಆಗುವ ಬಗ್ಗೆ ಹೇಳಿಕೊಂಡಿದ್ದ ದಿಗಂತ್ ತಾನು ನಟಿಸಲಿರುವ ಹಿಂದಿ ಚಿತ್ರದ ನಿರ್ದೇಶಕ ವಿಕ್ರಂ ಭಟ್ ಎಂದೂ ಘೋಷಿಸಿದ್ದ, ಈಗ ಅದೂ ಟೇಕ್ ಆಫ್ ಆಗುತ್ತಿಲ್ಲ.

ಆದರೆ ಮೊನ್ನೆ 'ಬರ್ಫಿ' ಚಿತ್ರದ ಸಂತೋಷಕೂಟದಲ್ಲಿ ಮಾತನಾಡಲು ಸಿಕ್ಕ ದಿಗಂತ್ ಹೇಳಿದ್ದೇ ಬೇರೆ. ""ಬರ್ಫಿ' ಚಿತ್ರ ಸೆಪ್ಟೆಂಬರ್‌ನಲ್ಲಿ ಆರಂಭವಾಗಲಿದೆ. ಅದೇ ಸಂದರ್ಭದಲ್ಲಿ ಕನ್ನಡದಲ್ಲಿ ದಿನಕರ್ ತೂಗುದೀಪ್ ನಿರ್ದೇಶನದ 'ನಮ್ಮೂರಲ್ಲೊಬ್ಬ ರಾಜ' ಚಿತ್ರವು ಆರಂಭವಾಗಲಿದೆ. ಹೇಗಾದರೂ ಮಾಡಿ ಈ ಎರಡೂ ಚಿತ್ರಗಳಲ್ಲಿ ನಟಿಸಲೇಬೇಕು ಎಂಬ ಉದ್ದೇಶದಿಂದ ಮುಂಬೈಗೆ ಹೋಗಿ ಹಿಂದಿ ಚಿತ್ರದ ನಿರ್ಮಾಪಕರ ಜೊತೆ ಮಾತನಾಡಿದೆ. ಆದರೆ ಅವರು ಈಗಾಗಲೇ ಕಾರ್ಯಕ್ರಮದ ಪಟ್ಟಿಯನ್ನು ಹಾಕಿಕೊಂಡಿರುವುದರಿಂದ ಯಾವುದೇ ಕಾರಣಕ್ಕೂ ಪಟ್ಟಿ ಬದಲಾಯಿಸುವುದಿಲ್ಲ ಎಂದು ಹೇಳಿದರು. ಆದಕ್ಕೇ ಕೊನೆಗೆ ಉಪಾಯವಿಲ್ಲದೆ ಕನ್ನಡ ಚಿತ್ರಕ್ಕಾಗಿ ನಾನು ಹಿಂದಿ ಚಿತ್ರವನ್ನು ತ್ಯಾಗ ಮಾಡಿದ್ದೇನೆ" ಎಂದು ದಿಗಂತ್ ಹೇಳಿದ.

ದಿಗಂತ್ ಮಾತು ಎಷ್ಟು ನಿಜ ಎಂಬುದು ಗೊತ್ತಿಲ್ಲ, ಆದರೆ ಕನ್ನಡ ಚಿತ್ರಕ್ಕಾಗಿ ಹಿಂದಿ ಚಿತ್ರವನ್ನು ತ್ಯಾಗ ಮಾಡಿದೆ ಎಂದು ಜಾಣ್ಮೆಯಿಂದ ದಿಗಂತ್ ಹೇಳಿದ್ದು ಮಾತ್ರ ನಗು ಬರಿಸುತ್ತದೆ.



ವೀಣಾ ಚಿತ್ರ 16 ಭಾಷೆಗೆ?

ಕನ್ನಡ ಚಿತ್ರವೊಂದಕ್ಕೆ ಇದ್ದಕ್ಕಿದ್ದಂತೆ ಎಲ್ಲಿಲ್ಲದ ಬೇಡಿಕೆ ಕಂಡುಬಂದಿದೆ. ಬರುವ ಆಗಸ್ಟ್ 2ರಂದು ಈ ಚಿತ್ರ ಕರ್ನಾಟಕದಾದ್ಯಂತ ಬರೋಬ್ಬರಿ 120 ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಲಿದೆ. ಅಷ್ಟೇ ಅಲ್ಲ, ಸಾಮಾನ್ಯವಾಗಿ ತೆಲುಗು ಮತ್ತು ತಮಿಳರು ಹೆಚ್ಚಿನ ಸಂಖ್ಯೆಯಲ್ಲಿರುವ ಪ್ರದೇಶಗಳ ಥಿಯೇಟರ್‌ಗಳಲ್ಲೂ ಇದನ್ನು ಬಿಡುಗಡೆ ಮಾಡಲು ನಿರ್ಮಾಪಕ ಆರ್.ವಿ. ವೆಂಕಟಪ್ಪ ನಿರ್ಧರಿಸಿದ್ದಾರೆ. ಇದೆಲ್ಲದರ ಜೊತೆಗೆ ಈಗಾಗಲೇ ಈ ಚಿತ್ರವನ್ನು ತಮಿಳು, ತೆಲುಗು, ಮಲಯಾಳಂ ಮತ್ತು ಹಿಂದಿ ಭಾಷೆಯವರೂ ಕೇಳಿದ್ದಾರಂತೆ. ಪಾಕಿಸ್ತಾನಿ, ಬಾಂಗ್ಲಾ ಮತ್ತು ಶ್ರೀಲಂಕಾ ಸೇರಿದಂತೆ ಸುಮಾರು 16 ಭಾಷೆಗಳಲ್ಲಿ ಈ ಚಿತ್ರವನ್ನು ಡಬ್ ಮಾಡಲು ಬೇಡಿಕೆ ಬಂದಿದೆಯಂತೆ.



ಯಾವುದಪ್ಪಾ ಈ ಚಿತ್ರ ಎಂದು ಯೋಚಿಸುತ್ತಿದ್ದೀರಾ? ಇದು ಬೇರೆ ಯಾವ ಚಿತ್ರವೂ ಅಲ್ಲ ಪಾಕಿಸ್ತಾನದ ವಿವಾದಾತ್ಮಕ 'ಹಾಟ್' ನಟಿ ವೀಣಾ ಮಲ್ಲಿಕ್ ನಾಯಕಿಯಾಗಿ ಮತ್ತು ಅಕ್ಷಯ್ ಎಂಬಾತ ನಾಯಕನಾಗಿ ನಟಿಸಿರುವ 'ಸಿಲ್ಕ್' ಚಿತ್ರ! ಕನ್ನಡ ಚಿತ್ರವೊಂದಕ್ಕೆ ಇತ್ತೀಚಿನ ದಿನಗಳಲ್ಲಿ ಇಷ್ಟೊಂದು ಬೇಡಿಕೆ ಯಾವ ಚಿತ್ರಕ್ಕೂ ಬಂದಿರಲಿಲ್ಲ, ಹಾಗಂತ ಇದರ ಬಗ್ಗೆ ಕನ್ನಡಿಗರು ಸಂತೋಷ ಪಡುವ ಹಾಗಿಲ್ಲ, ಏಕೆಂದರೆ ಈ ಚಿತ್ರಕ್ಕೆ ಇಷ್ಟೊಂದು ಬೇಡಿಕೆ ಬರಲು ಮುಖ್ಯ ಕಾರಣ ವೀಣಾ ಮಲ್ಲಿಕ್ ಇದರಲ್ಲಿ ಬಿಸಿಬಿಸಿಯಾಗಿ ನಟಿಸಿರುವುದು.

ಈಗಿನ ಯುವಜನಾಂಗ ಈ ನಟಿಯ ಅರೆನಗ್ನ ಚಿತ್ರಗಳನ್ನು ಯು ಟ್ಯೂಬ್ ಮತ್ತು ಫೇಸ್‌ಬುಕ್‌ಗಳಲ್ಲಿ ನೋಡಿ ಆನಂದಪಟ್ಟಿದ್ದು ಎಲ್ಲರಿಗೂ ಗೊತ್ತಿದೆ. ಈ ಕಾರಣಕ್ಕಾಗಿ ಈಗ ವೀಣಾ ಮಲ್ಲಿಕ್ ನಟಿಸಿರುವ ಈ ಚಿತ್ರಕ್ಕೆ ಇಷ್ಟೊಂದು ಬೇಡಿಕೆ ಬಂದಿದೆ. ಆದರೆ ಚಿತ್ರದ ನಿರ್ದೇಶಕ ತ್ರಿಶೂಲ್ ಹೇಳುವಂತೆ 'ಇದೊಂದು ಸಾಂಸಾರಿಕ ಚಿತ್ರವಾಗಿದ್ದು, ಕುಟುಂಬದ ಸದಸ್ಯರೆಲ್ಲರೂ ಒಟ್ಟಿಗೆ ಕುಳಿತು ನೋಡಬಹುದು.' ಆದರೆ ಸೆನ್ಸಾರ್ ಆಫೀಸ್‌ನವರು ಈ ಚಿತ್ರಕ್ಕೆ 'ಎ' ಸರ್ಟಿಫಿಕೇಟ್ ನೀಡಿ ಇದು ಕಡ್ಡಾಯವಾಗಿ ವಯಸ್ಕರು ಮಾತ್ರ ನೋಡಬಹುದಾದ ಚಿತ್ರ ಎಂದು ಹೇಳಿದ್ದಾರೆ.

ಒಂದು ಕಾಲದಲ್ಲಿ ಹೊಸ ಅಲೆಯ ಕಲಾತ್ಮಕ ಚಿತ್ರಗಳ ಮುಖಾಂತರ ರಾಷ್ಟ್ರಮಟ್ಟದಲ್ಲಿ ಹೆಸರು ಮಾಡಿದ್ದ ಕನ್ನಡ ಚಿತ್ರರಂಗ, ಈಗ ಒಂದು ವಿದೇಶಿ ನಾಯಕಿಯ ಅರೆನಗ್ನ ದೃಶ್ಯಗಳಿಂದಾಗಿ ಎಲ್ಲೆಡೆ ಸುದ್ದಿ ಮಾಡುತ್ತಿರುವುದು ವಿಪರ್ಯಾಸವಲ್ಲವೇ? ಇಂತಹ ಕನ್ನಡ ಚಿತ್ರಕ್ಕೆ ಎಂಟೂ ದಿಕ್ಕಿನಿಂದ ಬೇಡಿಕೆ ಬಂದಿದೆ ಎಂದು ನಾವು ಸಂತೋಷ ಪಡುವ ಬದಲು ದುಃಖ ಪಡಬೇಕಾಗಿದೆ.

ರವಿಚಂದ್ರನ್ 'ಅಪ್ಪ'ನಾಗಲಿದ್ದಾರೆ

ಕ್ರೇಜಿಸ್ಟಾರ್ ರವಿಚಂದ್ರನ್ 'ಅಪ್ಪ'ನಾಗಲಿದ್ದಾರಂತೆ. ಹೀಗಂತ ಸುದ್ದಿ ದಟ್ಟವಾಗಿ ಹಬ್ಬಿದೆ. ವಿಷಯವೇನೆಂದರೆ, ಸುದೀಪ್ ನಿರ್ದೇಶಿಸಿ ನಾಯಕನಾಗಿ ನಟಿಸಲಿರುವ ಹೊಸ ಚಿತ್ರದಲ್ಲಿ ಸುದೀಪ್‌ನ ತಂದೆಯ ಪಾತ್ರದಲ್ಲಿ ಕಾಣಿಸಿಕೊಳ್ಳಲು ರವಿಚಂದ್ರನ್ ಒಪ್ಪಿಕೊಂಡಿದ್ದಾರಂತೆ. ಇದು ಗಾಂಧಿನಗರದ ಮಟ್ಟಿಗೆ ಖಂಡಿತವಾಗಿಯೂ ದೊಡ್ಡ ಸುದ್ದಿ. ಕಳೆದ 30 ವರ್ಷಗಳಿಂದ ಕರ್ನಾಟಕದ ಸಿನಿಮಾ ಪ್ರೇಕ್ಷಕರಿಗೆ ಪ್ರೇಮದ ಪಾಠ ಹೇಳಿ ಕೊಡುತ್ತಿದ್ದ ಪ್ರೇಮಲೋಕದ ಸರದಾರ ರವಿಚಂದ್ರನ್ ತಮ್ಮೆಲ್ಲ ಚಿತ್ರಗಳಲ್ಲಿ ಪ್ರೇಮಿಯ ಪಾತ್ರವನ್ನು ಹೊರತುಪಡಿಸಿ ಬೇರೆ ತರಹದ ಪಾತ್ರಗಳನ್ನು ನಿರ್ವಹಿಸಿದ್ದೇ ಇಲ್ಲ. ಆದರೆ ಈಗ ರವಿಚಂದ್ರನ್ ಮಾಗಿದ್ದಾರೆ. ಅವರ ದಢೂತಿ ದೇಹ ಈಗ ಪ್ರೇಮಿಯ ಪಾತ್ರಕ್ಕೆ ಹೊಂದುತ್ತಿಲ್ಲ, ಮುಖದಲ್ಲೂ ಹಿ ಚಾರಿಷ್ಮ ಮತ್ತು ಲವಲವಿಕೆ ಇಲ್ಲ. ಬಹುಶಃ ಈ ಕಾರಣಗಳಿಂದ ರವಿಚಂದ್ರನ್‌ಗೆ ತಂದೆಯಾಗಿ ಬಡ್ತಿ ಪಡೆಯು ಅನಿವಾರ್ಯವೂ ಆಗಿತ್ತು, ಚಿತ್ರರಂಗದ ಅಲಿಖಿತ ಕಾನೂನಿನ ಎಲ್ಲಾ ಮಾಜಿ ಹೀರೋಗಳು ಒಂದಿಲ್ಲೊಂದು ದಿನ ನಟನಟಿಯರ ತಂದೆಯಾಗಿ ಕಾಣಿಸಲೇಬೇಕು. ಅ ಕಾಲಘಟ್ಟದಲ್ಲಿ ಇರುವ ರವಿಚಂದ್ರನ್ ಈಗ ನಾಯಕನ ತಂದೆ ಕಾಣಿಸುತ್ತಿರುವುದು ವಿಶೇಷವಲ್ಲದಿದ್ದರೂ ಗಮನಾರ್ಹವಾ



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 2667643
Fax : 26604536, E-mail :lankesh70@rediffmail